# ರಂಗಸಂಪನ್ನರು



## ಸಿ.ಜಿ. ಕೃಷ್ಣಸ್ವಾಮಿ

• ಪ್ರೊ|| ಲಿಂಗದೇವರು ಹಳೆಮನೆ

ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು

ರಂಗಸಂಪನ್ನರು ಮಾಲಿಕೆ

# ಸಿ.ಜಿ. ಕೃಷ್ಣಸ್ವಾಮಿ

(ಕೃತಿಕಾರ-ಕೃತಿ ಪರಿಚಯ)

*ಪ್ರೊ|| ಲಿಂಗದೇವರು ಹಳೆಮನೆ*

ಕರ್ನಾಟಕ ನಾಟಕ ಅಕಾಡೆಮಿ

ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨

**C.G. KRISHNASWAMY :** A Monograph in Kannada by Prof. Lingadevaru Halemane, Mysore; Published by Registrar, Karnataka Nataka Academy, Bangalore

ಪ್ರಥಮ ಮುದ್ರಣ : ೨೦೦೪ ಪುಟಗಳು : vi + ೯೮ + ೮

ಬೆಲೆ : ರೂ. ೪೦/-

ಹಕ್ಕುಗಳು : ಲೇಖಕರದು

ಪ್ರಕಾಶಕರು :
ಆರ್.ಎಸ್. ದಳವಾಯಿ
ರಿಜಿಸ್ಟ್ರಾರ್
ಕರ್ನಾಟಕ ನಾಟಕ ಅಕಾಡೆಮಿ
ಬೆಂಗಳೂರು

ಮುಖಪುಟ ವಿನ್ಯಾಸ : ಎಚ್.ಕೆ. ದ್ವಾರಕನಾಥ್ (ದ್ವಾರಕಿ, ರಂಗಾಯಣ)

**ಪ್ರಕಟಣಾ ಸಮಿತಿ**

ಎಚ್.ಜಿ. ಸೋಮಶೇಖರ ರಾವ್
ಎಚ್.ಆರ್. ಸ್ವಾಮಿ
ತೊ. ನಂಜುಂಡಸ್ವಾಮಿ
ಶಶಿಧರ ಭಾರಿಘಾಟ್
ಕೆ. ಮುದ್ದುಕೃಷ್ಣ
ಮಲ್ಲಿಕಾರ್ಜುನ ಕಡಕೋಳ

ಮುದ್ರಣ
ಇಳಾ ಮುದ್ರಣ
ನಂ. ೩೬, ೪೦ ಅಡಿ ರಸ್ತೆ, ರಾಘವನಗರ
ನ್ಯೂ ಟಿಂಬರ್‌ಯಾರ್ಡ್ ಲೇಔಟ್, ಬೆಂಗಳೂರು - ೫೬೦ ೦೨೬, ✆ : ೨೬೭೫೬೭೫೯

# ಅಧ್ಯಕ್ಷರ ನುಡಿ

ಕರ್ನಾಟಕ ನಾಟಕ ಅಕಾಡೆಮಿಯ ಭೂತಪೂರ್ವ ಅಧ್ಯಕ್ಷರಾಗಿದ್ದ ಪ್ರೊ॥ ಸಿ.ಜಿ. ಕೃಷ್ಣಸ್ವಾಮಿ ಅವರು ತಮ್ಮ ಅವಧಿಯಲ್ಲಿ ಪ್ರಾರಂಭಿಸಿದ ಅನೇಕ ಪ್ರಮುಖ ಕಾರ್ಯಕ್ರಮಗಳಲ್ಲಿ ಒಂದು 'ರಂಗಸಂಪನ್ನರು' ಪುಸ್ತಕ ಮಾಲಿಕೆಯ ಪ್ರಕಟಣೆ. ಇದರ ಮಹತ್ವ ಹಾಗೂ ಉಪಯುಕ್ತತೆಯನ್ನು ಮನಗಂಡು 'ರಂಗಸಂಪನ್ನರು' ಮಾಲಿಕೆಯನ್ನು ಈ ಅಕಾಡೆಮಿಯೂ ಮುಂದುವರಿಸುತ್ತಿದೆ. ಕರ್ನಾಟಕ ನಾಟಕ ಅಕಾಡೆಮಿಯ ಪ್ರಪ್ರಥಮ ಅಧ್ಯಕ್ಷರಾದ ಶ್ರೀ ಗಿರೀಶ್ ಕಾರ್ನಾಡರಿಂದ ಮೊದಲುಗೊಂಡು ಕಳೆದ ಅಕಾಡೆಮಿಯ ಅಧ್ಯಕ್ಷರಾದ ಪ್ರೊ॥ಸಿ.ಜಿ. ಕೃಷ್ಣಸ್ವಾಮಿಯವರವರೆವಿಗೂ ಆಗಿ ಬಂದ ಎಲ್ಲ ಅಧ್ಯಕ್ಷರುಗಳು ಪರಿಚಯ ಕೃತಿಯನ್ನು (ಈಗಾಗಲೇ ಹಿಂದಿನ ಅಕಾಡೆಮಿ ಹೊರತಂದಿರುವ ನಾಟಕ ಅಕಾಡೆಮಿ ಅಧ್ಯಕ್ಷರುಗಳನ್ನು ಹೊರತುಪಡಿಸಿ) ನಾಡಿನ ಪ್ರಸಿದ್ಧ ರಂಗ ಚಿಂತಕರುಗಳ ಮೂಲಕ ಸಿದ್ಧಗೊಳಿಸಿ ಹೊರತರುವ ಕಾರ್ಯ ಈ ಪುಸ್ತಕ ಮಾಲಿಕೆಯಡಿ ಹಮ್ಮಿಕೊಂಡಿದ್ದೇವೆ. ಈ ಪ್ರಕಟಣಾ ಕಾರ್ಯದಲ್ಲಿ ನೆರವಾದ ಅಕಾಡೆಮಿಯ ಎಲ್ಲ ಗೌರವಾನ್ವಿತ ಸದಸ್ಯರಿಗೆ ಕೃತಜ್ಞತೆಗಳು.

ಪ್ರೊ॥ ಸಿ.ಜಿ. ಕೃಷ್ಣಸ್ವಾಮಿ ಅವರು ೧೯೯೮ ರಿಂದ ೨೦೦೧ರ ಅವಧಿಯಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿದ್ದು, ಇವರ ಅವಧಿಯಲ್ಲಿ ಹತ್ತು ಹಲವು ಹೊಸ ಚೇತೋಹಾರಿ ರಂಗಚಟುವಟಿಕೆಗಳು ನಾಡಿನಾದ್ಯಂತ ನಡೆದವು. ಆಧುನಿಕ ಕನ್ನಡ ರಂಗಭೂಮಿಯ ಉತ್ಕರ್ಷಕ್ಕೆ ಈ ಕಾರ್ಯಕ್ರಮಗಳು ಬಹಳವಾಗಿ ಕಾರಣವಾದವು. ಇವರ ಕಾರ್ಯಕ್ರಮಗಳಲ್ಲಿ ಒಂದು ರೀತಿಯ ಸಡಗರ, ಸಂಭ್ರಮ ಎದ್ದುಕಾಣಿಸುತ್ತಿದ್ದವು. ಇವರೆಲ್ಲ ಕಾರ್ಯಕ್ರಮಗಳು ಯುವ ಪೀಳಿಗೆಯನ್ನು ರಂಗಭೂಮಿಯತ್ತ ಆಕರ್ಷಿಸುವ ರೀತಿಯಲ್ಲಿದ್ದವು. ಇವರ ಅವಧಿಯಲ್ಲಿ ಪ್ರಾರಂಭಗೊಂಡ ರಂಗಸಂಪನ್ನರು ಪುಸ್ತಕ ಮಾಲಿಕೆ ಒಂದು ಉತ್ತಮ ದಾಖಲಾತಿ. ಸಿ.ಜಿ. ಕೃಷ್ಣಸ್ವಾಮಿ ತಮ್ಮ ನಾಟಕ ಪ್ರಯೋಗಗಳಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿನ ಮಹತ್ವದ ಕಥೆ-ಕಾದಂಬರಿ, ಕಾವ್ಯವನ್ನು ಅಳವಡಿಸಿಕೊಂಡು ಯಶಸ್ವಿ ರಂಗ ಪ್ರಯೋಗಗಳನ್ನು ನೀಡಿದ್ದು, ರಂಗಭೂಮಿ ಹಾಗೂ ಸಾಹಿತ್ಯ ಕ್ಷೇತ್ರ ಒಂದಕ್ಕೊಂದು ಬೆಸೆದುಕೊಳ್ಳಲು ಸಹಾಯಕವಾಯಿತು. ಆಧುನಿಕ, ಬಂಡಾಯ ಸಾಹಿತ್ಯ ಕೃತಿಯಿಂದಲ್ಲದೆ, ಸಂಸ, ಕನಕರವರೆವಿಗೂ ಪ್ರಯೋಗ ಮಾಡಿದ ಪ್ರೊ॥ ಸಿ.ಜಿ. ಕೃಷ್ಣಸ್ವಾಮಿ ಅವರು ಇತ್ತೀಚೆಗೆ ಪ್ರಾಚೀನ ಸಾಹಿತ್ಯ ಕ್ಷೇತ್ರದತ್ತಲೂ ಕೈಚಾಚಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಿಶೇಷ ಯೋಜನೆಯಡಿಯಲ್ಲಿ ಪಂಪನ ಕಾವ್ಯಗಳನ್ನು ಆಧರಿಸಿ ಹನ್ನೆರಡು ಜನ ಯುವ ನಾಟಕಕಾರರ ಮೂಲಕ ಹನ್ನೆರಡು ನಾಟಕಗಳನ್ನು ಸಿದ್ಧಗೊಳಿಸಿರುತ್ತಾರೆ. ಪಂಪನ ಆದಿಪುರಾಣ ಹಾಗೂ ವಿಕ್ರಮಾರ್ಜುನ ವಿಜಯ (ಪಂಪನ ಭಾರತ)

ಮೇರು ಕೃತಿಗಳ ಪುಟಪುಟದಲ್ಲಿಯೂ ನಾಟಕೀಯ ಅಂಶಗಳು, ಮಹಾನ್ ಪಾತ್ರಗಳ ಮುಖಾಮುಖಿ ಯಥೇಚ್ಛವಾಗಿ ಇರುವುದನ್ನು ಪ್ರೊ॥ ಸಿ.ಜಿ. ಕೃಷ್ಣಸ್ವಾಮಿ ಅವರು ಬಹಳ ಪರಿಣಾಮಕಾರಿಯಾಗಿ ಉಪಯೋಗಿಸಿಕೊಂಡು ಯುವ ಬರಹಗಾರರ ಮೂಲಕ ನಾಟಕ ಕೃತಿಗಳನ್ನು ರಚಿಸಲು ಕಾರಣರಾಗಿದ್ದಾರೆ. ಇವು ರಂಗದ ಮೇಲೂ ಪರಿಣಾಮಕಾರಿಯಾಗಿ ಮೂಡುವ ಭರವಸೆಯನ್ನು ನೀಡಿವೆ. ಹೀಗೆ ಸಾಹಿತ್ಯ ಕೃತಿಗಳಿಗೆ ರಂಗರೂಪ ನೀಡುವ ಇವರ ಪ್ರಯೋಗಶೀಲತೆ ಅಭಿನಂದನಾರ್ಹ. ಜೊತೆಗೆ ಯುವ ನಿರ್ದೇಶಕರನ್ನು, ಬರಹಗಾರರನ್ನು ಈ ಕಾರ್ಯದಲ್ಲಿ ಅವರು ಬಳಸಿಕೊಂಡಿರುವ ರೀತಿ ನಾಟಕ ಕ್ಷೇತ್ರದ ಬೆಳವಣಿಗೆಗೆ ಪೂರಕವಾಗಿದೆ. ಕನ್ನಡ ರಂಗಭೂಮಿಯ ವರ್ತುಲವನ್ನು ವಿಸ್ತರಿಸುವಲ್ಲಿ ಪ್ರೊ॥ ಸಿ.ಜಿ. ಕೃಷ್ಣಸ್ವಾಮಿ ಅವರ ಕೊಡುಗೆ ವಿಶಿಷ್ಟವಾದುದು.

ಪ್ರೊ॥ ಸಿ.ಜಿ. ಕೃಷ್ಣಸ್ವಾಮಿ ಅವರ ವ್ಯಕ್ತಿತ್ವ, ಸಾಧನೆ, ಸಿದ್ಧಿಯ ಚಿತ್ರಣವನ್ನು ಅವರ ನಿಕಟ ಒಡನಾಟ ಇರುವ ಪ್ರೊ॥ ಲಿಂಗದೇವರು ಹಳೆಮನೆ ಅವರು ರಚಿಸಿಕೊಟ್ಟಿದ್ದಾರೆ. ರಂಗಾಸಕ್ತರಿಗೆ ಸ್ಫೂರ್ತಿದಾಯಕವಾದ ಸಿ.ಜಿ. ಕೃಷ್ಣಸ್ವಾಮಿ ಅವರ ಕುರಿತ ಈ ಪುಸ್ತಕವನ್ನು 'ರಂಗಸಂಪನ್ನರು' ಮಾಲಿಕೆಯಡಿ ತರಲು ಸಿದ್ಧಮಾಡಿಕೊಟ್ಟ ಪ್ರೊ॥ ಲಿಂಗದೇವರು ಹಳೆಮನೆ ಅವರಿಗೂ, ತಮ್ಮ ಸಾಧನೆಯ ಚಿತ್ರಣವನ್ನು ಬಿಂಬಿಸಲು ಒಪ್ಪಿಗೆ ನೀಡಿದ ಸಿ.ಜಿ.ಕೃಷ್ಣಸ್ವಾಮಿ ಅವರಿಗೂ ಕೃತಜ್ಞತೆಗಳು.

ಈ ಕೃತಿಯ ಸಿದ್ಧತೆಯಲ್ಲಿ ವಿಶೇಷವಾಗಿ ನೆರವಾದ ಪ್ರೊ॥ ಸಂಪಿಗೆ ತೋಂಟದಾರ್ಯ ಹಾಗೂ ಗೆಳೆಯ ಶ್ರೀ ಶಶಿಧರ ಭಾರಿಘಾಟ್ ಅವರಿಗೂ, ಪ್ರಕಟಣಾ ಸಮಿತಿಯ ಎಲ್ಲಾ ಸದಸ್ಯರಿಗೂ, ಅಕಾಡೆಮಿಯ ರಿಜಿಸ್ಟ್ರಾರ್ ಆದ ಶ್ರೀ ಆರ್.ಎಸ್. ದಳವಾಯಿ ಅವರಿಗೂ ಮತ್ತು ಸಿಬ್ಬಂದಿ ವರ್ಗಕ್ಕೂ ಧನ್ಯವಾದಗಳು. ಈ ಕೃತಿಯನ್ನು ಅತ್ಯಲ್ಪ ಕಾಲಾವಧಿಯಲ್ಲಿ ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಇಳಾ ಪ್ರಿಂಟರ್ಸ್, ಬೆಂಗಳೂರು ಇವರಿಗೆ ಅಕಾಡೆಮಿ ಆಭಾರಿ.

*ಆರ್. ನಾಗೇಶ್*
*ಅಧ್ಯಕ್ಷರು*
*ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು*

# ಲೇಖಕನ ಮಾತು

ಆತ್ಮೀಯ ಗೆಳೆಯನೊಬ್ಬನ ಬಗ್ಗೆ ಬರೆಯುವುದು ಕಷ್ಟ; ಬರೆಯದೇ ಇರುವುದೂ ಕಷ್ಟ. ಸಿಜಿಕೆ ಬಗ್ಗೆ ನಾನು ಬರೆಯಲು ಹೊರಟಾಗ ಈ ಕಷ್ಟಗಳನ್ನು ಕಂಡಿದ್ದೇನೆ. ನಮ್ಮ ಒಡನಾಟಗಳಲ್ಲಿ ವರ್ತಮಾನದ ಕ್ರಿಯೆಗಳಿಗಷ್ಟೇ ಕಣ್ಣು, ಕಿವಿ ಕೊಡುತ್ತಿರುತ್ತೇವೆ. ವರ್ತಮಾನದ ಸಾಧನೆಗಳ ಮೂಲಕ ವ್ಯಕ್ತಿಯೊಬ್ಬನ ಎತ್ತರ, ಬಿತ್ತರಗಳನ್ನು ಅಳೆಯುವ ಪ್ರಯತ್ನ ಮಾಡುತ್ತೇವೆ. ಈ ಪುಟ್ಟ ಪುಸ್ತಕದಲ್ಲಿ ಸಿಜಿಕೆಯನ್ನು ನಾನು ಪರಿಚಯಿಸಿರುವುದು ಈ ಹಿನ್ನೆಲೆಯಲ್ಲಿ.

ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾದ ಆರ್. ನಾಗೇಶ್ ಅವರು ಸಿಜಿಕೆಯ ಬಗ್ಗೆ ಬರೆಯಬೇಕೆಂದು ಒತ್ತಾಯಪೂರ್ವಕವಾಗಿ ಕೇಳಿದ್ದರಿಂದ ಈ ಪುಸ್ತಕ ಬರೆಯಲು ಸಾಧ್ಯವಾಯಿತು. ಈ ಪುಸ್ತಕ ಬರೆಯಲು ಸಹಕರಿಸಿದ ಗೆಳೆಯ ಸಿಜಿಕೆಗೆ ನನ್ನ ಪ್ರಥಮ ವಂದನೆಗಳು. ನನ್ನ ಹಸ್ತಪ್ರತಿಯನ್ನು ಪರಿಶೀಲಿಸಿ ಅದರಲ್ಲಿ ಇದ್ದಿರಬಹುದಾದ ಓರೆಕೋರೆಗಳನ್ನು ಸರಿಪಡಿಸಿ ಪ್ರಸ್ತುತ ಸ್ವರೂಪದಲ್ಲಿ ಅದು ಹೊರಬರಲಿಕ್ಕೆ ಅವರು ಕಾರಣರಾಗಿದ್ದಾರೆ. ಅಕಸ್ಮಾತ್ ಈ ಪುಸ್ತಕ ದಲ್ಲೇನಾದರೂ ವಾಸ್ತವ ತಪ್ಪುಗಳು ಉಳಿದಿದ್ದರೆ, ಅದಕ್ಕೆ ನನ್ನಷ್ಟೇ ಸಿಜಿಕೆಯೂ ಕಾರಣ ಎಂದು ವಿನಮ್ರವಾಗಿ ತಿಳಿಸಬಯಸುತ್ತೇವೆ.

ನಾಟಕ ಅಕಾಡೆಮಿಯಿಂದ ಈ ಪುಸ್ತಕವನ್ನು ಬರೆಯಿಸಿದ ಅದರ ಅಧ್ಯಕ್ಷರಾದ ಆರ್. ನಾಗೇಶ್ ಅವರಿಗೆ, ಅಕಾಡೆಮಿಯ ರಿಜಿಸ್ಟ್ರಾರ್ ಆರ್.ಎಸ್. ದಳವಾಯಿ ಅವರಿಗೆ ನನ್ನ ಕೃತಜ್ಞತೆಗಳು. ಹಸ್ತಪ್ರತಿಯನ್ನು ಡಿ.ಟಿ.ಪಿ. ಮೂಲಕ ವಿನ್ಯಾಸಗೊಳಿಸಿದ ಗೆಳೆಯ ಬಿ.ಆರ್. ರವೀಶ್ ಅವರಿಗೂ ನನ್ನ ಕೃತಜ್ಞತೆಗಳು.

*- ಲಿಂಗದೇವರು ಹಳೆಮನೆ*

ಮೈಸೂರು

# ಅಧ್ಯಾಯ - ೧

## ಪೀಠಿಕೆ

ಸಿ. ಜಿ. ಕೆ. – ಕೃಷ್ಣಸ್ವಾಮಿ ಆಧುನಿಕ ಕನ್ನಡ ರಂಗಭೂಮಿಯ ಖ್ಯಾತ ರಂಗ ನಿರ್ದೇಶಕರು. ರಂಗ ಸಂಘಟಕರಾಗಿ, ರಂಗ ನಿರ್ದೇಶಕರಾಗಿ, ಬೆಳಕಿನ ವಿನ್ಯಾಸಕಾರರಾಗಿ ಹಾಗೂ ಪ್ರಗತಿಪರ ಚಿಂತಕರಾಗಿ ವಿಶಿಷ್ಟ ಸ್ಥಾನ, ಮಾನ ಗಳಿಸಿಕೊಂಡಿದ್ದಾರೆ. ಯಾವುದೇ ಶಾಸ್ತ್ರೀಯ ರಂಗತರಬೇತಿ,ಔಪಚಾರಿಕ ಅಧ್ಯಯನ ಇಲ್ಲದೆ, ಸ್ವಂತ ಪ್ರತಿಭೆ, ಪರಿಶ್ರಮ ಮತ್ತು ಕಲ್ಪಕತೆಗಳ ಮೇಲೆ ತಮ್ಮ ವ್ಯಕ್ತಿತ್ವವನ್ನು ರೂಢಿಸಿಕೊಂಡವರು. ಅವರದು ಏಕಲವ್ಯ ಪ್ರತಿಭೆ. ಕನ್ನಡ ರಂಗಭೂಮಿಯ 'ಸಬಾಲ್ಟನ್ ಸಂಸ್ಕೃತಿಯ ಶೋಧಕ'ಎಂದು ಅವರನ್ನು ಕರೆಯುವುದೇ ಸೂಕ್ತ ಎನಿಸುತ್ತದೆ. ಈ ಕೃತಿ ಅತ್ಯಂತ ಸರಳವಾಗಿ ಅವರನ್ನು ಮತ್ತು ಅವರ ಸಾಧನೆಯನ್ನು ಪರಿಚಯಿಸುತ್ತದೆ.

## ಪೂರ್ವರಂಗ

### ೧. ಹುಟ್ಟಿನ ಹಿನ್ನೆಲೆ.

ಸಿ. ಜಿ. ಕೆ. ಯ ಪೂರ್ಣ ಹೆಸರು ಚಳ್ಳಕೆರೆ ಗೋವಿಂದನಾಯ್ಕ ಕೃಷ್ಣಸ್ವಾಮಿ. ಅವರ ಸ್ವಂತ ಊರು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ. ತಂದೆ ಗೋವಿಂದನಾಯ್ಕ, ತಾಯಿ ತಿಮ್ಮಾಜಮ್ಮ. ತಂದೆ ಗೋವಿಂದನಾಯ್ಕ ಆಗಿನ ಕಾಲಕ್ಕೆ ಎಲ್. ಎಸ್. ವರೆಗೆ ವಿದ್ಯಾಭ್ಯಾಸ ಮಾಡಿದ್ದರು. ಆದರೆ ಎಲ್. ಎಸ್. ಪಾಸಾಗಿರಲಿಲ್ಲ. ಅವರಿಗೆ ಕೃಷಿಯ ಬಗ್ಗೆ ವಿಶೇಷ ಆಸಕ್ತಿ. ಅದರ ಬಗ್ಗೆ ಸಾಕಷ್ಟು ಮಾಹಿತಿ ಪಡೆದುಕೊಂಡಿದ್ದರು. ಕೃಷಿ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು. ಅವರು ಮಂಡ್ಯಾದಲ್ಲಿ ಕೃಷಿ ಸಹಾಯಕರಾಗಿ

ಕೆಲಸ ಮಾಡುತ್ತಿದ್ದಾಗ ಸಿ. ಜಿ. ಕೆ. ಜನಿಸಿದ್ದು. ಸಿ. ಜಿ. ಕೆ. ಯ ತಾತ ಅಂದರೆ, ಗೋವಿಂದನಾಯ್ಕರ ತಂದೆ ಸಿರುವಲ್ ನಾಯ್ಕ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದರು. ತಮ್ಮ ನಿಷ್ಠಾವಂತ ಸೇವೆಯಿಂದಾಗಿ ಚಳ್ಳಕೆರೆ ಸುತ್ತ ಮುತ್ತ ಒಳ್ಳೆಯ ಹೆಸರು ಸಂಪಾದಿಸಿದ್ದರು. ಹೀಗೆ ಮನೆತನದಲ್ಲಿ ಹಿಂದಿನಿಂದಲೂ ವಿದ್ಯಾಭ್ಯಾಸದ ಹಿನ್ನೆಲೆ ಕೊಂಚ ಒದಗಿ ಬಂದಿತ್ತು. ತಾತ, ತಂದೆಯ ಹೆಸರು 'ನಾಯ್ಕ'ಎಂದಿರುವಾಗ ಇವರ ಹೆಸರು ಯಾಕೆ ಕೃಷ್ಣಸ್ವಾಮಿ? ಎಂಬ ಕುತೂಹಲ ಬರುವುದು ಸಹಜ. ಈ ಕುತೂಹಲ ನಮಗಷ್ಟೇ ಅಲ್ಲ, ಕೃಷ್ಣಸ್ವಾಮಿಗೂ ಒಮ್ಮೆ ಬಂದಿತ್ತಂತೆ. ''ನನ್ನ ಹೆಸರಿನ ಮುಂದೆ ಯಾಕೆ 'ನಾಯ್ಕ್' ಎಂದು ಸೇರಿಸಲಿಲ್ಲ?''ಎಂದು ಒಮ್ಮೆ ಅವರು ತಮ್ಮ ತಂದೆಯನ್ನು ಕೇಳಿದರಂತೆ. ಆಗ ಅವರು ತಮಗಾದ ಅನುಭವವನ್ನು ಹೇಳುತ್ತಾ''ನನ್ನ ಮುಂದೆ ನಾಯ್ಕ್ ಎಂದಿದ್ದದ್ದಕ್ಕೇ ನಾನು ಎಲ್. ಎಸ್. ಫೇಲಾಗಿದ್ದು . ಹಾಗೆಯೇ ಕಾರ್ಖಾನೆಯಲ್ಲಿ ನನ್ನನ್ನು ಯಾವ ಪ್ರಮೋಷನ್‌ಗೂ ಪರಿಗಣಿಸದೆ ಮೂಲೆಗೆ ತಳ್ಳಿದರು. ಹೀಗಾಗಿ ನಾನು ನಿನ್ನ ಹೆಸರಿನ ಮುಂದೆ 'ನಾಯ್ಕ್'ಎಂದು ಸೇರಿಸಲಿಲ್ಲ,''ಎಂದರಂತೆ. ಹೀಗೆ 'ನಾಯ್ಕ್'ಆಗಬೇಕಿದ್ದ ಸಿ. ಜಿ. ಕೆ. 'ಸ್ವಾಮಿ'ಆದರು. ಹೆಸರಿನಲ್ಲೇನಿದೆ ಎಂದು ಈಗ ' ಕೇಳುವವರಿದ್ದಾರೆ. ಆದರೆ ಒಂದು ಕಾಲಕ್ಕೆ ಈ ಸಮಾಜ ವ್ಯಕ್ತಿಯ ಹಣೆಬರಹವನ್ನು ಹೆಸರಿನ ಮೇಲೆ ನಿರ್ಧರಿಸುತ್ತಿತ್ತು.

ತಂದೆ ಗೋವಿಂದನಾಯ್ಕ ಅತ್ಯಂತ ನಿಷ್ಠುರದ ವ್ಯಕ್ತಿ. ಶಿಸ್ತು ಬದ್ಧ ಜೀವನಕ್ಕೆ ಹೆಸರಾದವರು. ಮಂಡ್ಯಾದ ರೈತರಿಗೆ ಕಬ್ಬು ಬೆಳೆಯಲು ಸೂಕ್ತ ಮಾರ್ಗದರ್ಶನ ನೀಡುತ್ತಿದ್ದರು. ಪ್ರಾಮಾಣಿಕ ವ್ಯಕ್ತಿಯಾಗಿದ್ದರಿಂದ ಮಂಡ್ಯಾದ ರೈತರ ಗಾಢ ಪ್ರೀತಿಗೆ ಪಾತ್ರರಾಗಿದ್ದರು.

ಸಿ. ಜಿ. ಕೆ. ಹುಟ್ಟಿದ್ದು 1950 ರ ಜೂನ್ 27ರಂದು. ಐದು ಜನ ಅಕ್ಕಂದಿರ ನಂತರ ಹುಟ್ಟಿದ ಮಗು. ಐದು ಜನ ಹೆಣ್ಣು ಮಕ್ಕಳು ಅನಂತರ ಗಂಡು ಮಗು ಹುಟ್ಟಿತೆಂದರೆ ಕೇಳಬೇಕೆ? ಗಂಡು ಸಂತಾನಕ್ಕಾಗಿ ಹಾತೊರೆಯುವ ಈ ಸಮಾಜದಲ್ಲಿ ಐದು ಹೆಣ್ಣುಮಕ್ಕಳ ನಂತರ ಒಬ್ಬ ಮಗ ಹುಟ್ಟಿದ್ದು ಸಹಜವಾಗಿ ಎಲ್ಲರಿಗೂ ಸಂತಸ ತಂದಿತ್ತು. ಮನೆಯಲ್ಲಿರುವ ಪ್ರತಿಯೊಬ್ಬರ ಕಣ್ಣುಗೊಂಬೆಯಾಗಿ ಕೃಷ್ಣ ಬೆಳೆಯತೊಡಗಿದ. ಎಲ್ಲರಿಗೂ ಮಗುವಿನ ಮೇಲೆ ವಿಶೇಷ ಅಕ್ಕರೆ, ಪ್ರೀತಿ. ಆದರೆ ಈ ಸಡಗರ, ನಲಿವುಗಳು ಬಹಳ ದಿನ ಉಳಿಯಲಿಲ್ಲ. ಮೂರು ವರ್ಷದ ಮಗುವಾಗಿದ್ದಾಗ ಪೋಲಿಯೋ ರೋಗಕ್ಕೆ ತುತ್ತಾಗಿ ಕೃಷ್ಣನ ಎರಡೂ ಕಾಲುಗಳೂ ಊನವಾದವು. ತಂದೆ

ತಾಯಿಗಳ ಅಜ್ಞಾನ, ಆಗಿನ ಕಾಲದಲ್ಲಿ ಈಗ ಇರುವ ಹಾಗೆ ವೈದ್ಯಕೀಯ ಸೌಲಭ್ಯಗಳು ಇಲ್ಲದಿದ್ದುದು ಇವೆಲ್ಲಾ ಸೇರಿ ಹುಡುಗನ ಕಾಲುಗಳನ್ನು ಬಲಿ ತೆಗೆದುಕೊಂಡಿದ್ದವು. ತಂದೆ ತಾಯಿಗಳಿಗೆ ದಿಕ್ಕೇ ತೋಚದಂತಾಯಿತು. ಆದರೂ ಹೆತ್ತವರು ಸುಮ್ಮನಿರುವಂತಿಲ್ಲ. ಮಾವ ವೀರಣ್ಣ ಪೋಲಿಯೋಗೆ ತುತ್ತಾದ ಮಗುವನ್ನು ಹೆಗಲ ಮೇಲೆ ಹಾಕಿಕೊಂಡು ಕಂಡ ಕಂಡ ಆಸ್ಪತ್ರೆ ಸುತ್ತಿದರು. ಜೊತೆಯಲ್ಲಿ ಅಪ್ಪ, ಅಮ್ಮ. ಎಷ್ಟು ಆಸ್ಪತ್ರೆ ಸುತ್ತಿದರೂ ಉಪಯೋಗ ಆಗಲಿಲ್ಲ. ಅವರಿವರ ಮಾತು ಕೇಳಿ ನಾಟಿ ಔಷಧಿ ಚಿಕಿತ್ಸೆ ಮಾಡಿಸಿದರು. ಅದರ ಫಲಿತಾಂಶವೂ ಶೂನ್ಯ. ಕಡೆಗೆ ಯಾರೋ ಹೇಳಿದರು, ಮೈಸೂರಿನ ಮಿಷನ್ ಆಸ್ಪತ್ರೆಯಲ್ಲಿ ಪ್ರಯತ್ನಿಸಿ ಎಂದು. ಹೆತ್ತ ಕರುಳು ಹೊತ್ತು ಧಾವಿಸಿತು ಮಗನನ್ನು ಕಾಪಾಡಲಿರುವ ವೈದ್ಯರೆಡೆಗೆ. ಮಗನ ಕಾಲು ಸರಿಹೋಗಬಹುದೆಂಬ ಆಸೆಯಿಂದ ತಾಯಿ ತಿಮ್ಮಾಜಮ್ಮ ಡಾ. ಟೋವಿ ಎದುರು ಮಗನನ್ನು ಹೊತ್ತು ತಂದಿದ್ದರು.

## ೨. ಹೋಪ್‌ವಾರ್ಡ್‌ನ ಡಾ. ಟೋವಿ.

ಮೈಸೂರಿನ ಮಿಷನ್ ಆಸ್ಪತ್ರೆಯಲ್ಲಿ ಆಗ ಇದ್ದ ಪ್ರಧಾನ ವೈದ್ಯರ ಹೆಸರು ಡಾ. ಟೋವಿ. ಅವರು ಎರಡನೇ ಮಹಾಯುದ್ಧದಲ್ಲಿ ಚೀನಾದಲ್ಲಿ ಸಕ್ರಿಯ ಸೇವೆ ಸಲ್ಲಿಸಿದ್ದವರು. ಅನಂತರ ಮೈಸೂರಿನಲ್ಲಿ ಕ್ರೈಸ್ತ ಮಿಷನರಿಗಳು ಸ್ಥಾಪಿಸಿದ್ದ ಆಸ್ಪತ್ರೆಯಲ್ಲಿ ಬಡವರ ಶುಶ್ರೂಷೆ ಮಾಡಿಕೊಂಡಿದ್ದರು. ''ಎತ್ತರದ ನಿಲುವು, ಬಿಳಿ ಬಣ್ಣ, ರಕ್ತ ತುಂಬಿದ ಕೆನ್ನೆ , ನೀಲಿ ಕಣ್ಣುಗಳು, ಕೂದಲೆಳೆಯೂ ಅಲ್ಲಾಡದಂತೆ ತಿದ್ದಿ ಬಾಚಿದ ಕ್ರಾಪು, ಒಪ್ಪುವ ಕನ್ನಡಕ, ಬಿಳಿಯ ಏಪ್ರಾನ್, ಸ್ಟೆತಾಸ್ಕೋಪ್'' ಇದು ಡಾ. ಟೋವಿ. ಇಂಥ ಡಾಕ್ಟರ ಎದುರು ನಿಂತ ತಿಮ್ಮಾಜಮ್ಮ ಅವರ ಕಾಲಿಗೆ ಬಿದ್ದು ''ನನ್ನ ಮಗನ ಕಾಲು ಉಳಿಸಿ'' ಎಂದರು. ಅವರ ಪಕ್ಕದಲ್ಲಿದ್ದ ಬಾಲಕ ಕೃಷ್ಣನ ಕಣ್ಣಲ್ಲಿ ನೀರು.

ಡಾ. ಟೋವಿ ನಗುತ್ತಾ ತಮ್ಮ ತೊಡೆಯ ಮೇಲೆ ಬಾಲಕ ಕೃಷ್ಣನನ್ನು ಕೂರಿಸಿಕೊಂಡು ಎಡಗೈ ಉಗುರಿನಿಂದ ಅಂಗಾಲನ್ನು ಕೆರೆದರು. ಹುಡುಗ ಸರಕ್ಕನೆ ಕಾಲನ್ನು ಹಿಂದಕ್ಕೆ ಎಳೆದುಕೊಂಡ. ಡಾಕ್ಟರ್ ಜೋರಾಗಿ ನಕ್ಕು ಇಂಗ್ಲಿಷಿನಲ್ಲಿ ಏನೋ ಹೇಳಿದರು. ತಾಯಿ ಮಾತ್ರ ಪಿಳಿಪಿಳಿ ಕಣ್ಣು ಬಿಟ್ಟುಕೊಂಡು ಡಾಕ್ಟರನ್ನು ನೋಡುತ್ತಿದ್ದರು. ಪಕ್ಕದಲ್ಲಿದ್ದ ಮೇಟ್ರನ್, ''ಮಗುವಿಗೆ ಕಾಲು ಬರುತ್ತದೆ. ಇಂತಹ ದಿನ ಕರೆದುಕೊಂಡು ಬಂದು ಆಸ್ಪತ್ರೆಗೆ ಸೇರಿಸಬೇಕು'' ಎಂದಳು. ತಾಯಿಗೆ ಗಾಬರಿ. 'ಯಾಕೆ ಸೇರಿಸಬೇಕು?'' ಎಂಬುದು ತಾಯಿಯ ಪ್ರಶ್ನೆ. ''ಆಪರೇಷನ್ ಮಾಡಬೇಕು.'' ತಾಯಿಯ ತಲೆಯ ಮೇಲೆ ಆಸ್ಪತ್ರೆಯ

ಸೂರೇ ಕಳಚಿ ಬಿದ್ದಂತಾಯಿತು. 'ಆಪರೇಷನ್ 'ಎಂಬ ಪದ ಅವರನ್ನು ನಡುಗಿಸಿತ್ತು. ಗೋಳಿಡಲು ಆರಂಭಿಸಿದರು.

ಆಪರೇಷನ್ ಅಂದರೆ ಈಗಲೂ ಭಯ ತಪ್ಪಿಲ್ಲ. ಅಂಥಾದ್ದರಲ್ಲಿ ಆಗ ಆಪರೇಷನ್ ಅಂದಾಗ ತಾಯಿಯ ಮನಸ್ಸಿಗೆ ಭಯವಾಗಿದ್ದು ಸಹಜ. ಆಪರೇಷನ್ ಅಂದರೆ ಸಾವೇ ಖಚಿತ ಅಂದುಕೊಂಡ ದಿನಗಳು ಅವು. ತಾಯಿ ಬೇಡಿಕೊಳ್ಳದ ದೇವರುಗಳಿಲ್ಲ. ಹರಿಯೋ ನದಿ, ಹುಟ್ಟೋ ಸೂರ್ಯ, ಮುಳಗೋ ಸೂರ್ಯ, ಚಂದ್ರ, ನಕ್ಷತ್ರ, ದಾರಿಯಲ್ಲಿ ಸಿಕ್ಕುವ ದನ ಕರು, ಎಲ್ಲವಕ್ಕೂ ನಮಸ್ಕರಿಸಿ ತನ್ನ ಮಗನನ್ನು ಉಳಿಸಿಕೊಳ್ಳುವಂತೆ ಬೇಡಿಕೊಳ್ಳುತ್ತಿದ್ದರು.

ಅಂತೂ ಡಾಕ್ಟರ್ ನಿಗದಿಪಡಿಸಿದ್ದ ಆಪರೇಷನ್ ದಿನ ಬಂತು. ತಂದೆ, ತಾಯಿಯ ಆತಂಕದ ಮಧ್ಯೆ ಡಾ. ಟೋವಿ ಒಂದು ಕಾಲಿನ ಆಪರೇಷನ್ ಮಾಡಿದರು. ಅನಂತರ ಆಪರೇಷನ್ ಆದ ಕಾಲಿನ ಶುಶ್ರೂಷೆ. ಡಾ. ಟೋವಿ ಮತ್ತು ಅವರ ಪತ್ನಿ ಇಡೀ ಆಸ್ಪತ್ರೆಯಲ್ಲಿ ನೊಂದವರ ಆಶಾಕಿರಣಗಳಂತೆ ಇದ್ದರು. ಸದಾ ನಗುನಗುತ್ತಾ, ರೋಗಿಗಳ ಯೋಗಕ್ಷೇಮ ವಿಚಾರಿಸುತ್ತಾ ಸಾಂತ್ವನ ಹೇಳುತ್ತಿದ್ದರು. ತಂದೆ, ತಾಯಿಯ ಆತಂಕ ಮತ್ತು ವೈದ್ಯರ ಶುಶ್ರೂಷೆಯ ನಡುವೆ ಬಾಲಕ ಕೃಷ್ಣನ ಕಾಲು ನಿಧಾನವಾಗಿ ಗುಣವಾಗತೊಡಗಿತು. ಅಂತೂ ಕಡೆಗೊಂದು ದಿನ ಕಾಲಿನ ಬ್ಯಾಂಡೇಜ್ ಬಿಚ್ಚುವ ದಿನ ಬಂದೇ ಬಿಟ್ಟಿತು. ಆಸ್ಪತ್ರೆಯ ಸಿಬ್ಬಂದಿ ಡಾ. ಟೋವಿಯವರ ಮಾರ್ಗದರ್ಶದಲ್ಲಿ ಕಟ್ಟನ್ನು ಬಿಚ್ಚಿದರು. ಪೂರ್ತಿ ಕಟ್ಟು ಬಿಚ್ಚಿದ ಮೇಲೆ ಕಾಲಿನ ಬೆರಳುಗಳನ್ನು ಎಳೆದು, ಕಾಲಿಗೆ ಅಗತ್ಯವಾದ ಮೇಲೆ ಕಾಲಿನ ಬೆರಳುಗಳನ್ನು ಎಳೆದು, ಕಾಲಿಗೆ ಅಗತ್ಯವಾದ ಶೂ ಮಾಡಿಸಲು ಬೇಕಾದ ನಿರ್ದೇಶನಗಳನ್ನು ಶೂ ಹೊಲೆಯುವವನಿಗೆ ನೀಡಿದರು. ' God Bless You' ಎಂದು ಹೇಳಿದ ಡಾ. ಟೋವಿ ಇನ್ನೊಂದು ಕಾಲಿನ ಆಪರೇಷನ್ ಮಾಡುವ ದಿನಾಂಕ ಗೊತ್ತು ಪಡಿಸಿದರು. ಮುಂದೆ ಕೃಷ್ಣ ಮಿಡ್ಲ್‌ಸ್ಕೂಲ್ ಮುಗಿಸುವ ಹೊತ್ತಿಗೆ ಇನ್ನೊಂದು ಕಾಲಿನ ಆಪರೇಷನ್ ಸಹ ಡಾ. ಟೋವಿಯವರೇ ಮಾಡಿದರು.

ಡಾ. ಟೋವಿಯವರ ಬಗ್ಗೆ ಹೇಳಲೇ ಬೇಕಾದ ಇನ್ನೊಂದು ಮಾತಿದೆ. ಆಸ್ಪತ್ರೆಯ ಎಮರ್ಜೆನ್ಸಿ ವಾರ್ಡ್‌ನ ಬಳಿ ಆಕ್ಸಿಜನ್ ಸಿಲಿಂಡರ್ ಬಂತೆಂದರೆ, ಒಂದು ಸಾವು ಆಸ್ಪತ್ರೆಯಲ್ಲಿ ಘಟಿಸಿತು ಎಂದೇ ನಂಬುತ್ತಿದ್ದ ದಿನಗಳು ಅವು. ಹಾಗೇನಾದರೂ ರೋಗಿಯೊಬ್ಬ ತಮ್ಮ ಪ್ರಯತ್ನವನ್ನೂ ಮೀರಿ ಸತ್ತಾಗ ಡಾ. ಟೋವಿ ಖಿನ್ನರಾಗಿ ಕ್ರಿಸ್ತನ ಮೂರ್ತಿಯವರು ನಿಂತು ಪ್ರಾರ್ಥಿಸುತ್ತಿದ್ದರು. ''ಈ ಎಮರ್ಜೆನ್ಸಿ ವಾರ್ಡಿಗೆ ಪೇಷೆಂಟ್‌ಗಳನ್ನು ಕರೆದುಕೊಂಡು ಹೋದರೆ ಸಾವು ಖಚಿತವೇ? ''ಎಂದು ಬಾಲಕ ಕೃಷ್ಣ ಕೇಳಿದಾಗ, ''ನೋ'' ಎಂದ ಅವರು ಆ ವಾರ್ಡಿಗೆ ತಕ್ಷಣ 'ಹೋಪ್ ವಾರ್ಡ್' ಎಂದು

ಹೆಸರಿಟ್ಟರು. ಇಂದಿಗೂ ಸಿ. ಜಿ. ಕೆ. ಹೋಪ್ ವಾರ್ಡ್‌ನ ಡಾ. ಟೋವಿಯವರನ್ನು ಅತ್ಯಂತ ಕೃತಜ್ಞತಾ ಭಾವದಿಂದ ಸ್ಮರಿಸಿಕೊಳ್ಳುತ್ತಾರೆ.

## ೩. ಮಂಡ್ಯಾದಲ್ಲಿ ಶಾಲಾ ವಿದ್ಯಾಭ್ಯಾಸ.

ಕಾಲಿನ ಆಪರೇಷನ್‌ನಿಂದಾಗಿ ಕೃಷ್ಣ ನಾಲ್ಕನೇ ಕ್ಲಾಸಿನ ತನಕ ಸ್ಕೂಲಿಗೆ ಹೋಗಲೇ ಇಲ್ಲ. ಮನೆಯಲ್ಲಿಯೇ ಅಕ್ಷರಾಭ್ಯಾಸ ನಡೆಯುತ್ತಿತ್ತು. ಐದನೇ ಕ್ಲಾಸಿಗೆ ಶಾಲೆಗೆ ಸೇರಿಸಿದರು. ಅವನು ಸೇರಿದ ಶಾಲೆಯ ಹೆಸರು ನ್ಯೂ ಮಿಡಲ್ ಸ್ಕೂಲ್. ಹುಡುಗನಿಗೆ ಈಗಾಗಲೇ ಇಂಗ್ಲಿಷ್, ಕನ್ನಡ ಅಕ್ಷರ ಬರುತ್ತದೆಂಬುದನ್ನು ಖಾತ್ರಿ ಪಡಿಸಿಕೊಂಡ ಸಿದ್ಧಲಿಂಗಪ್ಪ ಮೇಷ್ಟ್ರು ಆರನೇ ತರಗತಿಗೆ ಬರುವಂತೆ ಹೇಳಿದರು. ಸಿದ್ಧಲಿಂಗಪ್ಪನವರು ಅತ್ಯಂತ ಸಜ್ಜನ ವ್ಯಕ್ತಿ. 'ರೆನ್ ಅಂಡ್ ಮಾರ್ಟಿನ್ 'ವ್ಯಾಕರಣ ಪುಸ್ತಕ ತೆರೆಯದೆ ಗ್ರಾಮರ್ ಪಾಠವನ್ನು ಎಂಥ ಹುಡುಗರಿಗೂ ಅರ್ಥವಾಗುವ ರೀತಿಯಲ್ಲಿ ಹೇಳುತ್ತಿದ್ದರು. ಕೃಷ್ಣಸ್ವಾಮಿ ಮೇಷ್ಟ್ರರ ಮನೆಯ ಒಬ್ಬ ಹುಡುಗನಾಗಿಯೇ ಬೆಳೆದ. ಇಂಗ್ಲಿಷ್ ಬಗ್ಗೆ ವಿಶೇಷ ಆಸ್ಥೆ ಬೆಳೆಸಿಕೊಂಡ. ಇದರಿಂದಾಗಿ ಮುಂದೆ ಸರ್ಕಾರಿ ಪ್ರೌಢಶಾಲೆಯಲ್ಲಿ ಇಂಗ್ಲಿಷ್ ಮೀಡಿಯಂಗೆ ಸೀಟು ಸಿಕ್ಕುವುದು ಸುಲಭವಾಯಿತು.

ಈ ಮಧ್ಯೆ ಕೃಷ್ಣಸ್ವಾಮಿಗೆ ಫುಟ್ ಬಾಲ್ ಆಡುವ ಆಸೆ. ಮನುಷ್ಯನ ವರ್ತನೆಯೇ ಹೀಗೆ ವಿಚಿತ್ರವಾದದ್ದು. ಹಲ್ಲು ಇದ್ದವರಿಗೆ ಕಡಲೆ ಇಲ್ಲ. ಕಡಲೆ ಇದ್ದವರಿಗೆ ಹಲ್ಲು ಇಲ್ಲ. ಫುಟ್ ಬಾಲ್ ಆಡಲು ಬೇಕಾದದ್ದು ಗಟ್ಟಿ ಕಾಲು. ಕೃಷ್ಣಸ್ವಾಮಿಗೆ ಗಟ್ಟಿ ಮನಸ್ಸಿದೆ.ಗಟ್ಟಿ ಕಾಲು ಇಲ್ಲ. ಅದರಿಂದಾಗಿ ಫುಟ್‌ಬಾಲ್ ಆಡುವ ಆಸೆ ತೊರೆಯ ಬೇಕಾಯಿತು. ಆದರೆ ಫುಟ್‌ಬಾಲ್ ಪಂದ್ಯವನ್ನು ನೋಡುವ ಆಸಕ್ತಿ, ಆಟದ ಬಗ್ಗೆ ಚರ್ಚಿಸುವ ಆಸಕ್ತಿಗಳು ಹೆಚ್ಚುತ್ತಾ ಹೋದವು. ಸ್ಕೂಲಿನ ಹಿಂಭಾಗದಲ್ಲಿಯೇ ಸ್ಟೇಡಿಯಂ. ಮಂಡ್ಯಾ ಫುಟ್‌ಬಾಲ್ ಮತ್ತು ಕಬಡ್ಡಿ ಆಟಕ್ಕೆ ಹೆಸರಾದ ಊರು.

ಮನೆಯಿಂದ ಹೈಸ್ಕೂಲು ಬಹಳ ದೂರ ಇತ್ತು. ಗೆಳೆಯನೊಬ್ಬನ ಸೈಕಲ್ ಮೇಲೆ ಕೃಷ್ಣ ದಿನಾ ಶಾಲೆಗೆ ಹೋಗಿಬರುತ್ತಿದ್ದ. ಮಧ್ಯೆ ಮಧ್ಯೆ ಜಯಚಾಮರಾಜೇಂದ್ರ ಒಡೆಯರು ಬೆಂಗಳೂರಿನಿಂದ ಮೈಸೂರಿಗೆ ಬರುವಾಗ, ಮೈಸೂರಿನಿಂದ ಬೆಂಗಳೂರಿಗೆ ಹೋಗುವಾಗ ಶಾಲೆಯ ಹುಡುಗರೆಲ್ಲಾ ರಸ್ತೆ ಬದಿಯಲ್ಲಿ ನಿಂತು ಸೆಲ್ಯೂಟ್ ಹೊಡೆಯಬೇಕಿತ್ತು. ಆಗಿನ ಕಾಲದಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಕೂರಿಸಲು ಪ್ರತೀ ಶಾಲೆಯ ಅಧ್ಯಾಪಕರು ವಿಶೇಷ ಮುತುವರ್ಜಿ ವಹಿಸುತ್ತಿದ್ದರು. ವೆಂಕಟಸುಬ್ಬಯ್ಯ ಎಂಬ ಕನ್ನಡ ಪಂಡಿತರೊಬ್ಬರಿದ್ದರು. ಅವರಿಗೆ ವಿದ್ಯಾರ್ಥಿಗಳ ಮೇಲೆ ಅತೀವವಾದ ಮಮತೆ. ರಾತ್ರಿ ಶಾಲೆಗೆ ವಿದ್ಯಾರ್ಥಿಗಳು ಬರಲಿ ಎಂಬ ಆಸೆಯಿಂದ ಹುರಿಹಿಟ್ಟು, ಹುರಿಗಾಳು

ಮುಂತಾದ ತಿನಿಸುಗಳನ್ನು ತಂದು ಹಂಚುತ್ತಿದ್ದರು. ರಾತ್ರಿಯ ಹೊತ್ತು ವಿಶೇಷ ತರಗತಿಗಳನ್ನು ನಡೆಸುತ್ತಿದ್ದರು. ಕೃಷ್ಣಸ್ವಾಮಿ ಸಹ ಈ ರಾತ್ರಿ ಶಾಲೆಗಳಲ್ಲಿ ಕಲಿಯುತ್ತಿದ್ದ. ಆದರೂ ಗಣಿತ ಕಲ್ಲಿನ ಕಡಲೆ ಇದ್ದಂತೆ. ಬಡ ಪೆಟ್ಟಿಗೆ ತಲೆಗೆ ಹೋಗುತ್ತಿರಲಿಲ್ಲ. ಅದರಿಂದಾಗಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಫೇಲಾಗಬೇಕಾಯಿತು. ಸೋತವನಿಗೆ ಸಿಗುವ ಮರ್ಯಾದೆ ಎಂಥದು ಎಂಬ ಅನುಭವ ಮೊದಲ ಬಾರಿಗೆ ಕೃಷ್ಣಸ್ವಾಮಿಗಾಯಿತು. ಮನೆಯಲ್ಲಿ ತಂದೆಯ ಆರ್ಥಿಕ ಸ್ಥಿತಿ ಚೆನ್ನಾಗಿರಲಿಲ್ಲ. ಅಲ್ಲದೆ ಅವರು ತಮ್ಮ ನಾಲ್ಕನೇ ಮಗಳಿಗೆ ಗಂಡು ಹುಡುಕುವ ಸಿದ್ಧತೆಯಲ್ಲಿದ್ದರು. ಮೊದಲ ಬಾರಿಗೆ ಕೃಷ್ಣ ಸ್ವಾಮಿಗೆ ಖಿನ್ನತೆ ಆವರಿಸತೊಡಗಿತು. ಕಡೆಗೂ ಗಣಿತಕ್ಕೆ ಮನೆಪಾಠಕ್ಕೆ ಹೋಗಿ ಹೇಗೋ ಮಾಡಿ 40 ಅಂಕಗಳನ್ನು ತೆಗೆದು ಪರೀಕ್ಷೆ ಪಾಸು ಮಾಡಿದ ಕೃಷ್ಣಸ್ವಾಮಿ. ಅಲ್ಲಿಗೆ ಕೃಷ್ಣಸ್ವಾಮಿಯ ಮಂಡ್ಯದ ನಂಟು ನಿಧಾನವಾಗಿ ಬಿಡುವ ಕಾಲ ಕೂಡಿ ಬಂದಿತ್ತು.

ಮಗ ಓದಿನಲ್ಲಿ ಮುಂದುವರೆಯಬೇಕಾದರೆ ಅವನನ್ನು ಮಂಡ್ಯ ಬಿಡಿಸಬೇಕು ಎನಿಸಿತು ಗೋವಿಂದನಾಯ್ಕರಿಗೆ. ಮಂಡ್ಯದ ಸ್ನೇಹಿತರು ಮತ್ತು ಫುಟ್ ಬಾಲ್ ಪಂದ್ಯಗಳು ಅವನನ್ನು ನಿಧಾನವಾಗಿ ನುಂಗತೊಡಗಿವೆ ಎಂದು ಅವರಿಗೆ ಅನಿಸಿರಬೇಕು. ಮಂಡ್ಯದ ಸ್ನೇಹಿತರನ್ನು ಬಿಟ್ಟು ಪರವೂರಿಗೆ ಹೋಗಲು ಕೃಷ್ಣಸ್ವಾಮಿಗೂ ಮನಸ್ಸಿಲ್ಲ. ಮಂಡ್ಯದ ಜನ ಮಾತಿನಲ್ಲಷ್ಟೇ ಒರಟು. ಮನಸ್ಸಿನಲ್ಲಿ ಬೆಣ್ಣೆಯಷ್ಟೇ ಮೃದು ಎಂಬ ಅನುಭವ ಆಗಲೇ ಮನಸ್ಸಿಗೆ ಬಂದಿತ್ತು. ಆದರೂ ಅಪ್ಪನ ಅಪೇಕ್ಷೆಯ ಮೇರೆಗೆ ಮಂಡ್ಯ ಬಿಟ್ಟು ಹೊರಡಲೇ ಬೇಕಿತ್ತು. ಬೆಂಗಳೂರು ಕೃಷ್ಣಸ್ವಾಮಿಯ ಭವಿಷ್ಯದ ಜೀವನಕ್ಕೆ ಬೇಕಾದ ವಿಶಾಲ ಅವಕಾಶಗಳನ್ನು ತೆರೆದುಕೊಂಡು ಕರೆಯುತ್ತಿತ್ತು.

## ೪. ಬೆಂಗಳೂರಿನ ಕಾಲೇಜು ವಿದ್ಯಾಭ್ಯಾಸ.

ಮಂಡ್ಯಾ ಚಿಕ್ಕ ಜಗತ್ತು. ಬೆಂಗಳೂರು ದೊಡ್ಡ ಜಗತ್ತು. ಬಾಹುಗಳನ್ನು ವಿಸ್ತರಿಸಿದಷ್ಟೂ ತೆರೆದುಕೊಳ್ಳುವ ಜಗತ್ತು. ಸಿ. ಜಿ. ಕೆ. ಬೆಂಗಳೂರಿಗೆ ಬಂದು ಉಳಿದುಕೊಂಡದ್ದು ಎಚ್.ಎಂ.ಟಿ. ಕಾಲೋನಿಯ ತನ್ನ ಭಾವನ ಮನೆಯಲ್ಲಿ. ಸುಂದರವಾದ ಫುಟ್‌ಬಾಲ್ ಮೈದಾನ, ಸ್ವಿಮಿಂಗ್ ಪೂಲ್, ಸ್ಪೋರ್ಟ್ಸ್ ಕ್ಲಬ್ ಇತ್ಯಾದಿ ಆಕರ್ಷಣೆಗಳಿದ್ದ ಎಚ್. ಎಂ. ಟಿ. ಕಾಲೋನಿ ನಿಧಾನವಾಗಿ ಕೃಷ್ಣಸ್ವಾಮಿಯನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳ ತೊಡಗಿತು. ಜಯನಗರ ನ್ಯಾಷನಲ್ ಕಾಲೇಜನಲ್ಲಿ ಕಲಾ ವಿಭಾಗಕ್ಕೆ ಪ್ರವೇಶ ದೊರಕಿತು. ಎಚ್. ಎಂ. ಟಿ. ಕಾಲನಿಯಿಂದ ಕಾಲೇಜಿಗೆ ಬಸ್ಸಿನಲ್ಲಿ ಪ್ರಯಾಣ. ಹೊಸ ವಾತಾವರಣ. ಹೊಸ ಗೆಳೆಯರ ಪರಿಚಯ. ಹೊಸ ಆಕರ್ಷಣೆಗಳು. ಹೊಸ

ಹೊಸ ಚಿಂತನೆಗೆ ಹಚ್ಚುವ ಅಧ್ಯಾಪಕರುಗಳು. ಇವೆಲ್ಲವೂ ಸಿ. ಜಿ. ಕೆ. ಯಲ್ಲಿ ಹೊಸ ಸಂವೇದನೆಗಳನ್ನು ಸೃಷ್ಟಿಸಲು ಮುಂದಾದವು.

ಸ್ಟಡಿ ಸರ್ಕಲ್‌ಗಳಲ್ಲಿ ಕುಳಿತು ಚರ್ಚಿಸುವುದು, ಬೇರೆ ಬೇರೆ ಸಿದ್ಧಾಂತಗಳ ಬಗ್ಗೆ ತಿಳಿದುಕೊಳ್ಳಲು ಯತ್ನಿಸುವುದು ಯಾವುದೇ ಸಂವೇದನಾಶೀಲ ವಿದ್ಯಾರ್ಥಿಯ ಕಾಲೇಜು ಜೀವನದ ಒಂದು ಭಾಗವೇ ಆಗಿರುತ್ತದೆ. ಈ ರೀತಿಯ ಒಂದು ಸ್ಟಡಿ ಸರ್ಕಲ್‌ನಲ್ಲಿ ಡಾ. ಜಿ. ರಾಮಕೃಷ್ಣರ ಮೂಲಕ ಸಿ. ಜಿ. ಕೆ. ಗೆ ಮಾರ್ಕ್ಸ್‌ವಾದದ ಪರಿಚಯವಾಗ 'ತೊಡಗಿತು. ಡಾ. ಜಿ. ರಾಮಕೃಷ್ಣ ಆಗ ನ್ಯಾಷನಲ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಅನೇಕ ಜನ ಪ್ರತಿಭಾವಂತ ವಿದ್ಯಾರ್ಥಿಗಳನ್ನು ವಿಚಾರಶೀಲ ವ್ಯಕ್ತಿಗಳಾಗಿ ಪರಿವರ್ತಿಸಿದ ಖ್ಯಾತಿ ಅವರದು. ಮಾರ್ಕ್ಸ್‌ವಾದದ ಅಧ್ಯಯನದಿಂದ ತನ್ನಲ್ಲಿ ಒಂದು ರೀತಿಯ ಪ್ರಬುದ್ಧ ಬದಲಾವಣೆಯಾಗುತ್ತಿರುವುದನ್ನು ಸಿ. ಜಿ. ಕೆ. ಕಂಡುಕೊಂಡರು. 'ಮೈನ್ ಸ್ಟ್ರೀಮ್', 'ನ್ಯೂಏಜ್'ಮುಂತಾದ ಪತ್ರಿಕೆಗಳನ್ನು ಓದತೊಡಗಿದರು.

ಮಾರ್ಕ್ಸ್‌ವಾದದಿಂದ ಕಣ್ಣು ಕೆಂಪಗೆ ಮಾಡಿಕೊಂಡಿದ್ದ ಸಿ. ಜಿ. ಕೆ. ಎಲ್ಲದಕ್ಕೂ ಕಾರ್ಲ್‌ಮಾರ್ಕ್ಸ್ ಉತ್ತರ ಕೊಡುತ್ತಾನೆಂದು ನಂಬಿಕೊಂಡಿದ್ದರು. ಪ್ರಥಮವಾಗಿ ಮಾರ್ಕ್ಸ್‌ವಾದ ಓದುವವರೆಲ್ಲರಿಗೂ ಈ ರೀತಿಯ ಅನುಭವ ಆಗ ಆಗುತ್ತಿತ್ತು. ಹಾಗಾಗಿ ಸಿ. ಜಿ. ಕೆ. ಕನ್ನಡದ ಬಗ್ಗೆ ಉಪೇಕ್ಷಾ ಮನೋಭಾವ ತಳೆದು ಮೊದಲನೇ ಬಿ. ಎ. ನಲ್ಲಿ ಫೇಲಾಗಿದ್ದನ್ನು ತಮ್ಮ ಆತ್ಮ ಕಥನದಲ್ಲಿ ಸ್ವಾರಸ್ಯವಾಗಿ ಹೀಗೆ ವಿವರಿಸುತ್ತಾರೆ. ''ಪರೀಕ್ಷೆಗೆ ಹೋಗುವ ಮುಂಚೆ ಟೆಕ್ಸ್ಟ್ ಯಾವುದೆಂದು ಸ್ನೇಹಿತನನ್ನು ಕೇಳಿದಾಗ 'ಉದ್ಯೋಗ ಪರ್ವ' ಎಂದಿದ್ದ. ಉದ್ಯೋಗ ಪರ್ವ ಎಂದರೆ ಎಂಪ್ಲಾಯ್‌ಮೆಂಟ್ ಮತ್ತು ಅನ್‌ಎಂಪ್ಲಾಯ್‌ಮೆಂಟ್ ಎಂದು ನನಗೆ ನಾನೇ ತಿಳಿದು ಇದಕ್ಕೆ ಮಾರ್ಕ್ಸಿಸ್ಟ್ ಅನಾಲಿಸಿಸ್ಸೇ ಸರಿಯಾದ ಉತ್ತರ ಎಂದು ತಿಳಿದು ಉತ್ತರ ಬರೆಯಲು ಪೆನ್ ತುಂಬಾ ಇಂಕ್ ಹಾಕಿ ಪರೀಕ್ಷೆಗೆ ಹೋಗಿದ್ದೆ. ಪರೀಕ್ಷೆಯ ಪ್ರಶ್ನೆ ಪತ್ರಿಕೆ ಪ್ರಕಾರ ಉದ್ಯೋಗ ಪರ್ವ ಮಹಾಭಾರತದ ಒಂದು ಭಾಗ ಎಂದು ತಿಳಿದು ಅರ್ಧಗಂಟೆ ಬೆಲ್ ಹೊಡೆದ ನಂತರ ಆಚೆ ಬಂದಿದ್ದೆ. ನ್ಯಾಷನಲ್ ಕಾಲೇಜಿನಲ್ಲಿ ಪರೀಕ್ಷೆ ಶುರುವಾದ ಅರ್ಧ ಗಂಟೆಗೆ ಹೊರಗೆ ಬರುವವನು ಮೂರ್ಖ, ದಡ್ಡ; ಹೀಗೆ ಅನೇಕ ಬಿರುದು ಬಾವಲಿಗಳಿದ್ದವು. ಪರೀಕ್ಷೆಯ ಕೊಠಡಿಯಿಂದ ಎದ್ದು ಬಂದ ನನ್ನನ್ನು ಕಂಡ ಪ್ರೊ. ಭಾರದ್ವಾಜ್‌ರವರು 'ಪರೀಕ್ಷೆ ಅಂದ್ರೆ ತಲೆ ಹರಟೆ ಅಲ್ಲ. ತಲೆ ತುಂಬಾ ಓದಿರಬೇಕು. ನಿಮ್ಮಂಥ ವಿದ್ಯಾರ್ಥಿಗಳಿಂದ ಕಾಲೇಜಿಗೆ ಅಪಕೀರ್ತಿ--'ಇತ್ಯಾದಿ ಮನಸ್ಸು ಬಂದಂತೆ ಬೈದರು. ಧೃತಿಗೆಡದೆ ಮನೆಗೆ ಬಂದಿದ್ದೆ.''

ಪ್ರೊ. ಭಾರದ್ವಾಜ್ ಕಂಡ ಸಿ. ಜಿ. ಕೆ. ಯ ತಲೆಹರಟೆಯ ಗುಣ ಈಗಲೂ ಏನೂ ಬದಲಾಗಿಲ್ಲ. ಉಡಾಫೆಯನ್ನೇ ಯಶಸ್ಸನ್ನಾಗಿ ಪರಿವರ್ತಿಸುವ, ಮೂರ್ತಿಭಂಜಕತೆ ಯನ್ನೇ ಮೌಲ್ಯವನ್ನಾಗಿಸುವ ಅವರ ವಿಲಕ್ಷಣ ಪ್ರವೃತ್ತಿ ಈಗಲೂ ಮುಂದುವರೆದಿದೆ. ಬೇರೆಯವರಿಗಿಂತ ತಾನು ಭಿನ್ನ:ಬೇರೆಯವರು ಮಾಡಿದ್ದಕ್ಕಿಂತ ತಾನು ಭಿನ್ನವಾಗಿ ಮಾಡಬಲ್ಲೆ ಎಂಬ ಅವರ ವಿಶ್ವಾಸವೇ ಅವರನ್ನಿಂದು ಬೇರೆಯವರಿಂದ ಪ್ರತ್ಯೇಕವಾಗಿ ನೋಡುವಂತೆ ಮಾಡಿದೆ.

ಸಿ. ಜಿ. ಕೆ. ನ್ಯಾಷನಲ್ ಕಾಲೇಜಿನಿಂದ ಬಿ. ಎ. ಪದವಿಯನ್ನು ಎರಡನೇ ದರ್ಜೆಯಲ್ಲಿ ಪಾಸುಮಾಡಿದರು. ಆದರೆ ಅವರು ಪಡೆದ ಅಂಕಗಳು ಅವರಿಗೆ ಸ್ನಾತಕೋತ್ತರ ಪದವಿಗೆ ಪ್ರವೇಶ ಕೊಡಿಸಲು ಸಾಲದಾಗಿದ್ದವು. ಅಪ್ಪನಿಗೋ ಮಗನಿಗೆ ಎಂ. ಎ. ಮಾಡಿಸಬೇಕೆಂಬ ಆಸೆ. ಎಲ್ಲಾ ತಂದೆ ತಾಯಿಗಳಿಗೂ ಇರುವ ಸಹಜ ಆಸೇನೇ ಅಂತಹದು. "ಎಂ. ಎ. ಮಾಡಿದ್ರೆ ನಮ್ಮ ವಂಶದಲ್ಲೇ ಮೊದಲನೇ ಎಂ. ಎ. ಮಾಡಿದವನು ಆಗ್ತೀಯ. ನಿಮ್ಮ ತಾತ ಬದುಕಿದ್ರೆ ಎಷ್ಟು ಸಂತೋಷ ಪಡ್ತಾ ಇದ್ರು"ಎಂದು ಇನ್ನೇನು ಮಗನಿಗೆ ಎಂ. ಎ. ಸೀಟು ಸಿಕ್ಕೇ ಬಿಡುತ್ತದೆಂದು ಅಪ್ಪನ ಖುಷಿ. ಆದರೆ ಮಗ ತೆಗೆದ ಅಂಕಗಳಿಗೆ ಎಂ. ಎ.ಗೆ ಸೀಟು ಸಿಗುವುದಿಲ್ಲ ಎಂದು ತಿಳಿದಾಗ, 'ಓದಿನ ಕಡೆ ಗಮನ ಕೊಡದೇ ಹೋದ್ರೆ ಹೀಗೆ ಆಗೋದು'ಎಂದು ತೆಗಳಿದ್ದರು. ಕಡೆಗೆ ಎಂ. ಎ.ಗೆ ಸೀಟು ಸಿಗುವುದಿಲ್ಲ ಎಂದು ಖಾತ್ರಿ ಯಾದಾಗ ಪರಿಚಯದ ಅಧ್ಯಾಪಕರೊಬ್ಬರು ಸಲಹೆ ಮಾಡಿದ್ದು "ಫೈನಲ್ ಆನರ್ಸ್ ಮಾಡಿದರೆ ಮುಂದಿನ ವರ್ಷ ಎಂ. ಎ. ಮಾಡಬಹುದು"ಅಂತ. ಆಗ ಆನರ್ಸ್ ಇದ್ದದ್ದು ಸೆಂಟ್ರಲ್ ಕಾಲೇಜಿನಲ್ಲಿ ಮಾತ್ರ. ಎಂ.ಎ.ಗೆ ಸೇರುವ ಆಸೆಯಲ್ಲಿ ಸಿ. ಜಿ. ಕೆ. ಸೇರಿದ್ದು ಬಿ. ಎ. ಕೊನೇ ವರ್ಷದ ಆನರ್ಸಿಗೆ.

## ೫. ಸೆಂಟ್ರಲ್ ಕಾಲೇಜಿನ ವಿಶಾಲ ಅಂಗಳದಲ್ಲಿ.

ಆಗ ಸೆಂಟ್ರಲ್ ಕಾಲೇಜು ಅಂದರೆ ಬೆಳೆಯ ಬೇಕೆನ್ನುವ ವಿದ್ಯಾರ್ಥಿಗಳಿಗೆ ವಿಶೇಷ ಆಕರ್ಷಣೆ. ಅದು ಎಲ್ಲಾ ರೀತಿಯ ಬೆಳವಣಿಗೆಗಳಿಗೂ ಚಿಮ್ಮುಹಲಗೆಯಂತಿತ್ತು. ಬೌದ್ಧಿಕ ಬೆಳವಣಿಗೆಗೆ ವಿಪುಲವಾದ ಅವಕಾಶಗಳಿದ್ದವು. ಹಾಗೆಯೇ ರಾಜಕೀಯ ವ್ಯಕ್ತಿಗಳ ಸಂಪರ್ಕ, ರೌಡಿ ವಲಯಗಳ ಸಂಪರ್ಕಗಳೂ ಬಹಳ ಸುಲಭವಾಗಿ ದೊರೆಯುತ್ತಿದ್ದವು. ಸ್ವಲ್ಪ ಎಚ್ಚರ ತಪ್ಪಿದರೂ ಭವಿಷ್ಯವೆಂಬುದು ಯಾವುದೋ ಅನಿರೀಕ್ಷಿತ ನಿಲ್ದಾಣವನ್ನು ತಲುಪು ಸಾಧ್ಯತೆಗಳಿದ್ದವು. ಅಲ್ಲಿ ಪ್ರೊ. ನರೋನ, ಪ್ರೊ. ಭರತ್‌ರಾಜ್‌ಸಿಂಗ್,

ಪ್ರೊ. ಕೆ. ವೆಂಕಟಗಿರಿಗೌಡ, ಪ್ರೊ. ರಾಜರತ್ನಂ. ಪ್ರೊ. ಶಿವರುದ್ರಪ್ಪನಂಥವರ ಭಾರೀ ಬುದ್ಧಿವಂತರ ಗುಂಪು ವಿವಿಧ ವಿಷಯಗಳನ್ನು ಬೋಧಿಸುತ್ತಿತ್ತು. ಸಿ. ಜಿ. ಕೆ. ಬೆರಗುಗಣ್ಣುಗಳಿಂದ, ಕುಂಟುತ್ತಲೇ ಸೆಂಟ್ರಲ್ ಕಾಲೇಜಿನ ಆವರಣವನ್ನು ಪ್ರವೇಶಿಸಿದರು. ವಿದ್ಯಾಭ್ಯಾಸ ಮುಗಿಸಿ ಸೆಂಟ್ರಲ್ ಕಾಲೇಜ್ ಬಿಡುವ ಹೊತ್ತಿಗೆ ಆ ಕಾಲೇಜಿನ ಎಲ್ಲಾ ಸದ್ಗುಣಗಳನ್ನು, ದುರ್ಗುಣಗನ್ನೂ ಮೈ ಗೂಡಿಸಿಕೊಂಡು ಹೊರಬಂದಿದ್ದರು.

ಬಿ. ಎ ಆನರ್ಸ್ ಮುಗಿಸಿ ಅಲ್ಲಿಯೇ ಎಂ. ಎ ಅರ್ಥ ಶಾಸ್ತ್ರಕ್ಕೆ ಸೇರಿಕೊಂಡರು. ಕಾಲೇಜ್ ಕ್ಯಾಂಪಸ್ಸಿನಲ್ಲಿ ನಡೆಯುತ್ತಿದ್ದ ಜಾತಿ ರಾಜಕೀಯ, ವಿವಿಧ ರಾಜಕೀಯ ಪಕ್ಷಗಳ ರಾಜಕೀಯ, ಲಂಕೇಶ್ ಮುಂತಾದವರ ನೇತೃತ್ವದಲ್ಲಿ ನಡೆಯುತ್ತಿದ್ದ ಬೌದ್ಧಿಕ ಸಂವಾದಗಳಲ್ಲಿ ನಿಧಾನವಾಗಿ ಆಸಕ್ತಿ ವಹಿಸತೊಡಗಿದರು. ಪ್ರವೇಶ ಪಡೆದುಕೊಳ್ಳತೊಡಗಿದರು. ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿದ್ದವರು ಡಾ. ವೆಂಕಟಗಿರಿಗೌಡರು. ವಿದ್ವತ್ತಿಗೆ, ಶಿಸ್ತಿಗೆ ಹಾಗೂ ಮುಂಗೋಪಕ್ಕೆ ಹೆಸರಾದವರು. ಅಂಥವರ ಜೊತೆ ಆತ್ಮೀಯತೆಯನ್ನು ಸಾಧಿಸುವುದು ಸುಲಭದ ಕೆಲಸ ಅಲ್ಲ. ಸಿ. ಜಿ. ಕೆ. ವೆಂಕಟಗಿರಿ ಗೌಡರ ಆತ್ಮೀಯ ಶಿಷ್ಯರಲ್ಲೊಬ್ಬರಾಗಿ ಬೆಳೆದರು. ಮುಂದೆ ತನ್ನ ಜೀವನಕ್ಕೊಂದು ಭದ್ರ ಬುನಾದಿಯನ್ನು ಡಾ. ವೆಂಕಟಗಿರಿಗೌಡರು ಒದಗಿಸಿಕೊಟ್ಟರೆಂಬ ಕೃತಜ್ಞತೆ ಸಿ. ಜಿ. ಕೆ. ಅವರಲ್ಲಿ ಸದಾ ಮನೆಮಾಡಿದೆ. ಈ ಮಧ್ಯೆ ಕಾಂಗ್ರೆಸ್ ರಾಜಕೀಯ ಮುಖಂಡರ ಪರಿಚಯವೂ ಅವರಿಗೆ ಆಗತೊಡಗಿತು. ಜೊತೆಗೆ ಲೋಹಿಯಾ ವಾದಿಗಳ, ಮಾರ್ಕ್ಸ್‌ವಾದಿಗಳ ಸಂಬಂಧ. ಇವೆಲ್ಲವುಗಳ ಮಧ್ಯೆ ತಮ್ಮ ಸ್ಪಷ್ಟ ರಾಜಕೀಯ ನಿಲುವುಗಳ ಬಗೆಗೆ ಗೊಂದಲ. ಎಂ. ಎ ಓದುವಾಗಲೇ ಡಿ. ಆರ್. ನಾಗರಾಜ, ಸಿದ್ಧಲಿಂಗಯ್ಯ, ಅಗ್ರಹಾರ ಕೃಷ್ಣಮೂರ್ತಿ, ಕೆ. ಎಂ. ಶಂಕರಪ್ಪ ಮುಂತಾದವರ ಪರಿಚಯ.

ಈ ಎಲ್ಲಾ ಬೆಳವಣಿಗೆಯ ಮಧ್ಯದಲ್ಲಿಯೇ ಸಿ. ಜಿ. ಕೆ. ಎಂ. ಎ ಮುಗಿಸಿದರು. ಸೆಂಟ್ರಲ್ ಕಾಲೇಜಿನ ವಾತಾವರಣವೇನೋ ಅನೇಕ ದೃಷ್ಟಿಗಳಿಂದ ಆಕರ್ಷಕವಾಗಿತ್ತು. ಆದರೆ ಆ ಆಕರ್ಷಣೆಗಳಲ್ಲೇ ಎಷ್ಟೊಂದು ದಿನ ಕಾಲ ಕಳೆಯಲು ಸಾಧ್ಯ? ಓದು ಮುಗಿದ ಮೇಲೆ ಕೆಲಸ ಹುಡುಕಬೇಕಲ್ಲ. ಉದ್ಯೋಗದ ಹುಡುಕಾಟಕ್ಕೆ ಸಿ. ಜಿ. ಕೆ. ಮುಂದಾದರು.

೬. ಉದ್ಯೋಗದ ಅನ್ವೇಷಣೆಯಲ್ಲಿ.

ಸಿ. ಜಿ. ಕೆ. ಎಂ. ಎ. ಮುಗಿಸಿದ ಕೆಲವೇ ವರ್ಷಗಳಲ್ಲಿ ಅವರ ತಂದೆ ನಿವೃತ್ತಿಯಾಗಿದ್ದರು. ಎಂ. ಎ. ಡಿಗ್ರಿ ಕೈಯಲ್ಲಿ ಹಿಡಿದು 'ನೋ ವೇಕೆನ್ಸಿ' ಎಂಬ ಉತ್ತರಗಳನ್ನು ಕೇಳುತ್ತಾ ಕೆಲಸಕ್ಕಾಗಿ ಅಲೆಯುವ ಪರಿಸ್ಥಿತಿ ಉಂಟಾಗಿತ್ತು. ನ್ಯಾಷನಲ್ ಕಾಲೇಜಿಗೆ ಇಂಟರ್‌ವ್ಯೂ ಬಂದಾಗ ಡಾ. ವೆಂಕಟಗಿರಿಗೌಡರು 'ಬ್ರಾಹ್ಮಣರ ಕಾಲೇಜಿಗೆ ಹೋಗಿ ಏನ್ ಮಾಡ್ತೀಯಾ? ಕೆಲಸ ಬೇಕಿದ್ದರೆ ನಾನೇ ನಿನಗೆ ಕೆಲಸ ಕೊಡ್ತೀನಿ' ಎಂದಿದ್ದರು. ಆಗಲೇ ಶಿಕ್ಷಣ ಕ್ಷೇತ್ರದಲ್ಲಿ ಜಾತಿ ರಾಜಕೀಯ ವ್ಯಾಪಕವಾಗಿ ಹರಡಿತ್ತು. ಡಾ. ವಿ. ಕೆ. ಆರ್. ವಿ. ರಾವ್ ಇನ್‌ಸ್ಟಿಟ್ಯೂಟ್‌ನಿಂದ ಫೆಲೋಷಿಪ್‌ಗೆ ಇಂಟರ್‌ವ್ಯೂ ಬಂತು. ಇಂಟರ್‌ವ್ಯೂನಲ್ಲಿ ಪಾಸೇನೋ ಆಯಿತು. ಆದರೆ ಫೆಲೋಶಿಪ್ ಮಾತ್ರ ಸಿಗಲಿಲ್ಲ. ಆದರೆ ಸಿ. ಜಿ. ಕೆ. ಯ ಅದೃಷ್ಟ ಚೆನ್ನಾಗಿತ್ತು. ಫೆಲೋಶಿಪ್ ಬದಲು ಟೆಕ್ನಿಕಲ್ ಅಸಿಸ್ಟೆಂಟ್ ಎಂಬ ಕೆಲಸವೊಂದನ್ನು ಅವರು ನೀಡಿದರು. ತಿಂಗಳಿಗೆ ರೂ. 450 ಸಂಬಳ. ಆಗಿನ ಕಾಲಕ್ಕೆ ಅದು ದೊಡ್ಡ ಮೊತ್ತವೇ. ಆ ಸಂಸ್ಥೆಯಲ್ಲಿ ಸಾಮಾಜಿಕ ಸಮಸ್ಯೆಗಳನ್ನು ಅಧ್ಯಯನಕ್ಕೆ ಎತ್ತಿಕೊಂಡು ಅವುಗಳ ಬಗ್ಗೆ ವಿವರವಾದ ವರದಿ ಬರೆಯುವ ಕೆಲಸ ಅವರದಾಗಿತ್ತು. ಗೆಳೆಯ ಸನತ್ ಜೊತೆಯಲ್ಲಿ ಕೆಲವು ತಿಂಗಳು ಸಿ. ಜಿ. ಕೆ. ಅಲ್ಲಿ ಕೆಲಸ ಮಾಡಿದರೂ ಅಲ್ಲೇ ಉಳಿಯುವ ಮನಸ್ಸು ಅವರಿಗಿರಲಿಲ್ಲ. ಕಡೆಗೊಮ್ಮೆ ಆ ಕೆಲಸಕ್ಕೆ ರಾಜೀನಾಮೆ ನೀಡಿ ಹೊರಬಂದರು.

ಕೈಯಲ್ಲಿ ಕೆಲಸವಿಲ್ಲ, ತಲೆಯಲ್ಲಿನೂರಾರು ಹುಳುಗಳು. ಜೊತೆಗೆ ಕಾಂಗ್ರೆಸ್ ಮುಖಂಡರ ಜೊತೆ ಒಡನಾಟ. ಕಾಂಗ್ರೆಸ್ ವಿದ್ಯಾರ್ಥಿ ಘಟಕದ ಅಧ್ಯಕ್ಷ ಬೇರೆ. ಇಷ್ಟಾದರೂ ಸೆಂಟ್ರಲ್ ಕಾಲೇಜಿನ ಬುದ್ಧಿ ಜೀವಿಗಳ ಒಡನಾಟ ಬಿಟ್ಟಿರಲಿಲ್ಲ. ಈ ಮಧ್ಯೆ ಮಾರ್ಕ್ಸ್‌ವಾದಿ ಚಿಂತಕ ಎಂ. ಕೆ. ಭಟ್ ಪರಿಚಯವಾಯಿತು. ನಿಧಾನವಾಗಿ ಮಾರ್ಕ್ಸ್‌ವಾದದತ್ತ ಅವರ ಆಸಕ್ತಿ ಹೊರಳತೊಡಗಿತು. ಈ ಮಧ್ಯೆ ನಿರುದ್ಯೋಗದಿಂದ ಬೆಂಗಳೂರಿನಲ್ಲಿ ಬದುಕುವುದು ದುಸ್ತರವಾಗಿತ್ತು. ಮತ್ತೆ ವೆಂಕಟಗಿರಿಗೌಡರ ಹತ್ತಿರ ಕೆಲಸ ಕೇಳಬೇಕೆಂದು ಹೋದರು. ಸಿ. ಜಿ. ಕೆ. ಬಾಯಿ ಬಿಟ್ಟು ಕೆಲಸ ಕೇಳುವ ಮೊದಲೇ ಹತ್ತಿರ ಕರೆದು "ನಿನ್ನ ವಿಳಾಸ ಗೊತ್ತಿರಲಿಲ್ಲ. ಅದಕ್ಕೇ ನನ್ನ ಕೇರಾಫ್ ವಿಳಾಸ ಕೊಟ್ಟು ನಿನ್ನನ್ನು ಕೆಲಸಕ್ಕೆ ತೆಗೆದುಕೊಳ್ಳಲು ಯೂನಿವರ್ಸಿಟಿಗೆ ಶಿಫಾರಸ್ಸು ಪತ್ರ ಬರೆದಿದ್ದೇನೆ" ಎಂದರು. ಯಾವ ಕೆಲಸ ? ಏನು ಮಾಡಬೇಕು? ಎಂದು ಕಕ್ಕಾಬಿಕ್ಕಿಯಾಗಿ ನಿಂತಿದ್ದಾಗ, ಅಲ್ಲಿಗೆ ಬಂದ ಟೈಪಿಸ್ಟ್ "ನಿಮ್ಮನ್ನು ರಿಸರ್ಚ್ ಅಸಿಸ್ಟೆಂಟ್ ಕೆಲಸಕ್ಕೆ ತೆಗೆದುಕೊಳ್ಳಲು ಪ್ರೊಫೆಸರ್ ಕಾಗದ ಬರೆದಿದ್ದಾರೆ" ಎಂದರು. ಹೀಗೆ ಬೆಂಗಳೂರು ವಿಶ್ವ ವಿದ್ಯಾಲಯದ

ಅರ್ಥಶಾಸ್ತ್ರ ವಿಭಾಗಕ್ಕೆ ರಿಸರ್ಚ್ ಅಸಿಸ್ಟೆಂಟ್ ಆಗಿ ಸೇರಿದ ಸಿ. ಜಿ. ಕೆ. ಈಗ ಅಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಗುರು ವೆಂಕಟಗಿರಿಗೌಡರು ನಿವೃತ್ತರಾಗಿದ್ದಾರೆ. ಅವರ ಜಾಗಕ್ಕೆ ಅವರ ಶಿಷ್ಯ ಬಂದಿದ್ದಾರೆ.

ರಿಸರ್ಚ್ ಅಸಿಸ್ಟೆಂಟ್ ಹುದ್ದೆ ಜೀವನಕ್ಕೊಂದು ಆಸರೆಯನ್ನು ನೀಡಿತು. ಇನ್ನು ಸೃಜನಶೀಲ ತಹತಹಿಕೆಯ ಹುಡುಕಾಟ ಪ್ರಾರಂಭವಾಯಿತು. ತಾನು ಸಾಧಿಸಬೇಕಾಗಿದ್ದು ಬೇರೆ ಇನ್ನೇನೋ ಇದೆ, ಎಂಬ ಕೊರತೆ ಸಿ. ಜಿ. ಕೆ. ಗೆ ಪ್ರಾರಂಭವಾಯಿತು. ಆಗ ಸೆಂಟ್ರಲ್ ಕಾಲೇಜಿನ ಹುಲ್ಲು ಹಾಸಿನ ಮೇಲೆ ಕುಳಿತು ಹರಟುತ್ತಿದ್ದ ಬುದ್ಧಿ ಜೀವಿಗಳ ಒಂದು ಭಾಗವಾದರು ಅವರು. ಕ್ರಾಂತಿ, ಆಮೂಲಾಗ್ರ ಪರಿವರ್ತನೆ, ವರ್ಗಹೋರಾಟ, ರಂಗ ಮಾಧ್ಯಮ ಮುಂತಾದ ಪದಗಳು ಅವರಿಗೆ ಹೊಸದೊಂದು ಸಾಧ್ಯತೆಯನ್ನು ತೋರತೊಡಗಿದವು.

## ೭. ಎಪ್ಪತ್ತರ ದಶಕದ ತಳಮಳಗಳು.

ಕನ್ನಡ ರಂಗಭೂಮಿ ಎಪ್ಪತ್ತರ ದಶಕದಲ್ಲಿ ಪಡೆದುಕೊಂಡ ಬದ್ಧತೆಗೆ ಆ ದಶಕದ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ತಳಮಳಗಳು ಮಹತ್ವದ ಕೊಡುಗೆ ನೀಡಿವೆ. ಒಂದು ಕಡೆ ಅನೇಕ ಶತಮಾನಗಳಿಂದ ಅಕ್ಷರ ವಂಚಿತರಾಗಿದ್ದ ದಲಿತರು ಅಕ್ಷರ ಕಲಿತು ತಮ್ಮ ಹಕ್ಕುಗಳನ್ನು ಕೇಳತೊಡಗಿದ್ದರು. ದಲಿತ ಸಂಘರ್ಷ ಸಮಿತಿಯ ಅಡಿ ಸಂಘಟಿತರಾಗುತ್ತಿದ್ದರು. ಇನ್ನೊಂದು ಕಡೆ ರೈತರು 'ರೈತ ಸಂಘ'ದಡಿ ಸಂಘಟಿತರಾಗಿ ತಮ್ಮ ಹಕ್ಕುಗಳಿಗೆ ಒತ್ತಾಯಿಸುತ್ತಿದ್ದರು. ಮತ್ತೊಂದು ಕಡೆ ಲೋಹಿಯಾವಾದಿಗಳು, ಮಾರ್ಕ್ಸ್‌ವಾದಿಗಳು ಜಾತಿ ಸಂಘರ್ಷ, ವರ್ಗ ಸಂಘರ್ಷದ ಬಗ್ಗೆ ಮಾತಾಡುತ್ತಿದ್ದರು. ಕಾಂಗ್ರೆಸ್ ಪಕ್ಷದ ಯುವ ಸಂಘಟನೆಯ ಅಧ್ಯಕ್ಷರಾಗಿದ್ದ ಸಿ. ಜಿ. ಕೆ. ನಿಧಾನವಾಗಿ ಅಲ್ಲಿಂದ ಹೊರಬಂದು ಮೇಲೆ ತಿಳಿಸಿದ ಪ್ರಗತಿಪರ ಸಂಘಟನೆಗಳ ಜೊತೆ ಗುರುತಿಸಿಕೊಳ್ಳ ತೊಡಗಿದರು. ಮೇಲೆ ತಿಳಿಸಿದ ಸಂಘಟನೆಗಳಿಗೆ ಅವುಗಳದೇ ಪ್ರತ್ಯೇಕ ಅಜೆಂಡಾಗಳಿದ್ದರೂ ಸಾಂಸ್ಕೃತಿಕವಾಗಿ ಒಂದೇ ವೇದಿಕೆಯ ಮೇಲೆ ಬರುವುದಕ್ಕೆ ಅವುಗಳ ವಿರೋಧ ಇರಲಿಲ್ಲ. ಸಿ. ಜಿ. ಕೆ. ಒಂದು ರೀತಿಯಲ್ಲಿ ಈ ಎಲ್ಲಾ ಸಂಘಟನೆಗಳಲ್ಲೂ ಗುರುತಿಸಿಕೊಳ್ಳುತ್ತಿದ್ದರು. ಆಗಿನ ಪ್ರಮುಖ ಬುದ್ಧಿ ಜೀವಿಗಳ ಜೊತೆಗಿನ ಒಡನಾಟ ಸಿ. ಜಿ. ಕೆ. ಯವರಿಗೆ ಒಂದು ವಿಶಾಲ ಸಾಂಸ್ಕೃತಿಕ ತಳಹದಿಯನ್ನು ಒದಗಿಸಿ ಕೊಟ್ಟಿತು. ಮುಂದೆ ಅವರು ರಂಗ ಮಾಧ್ಯಮವನ್ನೇ ತಮ್ಮ ಪ್ರಮುಖ ಅಭಿವ್ಯಕ್ತಿಯನ್ನಾಗಿಸಿಕೊಂಡಾಗ ಅವರ ಈ ಅನುಭವಗಳು ಅವರ ನೆರವಿಗೆ ಬಂದವು.

ಕಡೆಗೂ ಸಿ. ಜಿ. ಕೆ. ಯನ್ನು ತನ್ನ ಕಡೆಗೆ ಸೆಳೆದುಕೊಂಡದ್ದು ಕಮ್ಯುನಿಸ್ಟ್ ಮಾರ್ಕ್ಸಿಸ್ಟ್ ಪಕ್ಷ. ಆಗ ಸಿ. ಪಿ. ಎಂ.ನ ರಾಜ್ಯ ಕಾರ್ಯದರ್ಶಿಯಾಗಿದ್ದ ಎಂ. ಕೆ. ಭಟ್ ತಮ್ಮ ತೀಕ್ಷ್ಣ ರಾಜಕೀಯ ಮತ್ತು ಸಾಮಾಜಿಕ ವಿಶ್ಲೇಷಣೆಯಿಂದ ಎಂಥವರನ್ನೂ ಆಕರ್ಷಿಸುವ ಗುಣ ಹೊಂದಿದ್ದರು. ಆ ಸಮಯಕ್ಕೆ ಎಡ ಪಂಥೀಯ ಒಲವು ಇಟ್ಟುಕೊಂಡಿದ್ದ ಪ್ರಮುಖ ಬುದ್ಧಿ ಜೀವಿಗಳಾದ ಕೆ. ವಿ. ನಾರಾಯಣ, ಕಿ. ರಂ. ನಾಗರಾಜ, ಸಿದ್ಧಲಿಂಗಯ್ಯ, ಪ್ರಸನ್ನ ಮುಂತಾದವರು ಸೇರಿ ಪ್ರಸನ್ನರ ನೇತೃತ್ವದಲ್ಲಿ 'ಸಮುದಾಯ' ಸಂಘಟನೆಯನ್ನು ಪ್ರಾರಂಭಿಸಿದ್ದರು. ರಂಗ ಮಾಧ್ಯಮದ ಮೂಲಕ ಜನರಲ್ಲಿ ಅರಿವು ಮೂಡಿಸುವುದು ಸಮುದಾಯದ ಉದ್ದೇಶವಾಗಿತ್ತು. ಸಮುದಾಯ ಸಂಘಟನೆಯ ಪ್ರಥಮ ಕಾರ್ಯದರ್ಶಿಯಾಗಿ ಸಿ. ಜಿ. ಕೆ. ಕೆಲಸ ಮಾಡಲು ಮುಂದಾದರು. ಸಮುದಾಯಕ್ಕೆ ಸೇರುವಾಗಲೂ ಅವರಿಗೆ ರಂಗಭೂಮಿಯ ಬಗೆಗಿನ ಆಸಕ್ತಿಗಿಂತ ಸಂಘಟನೆಯ ಬಗೆಗಿನ ಆಸಕ್ತಿಯೇ ಪ್ರಧಾನವಾಗಿತ್ತು. ಅಂದಿನ ಸಾಮಾಜಿಕ ಬದ್ಧತೆಯ ತುಡಿತವೇ ಅಂಥದಾಗಿತ್ತು.

# ಅಧ್ಯಾಯ-೨

## ಮಧ್ಯರಂಗ

### ೧. ಸಮುದಾಯ ಸಂಘಟನೆ ಮತ್ತು ಸಿ. ಜಿ. ಕೆ.

ಸಿ. ಜಿ. ಕೃಷ್ಣಸ್ವಾಮಿಯವರ ರಂಗಭೂಮಿಯ ನಂಟು ಪ್ರಾರಂಭವಾದದ್ದು 'ಸಮುದಾಯ' ಸಂಘಟನೆಯ ಮೂಲಕ. ಸಮುದಾಯ ಸಾಂಸ್ಕೃತಿಕ ಸಂಘಟನೆ ಪ್ರಾರಂಭವಾದದ್ದು 1974ರಲ್ಲಿ. ಎಪ್ಪತ್ತರ ದಶಕದ ರಾಜಕೀಯ ಮತ್ತು ಸಾಮಾಜಿಕ ತಳಮಳಗಳು ಕೆಲವಾರು ಪ್ರಜ್ಞಾವಂತ ಚಿಂತಕರಲ್ಲಿ ಆಮೂಲಾಗ್ರ ಬದಲಾವಣೆಯ ತಹತಹಗಳನ್ನು ಸೃಷ್ಟಿಸಿದ್ದವು. ತಮ್ಮ ಕ್ರಿಯಾಶೀಲ ಚಟುವಟಿಕೆಗೆ ಸಾಂಸ್ಕೃತಿಕ ಸಂಘಟನೆಯೊಂದರ ಅವಶ್ಯಕತೆಯನ್ನು ಅವರು ಮನಗಂಡಿದ್ದರು. ಅದೇ ಸಮಯಕ್ಕೆ ಪ್ರಸನ್ನ ಅವರು ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯಿಂದ ಪದವಿ ಮುಗಿಸಿಕೊಂಡು ಬಂದಿದ್ದರು. ಎಡಪಂಥೀಯ ಆಲೋಚನೆಗಳನ್ನು ತಲೆಯಲ್ಲಿ ತುಂಬಿಕೊಂಡು ರಂಗ ಮಾಧ್ಯಮದ ಮೂಲಕ ಅವುಗಳಿಗೊಂದು ಅಭಿವ್ಯಕ್ತಿ ಕೊಡಬೇಕೆಂದು ಯೋಜನೆಗಳನ್ನು ಹಾಕುತ್ತಿದ್ದರು. ಆಗ ಅವರ ಜೊತೆ ಸೇರಿದವರು ಕಿ. ರಂ. ನಾಗರಾಜ, ಡಿ. ಆರ್. ನಾಗರಾಜ, ಕೆ. ವಿ. ನಾರಾಯಣ , ಸಿ. ವೀರಣ್ಣ, ಕೆ. ಮರುಳಸಿದ್ದಪ್ಪ ಮುಂತಾದವರು. ಅವರೆಲ್ಲಾ ಸೇರಿ 'ಸಮುದಾಯ' ಸಂಘಟನೆಯನ್ನು ಹುಟ್ಟು ಹಾಕಿದರು. 'ಸಮುದಾಯ'ಎನ್ನುವ ಹೆಸರನ್ನು ಸಂಘಟನೆಗೆ ಸೂಚಿಸಿದವರು ಕಿ. ರಂ. ನಾಗರಾಜ. ಸಿ. ಜಿ. ಕೆ. ಸಮುದಾಯದ ಸ್ಥಾಪಕ ಕಾರ್ಯದರ್ಶಿಯಾಗಿ ಕೆಲಸ ಮಾಡಲಾರಂಭಿಸಿದರು.

ಸಿ. ಜಿ. ಕೆ. ಗೆ ಮೊದಲಿನಿಂದಲೂ ಸಂಘಟನೆ ಇಷ್ಟವಾದ ಕೆಲಸವಾಗಿತ್ತು. ಸಮಾನ ಮನಸ್ಕರನ್ನು ಒಂದು ಕಡೆ ಕೂಡಿ ಹಾಕುವುದು, ಅವರವರ ಶಕ್ತಿಗನುಗುಣವಾಗಿ ಅವರಿಂದ ಕೆಲಸ ತೆಗೆಯುವುದು ಅವರ ವಿಶಿಷ್ಟ ಗುಣ. ಸಮುದಾಯದ ತೆಕ್ಕೆಯೊಳಗೆ ಎಲ್ಲಾ ರೀತಿಯ ಪ್ರಗತಿಪರ ಚಿಂತಕರನ್ನು ಒಟ್ಟಿಗೇ ತರಬೇಕೆಂಬುದು ಅವರ ಆಶಯವಾಗಿತ್ತು. ಸಮುದಾಯ ತನ್ನ ಮೊದಲನೆಯ ನಾಟಕವಾಗಿ 'ಹುತ್ತವ ಬಡಿದರೆ'ಸಿದ್ಧಪಡಿಸಿತು. ಸಂಸರ 'ವಿಗಡ ವಿಕ್ರಮರಾಯ' ನಾಟಕವನ್ನು ಸಮಕಾಲೀನ ರಾಜಕೀಯದ ದೃಷ್ಟಿಕೋನದಿಂದ

ಕೆ. ವಿ. ನಾರಾಯಣ ಅವರು ಮರು ಬರವಣಿಗೆಗೆ ಒಳಪಡಿಸಿದ್ದರು. ಪ್ರಸನ್ನ ನಾಟಕ ನಿರ್ದೇಶಿಸಿದ್ದರು. ನಾಟಕ ಬಹಳ ಯಶಸ್ವೀ ಪ್ರದರ್ಶನಗಳನ್ನು ಕಂಡಿತು. ಆಗ ಸಿ. ಜಿ. ಕೆ. ರಂಗಭೂಮಿಯ ದೃಷ್ಟಿಯಿಂದ ಇನ್ನೂ ಕೂಸು. ಎಡವುತ್ತಾ, ತಡವುತ್ತಾ ರಂಗಭೂಮಿ ಹತ್ತುವ ಪ್ರಯತ್ನ ನಡೆಸಿದ್ದರು. ರಂಗಭೂಮಿಯ ಬೇರೆ ಬೇರೆ ಆಯಾಮಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದರು.

ಸಮುದಾಯದ ಮುಂದಿನ ನಾಟಕ 'ತಾಯಿ' ಪ್ರಸನ್ನರ ನಿರ್ದೇಶನದಲ್ಲಿ ಭಾರೀ ಯಶಸ್ಸು ಗಳಿಸಿತು. ಅದರ ಯಶಸ್ಸನ್ನು ಕಂಡು ಕಾರ್ಯದರ್ಶಿಯಾಗಿದ್ದ ಸಿ. ಜಿ. ಕೆ. ಆ ನಾಟಕವನ್ನು ರಾಜ್ಯಾದ್ಯಂತ ಆಡಿಸಬೇಕೆಂದು ಪ್ರಯತ್ನಿಸಿದರು. ಆದರೆ ಕಾರಣಾಂತರಗಳಿಂದ ಅದು ಸಾಧ್ಯವಾಗಲಿಲ್ಲ. ಆಗ ಬಂದ ಆಲೋಚನೆ ಸಮುದಾಯದ ಘಟಕಗಳನ್ನು ರಾಜ್ಯದ ಬೇರೆ ಬೇರೆ ಸ್ಥಳಗಳಲ್ಲಿ ತೆರೆಯ ಬೇಕೆಂಬುದು. ಕರ್ನಾಟಕದಾದ್ಯಂತ ಸಮುದಾಯದ ಘಟಕಗಳನ್ನು ತೆರೆಯುವಲ್ಲಿ ಹಾಗೂ ಆ ಘಟಕಗಳಿಗೆ ಒಂದು ಸ್ಥಿರ ರೂಪವನ್ನು ಕೊಡುವಲ್ಲಿ ಸಿ. ಜಿ. ಕೆ. ಪಾತ್ರ ಬಹಳ ದೊಡ್ಡದು. ಆಗ ಅವರು ರಾಜ್ಯದ ಬೇರೆ ಬೇರೆ ರಂಗಕರ್ಮಿಗಳ ಜೊತೆ ಪ್ರಾರಂಭಿಸಿದ ನಂಟು ಇಂದಿಗೂ ಅಬಾಧಿತವಾಗಿ ಮುಂದುವರೆದಿದೆ.

ಬೆಂಗಳೂರಿನಿಂದ ಹೊರಗೆ ಸಮುದಾಯದ ಮೊದಲ ಘಟಕ ಪ್ರಾರಂಭವಾದದ್ದು ತುಮಕೂರಿನಲ್ಲಿ. ಅಲ್ಲಿ ಸಿ. ಜಿ. ಕೆ. ತುಮಕೂರಿನ ಕಾರ್ಯಕರ್ತರ ಜೊತೆ ಸಂಘಟನೆಗೆ ತೊಡಗಿದರು. ಸಂಘಟನಾ ಸ್ವರೂಪ ಒಂದು ನಿಶ್ಚಿತ ಹಂತಕ್ಕೆ ಬಂದು ತಲುಪಿದಾಗ, ನಾಟಕವೊಂದನ್ನು ತಯಾರು ಮಾಡುವ ಪ್ರಶ್ನೆ ಎದ್ದಿತು. ನಾಟಕ ನಿರ್ದೇಶಿಸುವವರು ಯಾರು ಎಂಬ ಪ್ರಶ್ನೆ ಎದ್ದು , ಪ್ರಶ್ನೆ ಕೇಳಿದ ಸಿ. ಜಿ. ಕೆ. ಯವರೇ ನಾಟಕ ನಿರ್ದೇಶಿಸಬೇಕೆಂದು ತೀರ್ಮಾನವಾಯಿತು. ಹೊಸ ಸಮುದಾಯದ ಘಟಕಗಳು ಪ್ರಾರಂಭವಾದಗಲೆಲ್ಲಾ ನಾಟಕ ಯಾವುದು? ನಾಟಕಕಾರ ಯಾರು? ನಿರ್ದೇಶಕ ಯಾರು? ಎಂಬ ಪ್ರಶ್ನೆಗಳು ಏಳುತ್ತಲೇ ಇದ್ದವು. ಹೊಸ ನಾಟಕ, ನಾಟಕಕಾರ, ನಿರ್ದೇಶಕ ಕೂಡಾ ಅಷ್ಟೇ ಆಚಾನಕ್ಕಾಗಿ, ಅಚ್ಚರಿಯ ರೀತಿಯಲ್ಲಿ ಸೃಷ್ಟಿಯಾಗುತ್ತಿದ್ದರು. ಸಿ. ಜಿ. ಕೆ. ಪರಿಸ್ಥಿತಿಯ ವಿಕೋಪದಿಂದಾಗಿ ದಿಡೀರ್ ಎಂದು ನಿರ್ದೇಶಕನ ಜವಾಬ್ದಾರಿ ಹೊತ್ತಾಗ ತಮಗಾದ ಅನುಭವವನ್ನು ದಾಖಲಿಸಿರುವುದು ಹೀಗೆ.

"ತುಮಕೂರಿನ ಪ್ರಶ್ನೆ ಬಂದಾಗ ನಾನೇ ನಿರ್ದೇಶಕನ ಹೊಣೆ ಹೊರಬೇಕಾಯಿತು. ನಿರ್ದೇಶನದ ಧೂಪದ ಹೊಗೆಯೂ ಕೂಡ ನನಗೆ ಗೊತ್ತಿರಲಿಲ್ಲ. ಎಂದಿನ ರೀತಿಯ ಭಂಡತನ, ಹುಂಬತನ ನನ್ನನ್ನು ಈ ಕೆಲಸವನ್ನು ಒಪ್ಪಿಕೊಳ್ಳುವಂತೆ ಮಾಡಿತ್ತು. ನಾಟಕದ

ಹುಡುಕಾಟಕ್ಕೆ ನಾನು, ಪ್ರಸನ್ನ ತೊಡಗಿದಾಗ ಪ್ರಸನ್ನ ಆಯ್ಕೆ ಮಾಡಿಕೊಂಡ ನಾಟಕ ಬೆಂಗಾಲಿಯ 'ಮಾರೀಚನ ಬಂಧುಗಳು'(ಮಂಗಳೂರಿನಲ್ಲಿ ಮಾಡಿಸಲು). ಈ ನಾಟಕ ಅಂದಿನ ಅಂತರ ರಾಷ್ಟ್ರೀಯ ರಾಜಕೀಯಕ್ಕೆ ಕನ್ನಡಿ ಹಿಡಿದಂತಿತ್ತು. ನನಗೆ ನಾಟಕದ ಆಯ್ಕೆ ಕಷ್ಟವೇ ಆಯಿತು. ಕಾರಣ ನಾಟಕಗಳ ಆಯ್ಕೆ ಅಂದರೆ ನಿರ್ದೇಶಕರಿಗೆ ತನ್ನ ಜನುಮದ ಜೋಡಿಯಾದ ಹೆಣ್ಣನ್ನು ಆಯ್ಕೆ ಮಾಡಿಕೊಂಡಷ್ಟೇ ಕಷ್ಟ. ಯಾಕೆಂದರೆ ನಾಟಕದ ಯಶಸ್ಸು ನಿರ್ದೇಶಕನನ್ನು ನಿರ್ದೇಶಕನನ್ನಾಗಿ ರೂಪಿಸುತ್ತದೆ. ಸೋಲು ಅನುಭವಿಸಿದರೆ ನಿರ್ದಾಕ್ಷಿಣ್ಯವಾಗಿ ರಂಗಕ್ಷೇತ್ರವನ್ನು ಬಿಡಬೇಕಾಗುತ್ತದೆ. ನಾನು ನಿರ್ದೇಶನಾಗುವ ಆಸೆ ಹೊತ್ತವನೇ ಅಲ್ಲ. ಬಿಡುವಿನ ಸಮಯ ಕಳೆಯಲು 'ಸಮುದಾಯ' ಸಂಘಟನೆಗೆ ಬಂದಿದ್ದ ನಾನು ಅನಿವಾರ್ಯವಾಗಿ ನಿರ್ದೇಶಕನ ಹೊಣೆ ಹೊರಬೇಕಾಯಿತು.''

ಅಷ್ಟು ಹೊತ್ತಿಗಾಗಲೇ ಸಿ. ಜಿ. ಕೆ. ಬಸವನಗುಡಿ ನ್ಯಾಷನಲ್ ಕಾಲೇಜಿನ ವಿದ್ಯಾರ್ಥಿಗಳಿಗೆ ಸಿ. ವೀರಣ್ಣನವರ 'ನೆಲ ಮುಟ್ಟಿದ ಹೊಟ್ಟೆಪ್ಪ'ಎಂಬ ನಾಟಕವೊಂದನ್ನು ನಿರ್ದೇಶಿಸಿದ್ದರು. ಅದರಿಂದೇನೂ ಅವರಿಗೆ ನಿರ್ದೇಶನದ ಹಿಡಿತ ಸಿಕ್ಕಿರಲಿಲ್ಲ. ಕಡೆಗೂ ತುಮಕೂರು ಸಮುದಾಯಕ್ಕೆ ನಿರ್ದೇಶಿಸಲು ಅವರು ಆರಿಸಿಕೊಂಡ ನಾಟಕ ಸಿದ್ಧಲಿಂಗಯ್ಯನವರ 'ಪಂಚಮ'. ಪುರೋಹಿತಶಾಹಿ ಮತ್ತು ಅಧಿಕಾರಿಶಾಹಿ ಒಂದಾಗಿ ಪಂಚಮರನ್ನು ಗೇಲಿ ಎಬ್ಬಿಸಿ, ಇಂಟರ್‌ವ್ಯೂ ನೆಪದಲ್ಲಿ ಮಣ್ಣು ಮುಕ್ಕಿಸುತ್ತಿದೆ. ಇದರಿಂದ ಎಚ್ಚೆತ್ತುಕೊಂಡ 'ಪಂಚಮ'ಕೊನೆಗೆ ಈ ಎರಡೂ ವ್ಯವಸ್ಥೆಯ ಕ್ರೂರ ಮುಖಗಳನ್ನು ನಿರ್ನಾಮ ಮಾಡುವುದು ನಾಟಕದ ವಸ್ತು. ಅನುಭವವಿಲ್ಲದ ನಿರ್ದೇಶಕ, ಅನುಭವವಿಲ್ಲದ ನಟರು, ಅನುಭವವಿಲ್ಲದ ನೇಪಥ್ಯ ಕೆಲಸಗಾರರು ಮತ್ತು ಸುಸಜ್ಜಿತ ಸಭಾಂಗಣದ ಕೊರತೆ ಇಂಥ ಪ್ರತಿಕೂಲ ಸನ್ನಿವೇಶದಲ್ಲಿ ಸಿ. ಜಿ. ಕೆ. ನಿರ್ದೇಶಕನ ಕ್ಯಾಪ್ ಧರಿಸಿದ್ದರು. ಇದೇ ರೀತಿಯ ಪ್ರಯೋಗಗಳನ್ನು ಸಿ. ಜಿ. ಕೆ. ತನ್ನ ರಂಗ ಜೀವನದುದ್ದಕ್ಕೂ ಮಾಡಿಕೊಂಡು ಬಂದು ಯಶಸ್ವಿಯಾಗಿದ್ದಾರೆ. 'ಪಂಚಮ' ಪ್ರದರ್ಶನ ಯಶಸ್ವಿಯಾದದ್ದಷ್ಟೇ ಅಲ್ಲ, ಟಿ.ಎಸ್.ಲೋಹಿತಾಶ್ವನಂಥ ಅದ್ಭುತ ನಟನನ್ನು ಹುಟ್ಟು ಹಾಕಿತು. ಈ ಪ್ರದರ್ಶನ ದೊಂದಿಗೆ ಸಿ. ಕೆ. ಗುಂಡಣ್ಣ, ಗಂಗಾಧರಸ್ವಾಮಿ ಮುಂತಾದವರು ಶ್ರೇಷ್ಠ ನೇಪಥ್ಯ ತಜ್ಞರಾಗಿ ಹೊರಹೊಮ್ಮಿದರು.

ತುಮಕೂರಿನ ಅನುಭವ ಸಿ. ಜಿ. ಕೆ. ಗೆ ಹೊಸ ಹುರುಪನ್ನು ನೀಡಿತು. ಸಮುದಾಯದ ಸಂಘಟನೆಯನ್ನು ಮತ್ತಷ್ಟು ಬಲಪಡಿಸಬೇಕು, ರಾಜ್ಯಾದ್ಯಂತ ಅದರ ಘಟಕಗಳನ್ನು ತೆರೆಯಬೇಕು ಎಂಬ ಆಸೆ ಗರಿಗೆದರ ತೊಡಗಿತು. ಅದಕ್ಕಾಗಿ 'ಕರ್ನಾಟಕ ಸಮುದಾಯ

ಸಮನ್ವಯ ಸಮಿತಿ'ಎಂಬ ಅಧಿಕೃತ ಸಂಸ್ಥೆಯನ್ನು ಹುಟ್ಟು ಹಾಕಲಾಯಿತು. ಮುಂಚೂಣಿಯಲ್ಲಿ ಪ್ರಸನ್ನ, ಸಿ. ಜಿ. ಕೆ. ಇದ್ದರು ಜೊತೆಗೆ ಸೇರಿದವರು ಲಿಂಗದೇವರು ಹಳೆಮನೆ, ಆರ್. ಕೆ . ಹುಡುಗಿ, ಸಿ. ಆರ್. ಭಟ್, ಪ್ರತಾಪ್‌ಸಿಂಗ್ ತಿವಾರಿ, ಶರಣಮಾಲಿ ಪಾಟೀಲ್, ಗುಂಡಣ್ಣ ಎಂ. ಜಿ. ವೆಂಕಟೇಶ್ ಮುಂತಾದವರು. ಜೊತೆಗೆ 'ಚಿತ್ರ ಸಮುದಾಯ'ಮತ್ತು 'ಗ್ರಂಥ' ಸಮುದಾಯ' ಚಳುವಳಿಯನ್ನು ಪ್ರಾರಂಭಿಸಲಾಯಿತು.

ತುರ್ತು ಪರಿಸ್ಥಿತಿ ತೆಗೆದು ಹಾಕಿದ ಕೂಡಲೇ ನಡೆದ ಲೋಕಸಭಾ ಚುನಾವಣೆಯಲ್ಲಿ ಇಂದಿರಾಗಾಂಧಿ ಸೋತಿದ್ದರು. ಅನಂತರ ಅವರು ಚಿಕ್ಕಮಗಳೂರು ಉಪಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಆಗ ಎಲ್ಲಾ ಪ್ರಗತಿಪರ ಕಲಾವಿದರು, ಸಾಹಿತಿಗಳು 'ಸರ್ವಾಧಿಕಾರದ ವಿರುದ್ಧ'ದ 'ವೇದಿಕೆ 'ಯೊಂದನ್ನು ಸೃಷ್ಟಿಸಿಕೊಂಡು ಇಂದಿರಾಗಾಂಧಿಯ ವಿರುದ್ಧ ಪ್ರಚಾರಕ್ಕೆ ಮುಂದಾದರು. ಈ ವೇದಿಕೆಯ ಸಂಚಾಲಕರಾಗಿ ಸಿ. ಜಿ. ಕೆ. ಕೆಲಸ ನಿರ್ವಹಿಸಿದರು. 'ಸಮುದಾಯ'ಆಗ ಮುಖ್ಯವಾಗಿ ಪೋಸ್ಟರ್ ಮೂಲಕ ಸರ್ವಾಧಿಕಾರದ ವಿರುದ್ಧ ಸಮರ ಸಾರಿತ್ತು.

'ಸಮುದಾಯ'ದ ಸಂಘಟನಾ ಕಾರ್ಯದರ್ಶಿಯಾಗಿ ಪ್ರಾರಂಭದ ದಿನಗಳಲ್ಲಿ ಸಿ. ಜಿ. ಕೆ. ತಿರುಗಿದ ಊರುಗಳು, ಭೇಟಿ ಮಾಡಿದ ಜನ, ಮತ್ತು ಸಂಘಟನೆಗೆ ಕೊಟ್ಟ ಸ್ವರೂಪ ಇಂದು ಸಮುದಾಯ ಸಂಘಟನೆಯ ಇತಿಹಾಸದ ಭಾಗವಾಗಿವೆ. ಆಗ ಸಿ. ಜಿ. ಕೆ. ತನ್ನ ಕನಸುಗಳ ಭಾವನೆಗಳನ್ನು ಮಾತುಗಳಲ್ಲಿ ಬಿಚ್ಚುತ್ತಿದ್ದುದೇ ಕಡಿಮೆ. ಮಾತು ಕಡಿಮೆ ಕೆಲಸ ಮುಂದು. ಕೆಲಸ ಎಂದರೆ ಹಗಲು, ರಾತ್ರಿಗಳ ಪರಿವೆ ಇಲ್ಲ. ದೂರ, ಹತ್ತಿರಗಳ ವ್ಯವಧಾನವೂ ಇಲ್ಲ. ಕಲಾಕ್ಷೇತ್ರದಲ್ಲಿ ನಾಟಕವಿರಲಿ, ಯಾವುದೋ ಒಂದು ಹಜಾರದಲ್ಲಿ ನಾಟಕದ ತಾಲೀಮು ಇರಲಿ, ಅಥವಾ ದೂರದ ಯಾವುದೋ ಸಮುದಾಯದ ಘಟಕದಲ್ಲಿ ಕೆಲಸವಿರಲಿ, ಅಲ್ಲಿ ಹಾಜರಾಗಿ ತನ್ನ ಕೆಲಸವನ್ನು ತಾನು ಮಾಡುತ್ತಿದ್ದುದು ನೋಡಿ ಅಚ್ಚರಿಯಾಗುತ್ತಿತ್ತು. ಆಗ ನಾನು ಎಷ್ಟೋ ಬಾರಿ ಅಂದುಕೊಂಡದ್ದುಂಟು; ಪ್ರಸನ್ನ ಸಮುದಾಯದ ತಲೆ ಆದರೆ, ಸಿ. ಜಿ. ಕೆ. ಅದರ ಕಾಲು ಎಂದು . ಆದರೆ ಇಂದು ಸಮುದಾಯದಲ್ಲಿ ತಲೆ ಮತ್ತು ಕಾಲು ಎರಡೂ ಇಲ್ಲ. ಮಧ್ಯದ ದೇಹ ಮಾತ್ರ ಉಳಿದುಕೊಂಡಿದೆ.

ಸಿ. ಜಿ. ಕೆ. ನಮ್ಮ ಕೆಲವೇ ಕೆಲವು ಅತ್ಯುತ್ತಮ ರಂಗಭೂಮಿ ಬೆಳಕು ವಿನ್ಯಾಸ ಕಾರರಲ್ಲೊಬ್ಬರು. ಇಲ್ಲಿಯವರೆಗೆ ಅವರು ಅನೇಕ ನಾಟಕಗಳಿಗೆ ಬೆಳಕಿನ ವಿನ್ಯಾಸ ಸಂಯೋಜಿಸಿದ್ದಾರೆ. ಅವರು ನಿರ್ದೇಶಕರಾಗಿ ಹೇಗೆ ಆಕಸ್ಮಿಕವಾಗಿ ಕ್ಯಾಪ್ ಧರಿಸಿದರೋ

ಅಷ್ಟೇ ಆಕಸ್ಮಿಕವಾಗಿ ಡಿಮ್ಮರ್ ತಿರುಗಿಸಲೂ ಮುಂದಾದರು. ಸಮುದಾಯ ಬರ್ಟೋಲ್ಟ್ ಬ್ರೆಕ್ಟ್‌ನ 'ಗೆಲಿಲಿಯೊ' ನಾಟಕವನ್ನು ಪ್ರದರ್ಶನಕ್ಕೆ ಸಿದ್ಧ ಮಾಡುತ್ತಿತ್ತು. ಪ್ರಸನ್ನ ಅದರ ನಿರ್ದೇಶಕರು. ಬೆಳಕಿನ ವಿನ್ಯಾಸವನ್ನು ಖ್ಯಾತ ವಿನ್ಯಾಸಕಾರ ವಿ. ರಾಮಮೂರ್ತಿಯವರು ಮಾಡಬೇಕಿತ್ತು. ಆಗ ಕಲಾಕ್ಷೇತ್ರ ದುರಸ್ತಿಯಲ್ಲಿದ್ದುದರಿಂದ ನಾಟಕವನ್ನು ಕಲಾಕ್ಷೇತ್ರದ ಆವರಣದಲ್ಲಿರುವ ಮಹಿಳಾ ವಿಶ್ರಾಂತಿ ಗೃಹದಲ್ಲಿ ಮಾಡುವುದೆಂದು ತೀರ್ಮಾನಿಸ ಲಾಯಿತು. ಅದು ಚಿಕ್ಕ ಜಾಗ. ಬಾಲ್ಕನಿಯಲ್ಲಿ 15 ಜನ ಮತ್ತು ಕೆಳಗೆ 60 ಜನ ಪ್ರೇಕ್ಷಕರು ಕೂಡಬಹುದಿತ್ತು. ಟೆಕ್ನಿಕಲ್ ರಿಹರ್ಸಲ್ ದಿನ ಬೆಳಕು ವಿನ್ಯಾಸ ಮಾಡಲು ಬಂದಿದ್ದ ರಾಮಮೂರ್ತಿಯವರು ಬಾಲ್ಕನಿಯಲ್ಲಿ ಜನ ಕೂಡಿಸಲು ಅನುಮತಿ ನೀಡುವುದಿಲ್ಲ ಎಂದರು. ಕಾರಣ ಕೇಳಿದ್ದಕ್ಕೆ ಪ್ರೇಕ್ಷಕರಲ್ಲಿ ಯಾರಾದರೂ ವಿದ್ಯುತ್ ಅಪಘಾತದಿಂದ ಸತ್ತರೆ ಅದರ ಹೊಣೆಯನ್ನು ಹೊರಬೇಕಾದದ್ದು ನಾನು ಎನ್ನುವ ವಾದವನ್ನು ಮುಂದಿಟ್ಟರು. ಇದಕ್ಕೆ ಕಾರಣವೂ ಇತ್ತು. ಆ ಪುಟ್ಟ ಬಾಲ್ಕನಿಯಲ್ಲೇ ಸ್ವಿಚ್ ಬೋರ್ಡ್, ಪುಟ್ಟ ಲೈಟಿಂಗ್ ಕಂಟ್ರೋಲ್ ಇರುತ್ತಿದ್ದವು. ಅದರ ಪಕ್ಕದಲ್ಲಿ 15 ಜನ ಕೂರುವುದೆಂದರೆ ಅಪಾಯದ ಕೆಲಸವೇ. ರಾಮಮೂರ್ತಿ ಹಠವಾದಿ. ತನ್ನ ಮಾತಿಗೆ ಮನ್ನಣೆ ಸಿಗದಿದ್ದರೆ ಅವರು ಕೆಲಸ ಮಾಡುವವರೇ ಅಲ್ಲ. ಹಾಗಾಗಿ ಅವರು ಪ್ರೊಡಕ್ಷನ್‌ನಿಂದ ಹೊರನಡೆದರು. ಈಗ ಬೆಳಕನ್ನು ಯಾರು ನಿಭಾಯಿಸಬಲ್ಲರು? ಎಲ್ಲರೂ ತಲೆಯ ಮೇಲೆ ಕೈ ಹೊತ್ತು ಕೂರುವ ಪರಿಸ್ಥಿತಿ. ಆಗ ನೆರವಿಗೆ ಬಂದದ್ದು ಸಿ. ಜಿ. ಕೆ. ಯ ಭಂಡತನ. 'If not Ramamurthy why not CGK? ಎಂದು ಕಂಟ್ರೋಲ್ ಬೋರ್ಡ್‌ಗೆ ಕೈ ಹಾಕಿದರು. ಅಲ್ಲಿಯ ಪ್ರಭಾತ್ ಸಂಸ್ಥೆಯಿಂದ ಲೈಟ್‌ಗಳನ್ನು, ಡಿಮ್ಮರ್‌ಗಳನ್ನು ಹೊತ್ತು ತಂದಿದ್ದು ಗೊತ್ತಿತ್ತೇ ಹೊರತು ವಿನ್ಯಾಸ, ಗಿನ್ಯಾಸ ತಿಳಿದಿರಲಿಲ್ಲ. ಅಂಜುತ್ತ ಅಂಜುತ್ತಲೆ ಸಿ. ಜಿ. ಕೆ. ಬೆಳಕಿನ ವಿನ್ಯಾಸಕ್ಕೆ ಕೈ ಹಾಕಿದ್ದರು. ವಿದ್ಯುತ್ ಜೊತೆ ಆಟ ಆಡಲು ತೊಡಗಿದ್ದು ಅದೇ ಮೊದಲು. ವೈಯರ್‌ನ ತುಣುಕೊಂದನ್ನು ಹಿಡಿದು, ಸ್ವಿಚ್ ಆರಿಸದೆ ಪ್ಲಗ್‌ಗೆ ಕನೆಕ್ಟ್ ಮಾಡಿದಾಗ ಕೈ ಹಿಡಿದಿದ್ದ ಬಾಲ್ಕನಿ ಗ್ರಿಲ್ ಎಲ್ಲಾ ವಿದ್ಯುತ್ ಸಂಚಾರವಾಗಿ ಅಂಗಾತವಾಗಿ ಕೆಳಗೆ ಬಿದ್ದಿದ್ದರು. ಸ್ವಲ್ಪ ಸಮಯದ ನಂತರ ಮೇಲೆದ್ದ ಸಿ. ಜಿ. ಕೆ. ತನ್ನ ಸುತ್ತಾ ಭಯಭೀತರಾಗಿ ನಿಂತಿದ್ದವರಿಗೆ 'ಲೈಟಿಂಗ್ ಕ್ರ್ಯೂ ಹೇಳಲಾ? 'ಎಂದು , ತಮಗೆ ಗೊತ್ತಾದ ರೀತಿ ಬೆಳಕಿನ ವಿನ್ಯಾಸ ನಿರ್ವಹಿಸಿದ್ದರು. ನಾಟಕ ಮುಗಿದಾಗ ಅಸಾಧ್ಯ ಚಪ್ಪಾಳೆ . ಎಲ್ಲರೂ ಬೆಳಕಿನ ವಿನ್ಯಾಸಕ್ಕೆ ಅಭಿನಂದಿಸುವವರೇ. ಸಿ. ಜಿ. ಕೆ. ಲೈಟಿಂಗ್ ಡಿಸೈನರ್ ಆಗಿ ಹೊರ ಹೊಮ್ಮಿದ್ದರು. ಮುಂದೆ ಅನೇಕ ನಾಟಕಗಳಿಗೆ, ನೃತ್ಯ ಕಾರ್ಯಕ್ರಮಗಳಿಗೆ ಅವರು ಬೆಳಕಿನ ಸಂಯೋಜನೆಯನ್ನು ಅತ್ಯಂತ ಯಶಸ್ವಿಯಾಗಿ ಮಾಡಿದರು. ಮುದ್ದಣ್ಣನಂತಹ ಯುವ ಲೈಟಿಂಗ್ ಡಿಸೈನರನ್ನು ರೂಪಿಸಿದ ಖ್ಯಾತಿ ಕೂಡಾ ಅವರದೇ.

'ಸಮುದಾಯ'ಆಗ ರಂಗ ತರಬೇತಿ ಕಾರ್ಯಾಗಾರಗಳನ್ನು ಏರ್ಪಡಿಸುತ್ತಿತ್ತು. ಆಗ ಈಗಿನಂತೆ ವ್ಯವಸ್ಥಿತವಾಗಿ ರಂಗ ಶಿಕ್ಷಣ ನೀಡುವ ಸಂಸ್ಥೆಗಳಿರಲಿಲ್ಲ. ಖ್ಯಾತ ನಿರ್ದೇಶಕರುಗಳನ್ನು ಕರೆಸಿ ಅವರಿಂದ ಆಗ ತಾನೇ ರಂಗ ಭೂಮಿಗೆ ಕಾಲಿಡುತ್ತಿದ್ದ ಯುವಕರಿಗೆ ತರಬೇತಿ ನೀಡುವ ಕೆಲಸ ಆದಾಗಿತ್ತು. ಪ್ರಸನ್ನ, ಬಾದಲ್ ಸರ್ಕಾರ್, ಶ್ರೀನಿವಾಸ ಪ್ರಭು ಮುಂತಾದವರು ಈ ರೀತಿಯ ಕಾರ್ಯಾಗಾರಗಳನ್ನು ನಡೆಸಿಕೊಟ್ಟಿದ್ದರು. ಸಿ. ಜಿ. ಕೆ. ಈ ಕಾರ್ಯಾಗಾರಗಳನ್ನು ನಡೆಸಲು ಬೇಕಾದ ಎಲ್ಲಾ ಸಿದ್ಧತೆಗಳನ್ನು ಮಾಡುತ್ತಿದ್ದರು. ಆದರೆ ಅವರೇ ಸ್ವತಃ ಯಾವುದೇ ಕಾರ್ಯಾಗಾರದಲ್ಲಿ ಭಾಗವಹಿಸಿ ತರಬೇತಿ ಪಡೆಯಲಿಲ್ಲ. "ನನಗೆ ರಂಗಶಿಕ್ಷಣವನ್ನು ಇಂತಹ ಕಾರ್ಯಾಗಾರಗಳಲ್ಲಿ ಕಲಿಯಲು ಎಂದೂ ಮನಸ್ಸಾಗಿಲ್ಲ. ಕಾರಣ ನನಗೆ ಮೊದಲಿಂದಲೂ ದ್ರೋಣ, ಭೀಷ್ಮರ ಬಗ್ಗೆ ನಂಬಿಕೆ ಇಲ್ಲ. ನನ್ನಲ್ಲಿರುವ ಏಕಲವ್ಯ ಸಂಸ್ಕೃತಿಯ ದೆಸೆಯಿಂದ ಇದುವರೆಗೂ ನಾನು ಯಾವುದೇ ರಂಗಶಿಬಿರದಲ್ಲಿ ಶಿಬಿರಾರ್ಥಿಯಾಗಿ ಭಾಗಿಯಾಗಲಿಲ್ಲ. ಆದರೆ ಇಂತಹ ಶಿಬಿರಾರ್ಥಿಗಳ ಸಾಧನೆ ನನ್ನ ಸಾಧನೆಯ ಮುಂದೆ ತೀರಾ ಕಮ್ಮಿ"ಎನ್ನುತ್ತಾರೆ ಸಿ. ಜಿ. ಕೆ. . ಅದು ನಿಜ ಕೂಡಾ. ಸಿ. ಜಿ. ಕೆ. ಇಂದು ರಂಗಭೂಮಿಯಲ್ಲಿ ಮಾಡಿರುವ ಸಾಧನೆ ಅವರ ಸ್ವಂತ ಪರಿಶ್ರಮದಿಂದ ಬಂದದ್ದು. ಅವರದು ಏಕಲವ್ಯ ಪ್ರತಿಭೆ ಮತ್ತು ಸಾಧನೆ. ಅದಕ್ಕೆ ಬೇಕಾದ ಛಲ, ಪರಿಶ್ರಮ, ಮಹತ್ವಾಕಾಂಕ್ಷೆ ಮತ್ತು ಕಲ್ಪನೆ ಅವರಲ್ಲಿ ಮನೆ ಮಾಡಿದ್ದವು. ಸೂಕ್ತ ಕಾಲದಲ್ಲಿ ಅದಕ್ಕೆ ತಕ್ಕ ರೂಪು ಕೊಡುವಲ್ಲಿ ಅವರು ಯಶಸ್ವಿಯಾಗಿದ್ದಾರೆ.

ಸಿ. ಜಿ. ಕೆ. ನಿರ್ದೇಶನ ಮತ್ತು ಬೆಳಕಿನ ವಿನ್ಯಾಸಕ್ಕೆ ಕೈ ಹಾಕಿದಷ್ಟೇ ಆಕಸ್ಮಿಕವಾಗಿ ನಾಟಕದ ಬರವಣಿಗೆಗೂ ಕೈ ಹಾಕಿದರು. ಬೆಂಗಳೂರಿನ ಕೊಳಗೇರಿಗಳಲ್ಲಿ ಜನರಿಗೆ ಅರಿವು ಮೂಡಿಸಲು ನಾಟಕ ಪ್ರದರ್ಶಿಸಬೇಕೆಂಬ ಬಯಕೆಯಿಂದ ಸಮುದಾಯದ ಗೆಳೆಯರು ಕೊಳಗೇರಿಗೆ ಹೋಗಲು ಮುಂದಾದರು. ಅಲ್ಲಿ ರಾಜಕೀಯ ಪ್ರಜ್ಞೆ ಮೂಡಿಸುವುದಕ್ಕೆ ಬೇಕಾದ ಯಾವ ಸಿದ್ಧ ಸ್ಕ್ರಿಪ್‌ಗಳು ಆಗ ಇರಲಿಲ್ಲ. ಕೊಳೆಗೇರಿಗಳಲ್ಲಿ ಇದ್ದವರು ಬಹುತೇಕ ಮಂದಿ ದಲಿತರು. ತಲತಲಾಂತರದಿಂದ ರಾಜಕೀಯ ಮುಂದಾಳುಗಳ ಆಡೊಂಬಲವಾಗಿದ್ದವರು. ಅಂಥವರಿಗೆ ಅವರು ಹೇಗೆ ರಾಜಕೀಯವಾಗಿ ಶೋಷಣೆಗೆ ಒಳಗಾಗುತ್ತಿದ್ದಾರೆ ಹಾಗೂ ಮೇಲ್ಜಾತಿಯವರ ಕಾರ್ಯಗಳಿಗೆ ತುತ್ತಾಗುತ್ತಿದ್ದಾರೆ ಎಂಬುದನ್ನು ತಿಳಿಸಿ ಹೇಳಬೇಕಾಗಿತ್ತು. ಜನತಾ ಪಕ್ಷ ಮೊರಾರ್ಜಿಯವರ ಮುಂದಾಳತ್ವದಲ್ಲಿ ಅಧಿಕಾರ ಸ್ವೀಕರಿಸಿದ ಕೆಲವೇ ದಿನಗಳಲ್ಲಿ ಬಿಹಾರ್ ರಾಜ್ಯದ ಬೆಲ್ಚಿ ಎಂಬ ಗ್ರಾಮದಲ್ಲಿ ಹೊಲೆಮಾದಿಗರನ್ನು ಅಲ್ಲಿಯ ಜಮೀನ್ದಾರರು, ರಾಜಕಾರಣಿಗಳು, ಜೀವಂತ ಸುಟ್ಟಿದ್ದರು. ಅದು ಆಗ ದೇಶದಾದ್ಯಂತ ಸುದ್ದಿಯಾಗಿ, ಪತ್ರಿಕೆಗಳಲ್ಲಿ

ವಿವರಗಳೊಂದಿಗೆ ಪ್ರಕಟವಾಗುತ್ತಿತ್ತು. ಅದು ಸಿ. ಜಿ. ಕೆ. ಯವರ ಗಮನ ಸೆಳೆಯಿತು. ಬೆಲ್ಚಿ ದುರಂತ ವಿಷಯವೇ ನಾಟಕಕ್ಕೆ ಸೂಕ್ತ ವಸ್ತು ಎಂದು ನಾಟಕ ರಚನೆಯ ಓ ನಾಮ ತಿಳಿಯದ ಸಿ. ಜಿ. ಕೆ. ನಾಟಕ ಬರೆಯಲು ಕೂತರು.

ಸ್ಲಂ ಎಂದರೆ ಎಲ್ಲಾ ರಾಜಕೀಯ ಪಕ್ಷಗಳು ಕನ್ನೆನೆಲ. ತಮಗೆ ಬೇಕೆಂದಾ ಮತ ಹಾಕುವ ಓಟು ಬ್ಯಾಂಕುಗಳು ಎಂದು ತಿಳಿದುಕೊಂಡಿದ್ದ ಕಾಲ ಅದು ಹೆಚ್ಚು ಕಡಿಮೆ ಸ್ವಾತಂತ್ರ್ಯ ಬಂದು ಪಕ್ಷ ರಾಜಕಾರಣವಾಗಿ ಆರಂಭವಾದ ದಿನಗಳಿಂದ ಎಲ್ಲಾ ರಾಜಕೀಯ ಪಕ್ಷಗಳೂ ಅಲ್ಲಿ ಖಾಯಂ ತಳ ಊರಿದ್ದವು. ಅಂಥ ಸ್ಲಂನಲ್ಲಿ ಎಲ್ಲಾ ರಾಜಕೀಯ ಪಕ್ಷಗಳನ್ನೂ ಟೀಕಿಸಿ, ಖಂಡಿಸಿ ನಾಟಕ ಮಾಡುವುದು ಸಲಭದ ಮಾತಾಗಿರಲಿಲ್ಲ. ಅಂಥದೊಂದು ನಾಟಕ ಬರೆಯಬೇಕೆಂದು ಸಿ. ಜಿ. ಕೆ. ನಿರ್ಧರಿಸಿದ್ದರು.

ಅಲ್ಲಿಯವರೆಗೆ ಸಿ. ಜಿ. ಕೆ. ಯವರಿಗೆ ಪ್ರೊಸೀನಿಯಂ ನಾಟಕಗಳೆಂದರೆ ಅವು ಪ್ರತಿಷ್ಠಿತ ವರ್ಗದವರ ನಾಟಕಗಳೆಂಬ ಅಭಿಪ್ರಾಯ ಇತ್ತು. ಅದರಿಂದಾಗಿ ತಾನು ಬರೆಯುತ್ತಿರುವುದು ಕೊಳೆಗೇರಿಯ ಹುಡುಗರಿಗೆ ಎಂಬ ಪ್ರಜ್ಞೆ ಈ ನಾಟಕದ ಹಿಂದೆ ಕೆಲಸ ಮಾಡುತ್ತಿತ್ತು. ಬರವಣಿಗೆ ನಾಟಕ ಬೀದಿ ನಾಟಕದ ಸ್ವರೂಪ ಪಡೆಯಿತು. ಶ್ರೀರಾಂಪುರ, ವಿನೋಬಾ ನಗರ, ಮಾವಳ್ಳಿ ನಗರದ ಸ್ಲಂ ಹುಡುಗರು ನಾಟಕ ಅಭಿನಯಿಸಲು ಮುಂದಾದರು. ಇಂದು ಪ್ರಖ್ಯಾತ ರಂಗ ಕರ್ಮಿಗಳಾಗಿರುವ ಜನಾರ್ಧನ, ಸಿ. ಬಸವಲಿಂಗಯ್ಯ ಮುಂತಾದರವರು ಇಲ್ಲಿಂದಲೇ ಬಂದವರು.

'ಬೆಲ್ಚಿ' ನಾಟಕ ಊಳಿಗಮಾನ್ಯ ವ್ಯವಸ್ಥೆ ಮತ್ತು ರಾಜಕೀಯ ವ್ಯವಸ್ಥೆಗಳನ್ನು ಒಂದು ಹೊಸ ಸಂಬಂಧದಲ್ಲಿ ವ್ಯಾಖ್ಯಾನಿಸುವ ಪ್ರಯತ್ನ ಮಾಡಿತ್ತು. ನಾಟಕ ಅತ್ಯಂತ ಯಶಸ್ವಿಯಾಯಿತು. ಅನೇಕ ಪ್ರದರ್ಶನಗಳನ್ನು ಕಂಡಿತು. ಮುಂದೆ ಅದು 'ದಶಕದ ಬೀದಿ ನಾಟಕ' ಎಂಬ ಪ್ರಶಂಸೆಯನ್ನು ಗಳಿಸಿತು. ಸಮುದಾಯ ಸಂಘಟಿಸಿದ ಪ್ರಥಮ ಜಾಥಾದಲ್ಲಿ ಆ ನಾಟಕ ರಾಜ್ಯಾದ್ಯಂತ ಪ್ರದರ್ಶನಗೊಂಡು ಅಧಿಕ ಜನರ ಮೆಚ್ಚುಗೆ ಗಳಿಸಿತ್ತು. ಸಿ. ಜಿ. ಕೆ. ನಾಟಕವನ್ನು ಬರೆದು ನಿರ್ದೇಶಿಸಿದ್ದರು. ರಾಜಕೀಯ ವಸ್ತುವನ್ನು ರಂಗಮಾಧ್ಯಮಕ್ಕೆ ಅಳವಡಿಸಲು ಬೇಕಾದ ಸಮರ್ಥ ತಂತ್ರಗಳನ್ನು ಅವರು ಅದರಲ್ಲಿ ಬಳಸಿಕೊಂಡಿದ್ದರು. ಅಲ್ಲಿಯವರೆಗೆ ಬರೀ ಸಂಘಟನಕಾರ ಎಂದು ಹೆಸರಾಗಿದ್ದ ಅವರು ಪ್ರಥಮ ಬಾರಿಗೆ ತಮ್ಮ ಸೃಜನ ಶೀಲತೆಯ ಒಂದು ತುಣುಕನ್ನು ಸಾರ್ವಜನಿಕವಾಗಿ ಪ್ರದರ್ಶಿಸಿ ಎಲ್ಲರೂ ವಿಸ್ಮಯಗೊಳ್ಳುವಂತೆ ಮಾಡಿದ್ದರು. 'ಬೆಲ್ಚಿ'ತನ್ನ ಗರ್ಭದಲ್ಲಿ ಸಿ. ಜಿ. ಕೆ. ಬೆಳೆಯಬಹುದಾದ ಎಲ್ಲಾ ಸಂಭವನೀಯ ಇತ್ಯಾತ್ಮಕ ಲಕ್ಷಣಗಳನ್ನು ಹೊಂದಿತ್ತು. 'ಬೆಲ್ಚಿ'ಕರ್ನಾಟಕದಲ್ಲಷ್ಟೇ ಅಲ್ಲ ಮದರಾಸು ಕಲ್ಕತ್ತಾಗಳಲ್ಲೂ ಪ್ರದರ್ಶನಗೊಂಡು ಅಪಾರ ಜನಪ್ರಿಯತೆ ಗಳಿಸಿತು.

'ಸಮುದಾಯ' ಇಡೀ ಕರ್ನಾಟಕದಲ್ಲಿ ತನ್ನ ಘಟಕಗಳನ್ನು ಸ್ಥಾಪಿಸಿದ ಮೇಲೆ ರಾಜ್ಯಾದ್ಯಂತ ಒಂದು ಸಾಂಸ್ಕೃತಿಕ ಜಾಥಾ ಹೊರಡಬೇಕೆಂಬ ಯೋಜನೆ ಹಾಕಿಕೊಂಡಿತು. ಸಂಘಟನೆಯ ಕಾರ್ಯದರ್ಶಿಯಾಗಿ ಸಿ. ಜಿ. ಕೆ. ಗೆ ಬಿಡುವಿಲ್ಲದ ಕೆಲಸ, ಓಡಾಟ. ಈ ಮಧ್ಯೆ ಮನೆಯಲ್ಲಿ 'ಮದುವೆಯಾಗು' ಎಂಬ ವರಾತ. ಎಷ್ಟೇ ಸಬೂಬು ಹೇಳಿ ಮದುವೆಯ ಪ್ರಸ್ತಾಪ ಮುಂದೆ ಹಾಕಲು ನೋಡಿದರೂ ದಿನದಿಂದ ದಿನಕ್ಕೆ ತಂದೆ ತಾಯಿಗಳ ಒತ್ತಾಯ ಹೆಚ್ಚಾಗುತ್ತಲೇ ಹೋಯಿತು. ಅವರ ಒತ್ತಾಯಕ್ಕೆ ಮಣಿದು, ಕಾಟ ಕಳೆಯಲಿ ಎಂಬ ನಿರ್ಲಿಪ್ತ ಮನೋಭಾವದಿಂದ ಮದುವೆಗೆ ಆಗಲಿ ಅಂದರು. ಮನೆಯವರು ಚಿತ್ರದುರ್ಗದ ಕಡೆಯ ಯಾವುದೋ ಒಂದು ಹೆಣ್ಣನ್ನು ನೋಡಿದ್ದರು. 'ನೀವು ನೋಡಿದರೆ ಸಾಕು, ನಾನು ನೋಡುವುದಿಲ್ಲ' ಎನ್ನುವಷ್ಟು ನಿರ್ಲಿಪ್ತತೆ. ಚಿತ್ರದುರ್ಗದ ಹೆಣ್ಣು ಮನೆಯವರಿಗೇ ಅಷ್ಟಾಗಿ ಹಿಡಿಸದೆ, ಅವರಲ್ಲೇ ಮಾತುಕತೆಯಾಗಿ ನಾಲ್ಕನೇ ಅಕ್ಕನ ಮಗಳಾದ ಜಯಲಕ್ಷ್ಮಿಯನ್ನು ಮದುವೆ ಮಾಡುವುದೆಂದು ತೀರ್ಮಾನಿಸಿದರು. ಸಿ. ಜಿ. ಕೆ. ಅದೊಂದು 'ಶಾಸ್ತ್ರ' ಎಂಬಂತೆ 1979ರ ಮೇ 18ರಂದು ಜಯಲಕ್ಷ್ಮಿಯವರೊಡನೆ ವಿವಾಹವಾದರು. ಜಯಲಕ್ಷ್ಮಿಯವರನ್ನು ಮದುವೆಯಾಗಿ ಸಿ. ಜಿ. ಕೆ. ಬದುಕಿದರೇ ಹೊರತು, ಸಿ. ಜಿ. ಕೆ. ಯವರನ್ನು ಮದುವೆಯಾಗಿ ಜಯಲಕ್ಷ್ಮಿ ಉಂಡ ಸುಖ ಅಷ್ಟರಲ್ಲೇ ಇದೆ.

ಸಮುದಾಯದ ಜಾಥಾ ಆಗಿನ ಕಾಲದ ಒಂದು ಐತಿಹಾಸಿಕ ಘಟನೆ. ಜಾಥಾ ಎಂದರೆ ಏನೆಂದು ಅರ್ಥವಾಗದ ದಿನಗಳವು. ಸರ್ವಾಧಿಕಾರದ ವಿರುದ್ಧ ಪ್ರಜಾಪ್ರಭುತ್ವವಾದಿ ಮೌಲ್ಯಗಳನ್ನು ಜನರ ಮಧ್ಯೆ ತಿಳಿಸಿ ಹೇಳಲು ಆಯೋಜಿಸಿದ ಜಾಥಾ ಅದು. ಅಂಥದೊಂದು ಬೃಹತ್ ಜಾಥಾ ನಡೆಸುವುದು ಸಾಮಾನ್ಯ ಕೆಲಸವಲ್ಲ. ಅನೇಕ ದಿನಗಳ ತಯಾರಿ ಆಗಬೇಕು, ನಾಟಕಗಳ ಸಿದ್ಧತೆ ಆಗಬೇಕು. ಅನೇಕ ಜನ ಕಾರ್ಯಕರ್ತರನ್ನು ವಿವಿಧ ಸ್ಥಳಗಳಲ್ಲಿ ಸಂಘಟಿಸಬೇಕು. ಜಾಥಾದಲ್ಲಿ ಸಾತತ್ಯ ಕಾಪಾಡಿಕೊಳ್ಳಲು ಪ್ರಾರಂಭದಿಂದ ಕಡೆಯವರೆಗೆ ಕೆಲವರಾದರೂ ಇರುವಂತೆ ನೋಡಿಕೊಳ್ಳಬೇಕು. ಮುಖ್ಯವಾಗಿ ಇದಕ್ಕೆ ಹಣಕಾಸಿನ ವ್ಯವಸ್ಥೆ ಆಗಬೇಕು. ಸಮುದಾಯ ಇದೇ ಸಮಯದಲ್ಲಿ 'ವಾರ್ತಾಪತ್ರ' ತರುತ್ತಿತ್ತು. ಅದರ ಮೂಲಕ ಜಾಥಾದ ವಿವರಗಳು ಪ್ರಕಟವಾಗುತ್ತಿದ್ದವು. ಜೊತೆಗೆ ಜಾಥಾದ ಸಂದರ್ಭದಲ್ಲಿ ಹೋದ ಹೋದ ಕಡೆಯಲ್ಲಿ ಮಾರಾಟ ಮಾಡಲೆಂದು ಕೆಲವು ಪುಸ್ತಿಕೆಗಳನ್ನು ಸಮುದಾಯ ಪ್ರಕಟಿಸಿತ್ತು. ಈ ಬೃಹತ್ ಸಂಘಟನೆಯ ಹಿಂದೆ ಪ್ರಸನ್ನ ಅವರ ಚಿಂತನೆ ಮತ್ತು ಸಿ. ಜಿ. ಕೆ. ಅವರ ಚೈತನ್ಯ ಕೆಲಸ ಮಾಡುತ್ತಿತ್ತು. ಜೊತೆಗೆ ಅಸಂಖ್ಯಾತ ಮಂದಿ ಕಲಾವಿದರು, ಚಿಂತಕರು, ಹಿತೈಷಿಗಳಿದ್ದರೂ ಬಹು

ಮುಖ್ಯವಾಗಿ ಜಾಥಾ ರೂಪು ಗೊಂಡಿದ್ದು ಇವರಿಬ್ಬರ ಕ್ರಿಯಾಶೀಲತೆಯಿಂದಾಗಿ. ಆ ದಿನಗಳಲ್ಲಿ ಸಿ. ಜಿ. ಕೆ. ನನಗೆ ತಿಳಿದ ಹಾಗೆ ಮಲಗಿ ನಿದ್ದೆ ಮಾಡಿದ್ದೇ ಇಲ್ಲ. ನಿದ್ದೆ ಏನಿದ್ದರೂ ಪ್ರಯಾಣದಲ್ಲಿ ಮಾತ್ರ. ಅಷ್ಟೊಂದು ಬಾರಿ ಇಡೀ ಕರ್ನಾಟಕ ಸುತ್ತಿ ಜಾಥಾ ಹೋಗಬಹುದಾದ ರೂಟ್ ಮ್ಯಾಪೊಂದನ್ನು ಸಿದ್ಧಪಡಿಸಲು ಅನುಕೂಲ ಮಾಡಿಕೊಟ್ಟಿದ್ದರು. ಹೀಗೆ "ಹೊಸ ಸಾಂಸ್ಕೃತಿಕ ಮೌಲ್ಯಗಳತ್ತ ಸಮುದಾಯ ಜಾಥಾ"ಹೊರಡಲು ಸಿದ್ಧತೆಗಳಾದವು.

ಜಾಥಾ ಎರಡು ಬಿಂದುವಿನಿಂದ ಪ್ರಾರಂಭವಾಗುವುದೆಂದು ನಿರ್ಧಾರವಾಯಿತು. 15. 10. 1979 ರಂದು ಏಕಕಾಲದಲ್ಲಿ ಕೋಲಾರ ಜಿಲ್ಲೆಯ ಕೆ. ಜಿ. ಎಫ್. ನಿಂದ ಪ್ರಸನ್ನ ನೇತೃತ್ವದಲ್ಲಿ ಒಂದು ತಂಡ , ಬೀದರ್‌ನಿಂದ ಸಿ. ಜಿ. ಕೆ. ನೇತೃತ್ವದಲ್ಲಿ ಇನ್ನೊಂದು ತಂಡ. ಈ ಎರಡೂ ತಂಡಗಳೂ 14. 11. 1979ರಂದು ಧಾರವಾಡದಲ್ಲಿ ಸೇರುವುದು ಎಂದು ನಿರ್ಧರಿಸಲಾಯಿತು.

ಸಿ. ಜಿ. ಕೆ. ತನ್ನ ನೇತೃತ್ವದ ತಂಡಕ್ಕೆ 'ಬೆಲ್ಚಿ'. 'ಭಾರತದರ್ಶನ' 'ಛಸ್‌ನಾಲಾ' ನಾಟಕಗಳನ್ನು ನಿರ್ದೇಶಿಸಿದ್ದರು. ಹೋದ ಹೋದ ಕಡೆಯೆಲ್ಲಾ ಈ ನಾಟಕಗಳು ಜನರನ್ನು ಬಹಳ ದೊಡ್ಡ ರೀತಿಯಲ್ಲಿ ಆಕರ್ಷಿಸಿದ್ದವು. ಆ ಜಾಥಾದಲ್ಲಿ ಇದ್ದ ಪ್ರತಿಯೊಬ್ಬರಿಗೂ ಅವರು ಒಂದು "ಅದಮ್ಯ ಪ್ರೋತ್ಸಾಹಕ ಶಕ್ತಿಯಾಗಿ ಕಾಡಿದ್ದರು."

ಜಾಥಾ ನಂತರದ 'ಸಮುದಾಯ' ನಮಗೆಲ್ಲಾ ಒಂದು ಆದರ್ಶವಾಗಿತ್ತು. ಜಾಥಾಕ್ಕೆ ಸಿಕ್ಕಿದ ಅಭೂತಪೂರ್ವ ಯಶಸ್ಸು ನಮ್ಮನ್ನು ಕ್ರಾಂತಿಯ ಹೆಬ್ಬಾಗಿಲಿಗೆ ತಂದು ನಿಲ್ಲಿಸಿದೆ ಎಂದು ತಿಳಿದಿದ್ದೆವು. ವಾಸ್ತವವನ್ನು ಮರೆತು ಆದರ್ಶದಲ್ಲಿ ತೇಲುತ್ತಿದ್ದ ದಿನಗಳವು. ಸಿ. ಜಿ. ಕೆ. ತಾನು ಕೆಲಸ ಮಾಡುತ್ತಿದ್ದ ಬೆಂಗಳೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರದ ವಿಭಾಗದ ಕಡೆ ಸುಳಿದು ಎಷ್ಟೋ ದಿನಗಳಾಗಿದ್ದವು. ಅದು ಹೋಗಲಿ, ಹೊಸದಾಗಿ ಮದುವೆಯಾಗಿದ್ದರೂ, ಮನೆಯ ಕಡೆ ಸುಳಿದು ಎಷ್ಟೋ ದಿನಗಳಾಗಿದ್ದವು. ಅವರಿಗೆ ಹಣದ ತೊಂದರೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿತ್ತು. ಸಮುದಾಯದ ಸಂಗಾತಿಗಳು ಅವರ ಹಣದ ತಾಪತ್ರಯಕ್ಕೆ ಜವಾಬ್ದಾರರಾಗಬೇಕು ಎಂಬ ಮಾತು ಬಂದರೂ ನೆರವು ಬಂದದ್ದು ಅಷ್ಟರಲ್ಲೇ ಇದೆ. ಈ ಮಧ್ಯೆ ಎರಡನೆಯ ಜಾಥಾ ಹೊರಡುವುದರ ಬಗ್ಗೆ ಕೆಲವು ಸಂಗಾತಿಗಳು ಚರ್ಚಿಸ ತೊಡಗಿದರು. ಅಷ್ಟರಲ್ಲಿ ಪ್ರಸನ್ನ ತಾವೇ ಬರೆದ ನಾಟಕ 'ದಂಗೆಯ ಮುಂಚಿನ ದಿನಗಳು' ನಿರ್ದೇಶನಕ್ಕೆ ತೆಗೆದುಕೊಂಡರು.

ಅಷ್ಟು ಹೊತ್ತಿಗೆ ಸಿ. ಜಿ. ಕೆ. ಗೆ ಮೊದಲನೆಯ ಮಗು ಕೀರ್ತಿ ಹುಟ್ಟಿದ್ದ. ಮಗುವಿಗೆ ಆರೋಗ್ಯ ತೀರಾ ಕೆಟ್ಟಿತ್ತು. ಪರಿಚಯವಿದ್ದ ಡಾಕ್ಟರ್ ಒಬ್ಬರು ಮಗುವನ್ನು ಮಾರ್ಥಾಸ್

ಆಸ್ಪತ್ರೆಗೆ ಸೇರಿಸಿದರು. 'ದಂಗೆಯ ಮುಂಚಿನ ದಿನಗಳು'ನಾಟಕದ ಮೊದಲನೇ ಪ್ರದರ್ಶನದ ಬೆಳಕಿನ ವಿನ್ಯಾಸದ ಕೆಲಸ ಮುಗಿಸಿ ರಾತ್ರಿ ಆಸ್ಪತ್ರೆಗೆ ಹೋದರು. ಆಸ್ಪತ್ರೆಯಲ್ಲಿ ಅವರ ತಾಯಿ, ತಂದೆ, ಹೆಂಡತಿ ತಿರಸ್ಕಾರ ಹಾಗೂ ಕೋಪದಿಂದ ಅವರನ್ನು ಮಾತನಾಡಿಸುವ ಗೋಜಿಗೇ ಹೋಗಲಿಲ್ಲ. ಡಾಕ್ಟರ್ ಬಂದು 'ಕೂಡಲೇ ಕೆಲವು ಔಷಧಿಗಳು ಬೇಕಾಗಿವೆ. ಬೇಗ ತರಿಸಿ' ಎಂದು ಪ್ರಿಸ್ಕ್ರಿಪ್ಷನ್ ಚೀಟಿ ಕೊಟ್ಟರು. ಜೇಬಿನಲ್ಲಿ ಹಣ ಇಲ್ಲ. ಚೀಟಿ ಹಿಡಿದು ಕಬ್ಬನ್ ಪೇಟೆಯ ಮೆಡಿಕಲ್ ಶಾಪೊಂದರ ಬಳಿ ಹೋದರು. ಮೈ ಮೇಲಿನ ಬಟ್ಟೆಯಲ್ಲಿ ಕನಿಷ್ಠ ನಾಲ್ಕು ಜೇಬುಗಳಿದ್ದವು. ಒಂದು ಜೇಬಿನಲ್ಲಿಯೂ ಒಂದು ಪೈಸೆಯೂ ಇಲ್ಲ. ಔಷಧಿ ಹೇಗೆ ಖರೀದಿಸುವುದು? ಕೊನೆಗೂ ಮೆಡಿಕಲ್ ಶಾಪ್ ಬಳಿ ನಿಂತು, ಚೀಟಿ ತೋರಿಸಿ, ಎಷ್ಟು ಹಣ ಆಗಬಹುದೆಂದು ಕೇಳಿದರು. ಅಂಗಡಿಯ ಮಾಲೀಕ ಇನ್ನೂರು ಚಿಲ್ಲರೆ ಆಗಬಹುದು ಎಂದ. ಕೂಡಲೇ ಬಲಗೈನಲ್ಲಿದ್ದ ಎಚ್.ಎಂ.ಟಿ ಗೋಲ್ಡ್ ವಾಚನ್ನು ಬಿಚ್ಚಿ ಅಂಗಡಿಯವನ ಮುಂದಿರಿಸಿ'' ಸದ್ಯಕ್ಕೆ ಔಷಧಿ ಕೊಡಬಹುದಾ ಇದನ್ನು ಇಟ್ಟುಕೊಂಡು? ನಾಳೆ ಹಣ ಹಿಂತಿರುಗಿಸ್ತೀನಿ" ಎಂದರು. ಅಂಗಡಿಯವನು ಒಮ್ಮೆ ಮುಖ ನೋಡಿ , 'ಆಗಲಿ' ಎಂದು ಔಷಧಿ ಕೊಟ್ಟ. ಔಷಧಿ ತಂದು ಕೊಟ್ಟಾಗಲೇ ತಿಳಿದದ್ದು, ತಂದೆ, ತಾಯಿ, ಹೆಂಡತಿ ಮಧ್ಯಾಹ್ನದಿಂದ ಏನೂ ತಿಂದಿಲ್ಲ ಎಂದು.

ಆಸ್ಪತ್ರೆಯಿಂದ ಹೊರಗೆ ಬಂದು, ಜಿನುಗುವ ಮಳೆಯಲ್ಲಿ ಒಬ್ಬರೇ ಕುಳಿತರು. ಇಷ್ಟು ಹೊತ್ತಿಗೆ ನಾಟಕ ಮುಗಿದಿರಬಹುದು. ಕಡೇ ಪಕ್ಷ ಇಂದಿನ ಕಲೆಕ್ಷನ್‌ನಿಂದ ನನಗೆ ಬೇಕಾದ ಹಣವನ್ನು ಯಾರಾದರೂ ತಂದಾರೆಂಬ ಆಸೆ. ಬೀಳುವ ಮಳೆ ಹನಿಯನ್ನು ಎಣಿಸುತ್ತ ತಲೆಯಲ್ಲಿ ಏಳುವ ಪ್ರಶ್ನೆಗಳಿಗೆ ಉತ್ತರ ಹುಡುಕತೊಡಗಿದರು. ಕಡೆಗೂ ಯಾರನ್ನು ದೂಷಿಸಲಿ ಎಂಬ ಅಸಹಾಯಕತೆ! ಬರೀ ಬಿಕ್ಕಳಿಕೆ. ಏಕಾಂತದ ಮೌನ ಅಸಹ್ಯವಾಗತೊಡಗಿತ್ತು. ಅಷ್ಟರಲ್ಲಿ ಶಶಿಧರ ಅಡಪ ಹುಡುಕಿಕೊಂಡು ಬಂದರು. ಅವರ ಬಳಿ ಹಣ ಇರಬಹುದೆಂದುಕೊಂಡರು. ಅವರ ಬಳಿಯೂ ಹಣ ಇಲ್ಲ. ಅಸಹಾಯಕತೆಯ ತುತ್ತ ತುದಿ ಅದು. ಆ ಶಶಿಧರ ಅಡಪ ತನ್ನ ಜುಬ್ಬದ ಜೇಬು ತಡಕಿ ಎಂಟಾಣೆ ನಾಣ್ಯವೊಂದನ್ನು ಹೊರತೆಗೆದು, ಕಲಾಕ್ಷೇತ್ರಕ್ಕೆ ಫೋನ್ ಮಾಡಿದರೆ ಯಾರಾದರೂ ಸಿಕ್ಕಬಹುದು ಎಂದರು. ಪಬ್ಲಿಕ್ ಬೂತಿನಲ್ಲಿ ಎಂಟಾಣೆ ಹಾಕಿ ಡಯಲ್ ಮಾಡಿ 'ಕಲಾಕ್ಷೇತ್ರಾನಾ?' ಎಂದರೆ, 'ರಾಂಗ್ ನಂಬರ್' ಎಂಬ ಉತ್ತರ. ಹತಾಶೆಯಿಂದ ರಿಸೀವರ್ ಇಟ್ಟು ಕೋಪದಿಂದ ಟೆಲಿಫೋನ್ ಗುದ್ದಿದರು. ಕೆಳಗೆ ಪಟಪಟನೆ ಉದುರಿದ್ದು ನಲವತ್ತಕ್ಕೂ ಹೆಚ್ಚು ಎಂಟಾಣೆ ನಾಣ್ಯಗಳು. ಅವೆಲ್ಲವನ್ನೂ ಆರಿಸಿಕೊಂಡು ತಿಂಡಿ

ತರಲು ಇಬ್ಬರೂ ಹೊರಟರು.

ವಾಪಸ್ ಆಸ್ಪತ್ರೆಗೆ ಬಂದು ಮೂಲೆಯೊಂದರಲ್ಲಿ ಕೂತರು. ಎದುರಿಗೆ ಏಸುವಿನ ಫೋಟೋ . ಅದನ್ನು ನೋಡುತ್ತಲೇ ಮೈಸೂರಿನ ಮಿಷನ್ ಆಸ್ಪತ್ರೆಯ ನೆನಪು. ಅಂದು ಅವರ ತಾಯಿ ಮಗನ ಕಾಲು ಗುಣವಾಗಲೆಂದು ಏಸುವಿನ ಮುಂದೆ ಕ್ಯಾಂಡಲ್ ಹಚ್ಚಿದ್ದರು. ಇಂದು ಸಿ. ಜಿ. ಕೆ. ತನ್ನ ಮಗನ ಕಾಯಿಲೆ ಗುಣವಾಲೆಂದು ಉರಿಯುತ್ತಿದ್ದ ಕ್ಯಾಂಡಲ್‌ನ ಮೇಲೆ ಕೈಯಿಟ್ಟು ಮೈ ಕಾಯಿಸಿಕೊಳ್ಳುತ್ತಿದ್ದರು. ಆಗ ಎದುರಿಗಿದ್ದ ಒಂದು ಪೋಸ್ಟರ್ ಕಣ್ಣಿಗೆ ಬಿತ್ತು. "Don't lead me, I may not follow you; Don't follow, I may not lead you; But come with me let us go together". ಇದನ್ನು ಓದಿದ ಕೂಡಲೇ ಒಂದು ನಿರ್ಧಾರಕ್ಕೆ ಬಂದರು. "ನಾನು ನೇತಾರನೂ ಅಲ್ಲ, ಸಂಸ್ಕೃತಿಯ ವಕ್ತಾರನೂ ಅಲ್ಲ". ಆಗ ಅವರಿಗೆ ಅನಿಸಿದ್ದು. "ನನಗೆ ಮನೆ ಬೇಕು, ಮಗು ಬೇಕು'ಎಂದು.

ಡಾಕ್ಟರ್ ಬಂದು ಮಗು ಅಪಾಯದಿಂದ ಪಾರಾಗಿದೆ ಎಂದರು. ಆಗ ಬೆಳಗಿನ ಜಾವ . ಶಶಿಧರ ಅಡಪ, 'ನಾನು ಹಣತರ್ತೀನಿ ಸಾರ್, ಕಲಾಕ್ಷೇತ್ರಕ್ಕೆ ಎಷ್ಟೊತ್ತಿಗೆ ಬರ್ತೀರಿ?' ಎಂದರು. ಅಂದು ನಾಟಕದ ಪುನರ್ ಪ್ರದರ್ಶನವಿತ್ತು. ಸಿ. ಜಿ. ಕೆ. ನಿರ್ಲಿಪ್ತತೆಯಿಂದ 'ನಾನು ಬರಲ್ಲ'ಅಂದರು. ಬಹಳ ದಿನಗಳ ನಂತರ ಮುಖ ಕೂಡಾ ತೊಳೆಯದೆ ಸೆಂಟ್ರಲ್‌ಕಾಲೇಜ್ ಕಡೆ ಹೆಜ್ಜೆ ಹಾಕಿದರು. ನಾಲ್ಕೈದು ತಿಂಗಳಿಂದ ಸಂಬಳ ಇಲ್ಲ. ಕೆಲಸವಾದರೂ ಮುಂದುವರಿದೀತೆ ಎಂಬ ನಂಬಿಕೆಯೂ ಇರಲಿಲ್ಲ. ಪ್ರೊಫೆಸರ್ ವೆಂಕಟಗಿರಿಗೌಡರ ಮುಂದೆ ತಮ್ಮ ಪರಿಸ್ಥಿತಿ ವಿವರಿಸಿದರು. ಗೌಡರು ಎರಡು ಸಾವಿರ ರೂಪಾಯಿಗಳಿಗೆ ಚೆಕ್ ನೀಡಿ, 'ಹೋಗು ಮಗುವನ್ನು ನೋಡಿಕೊ' ಅಂದರು. ಸಿ. ಜಿ. ಕೆ. ಯ ಕಣ್ಣಿಂದ ಮಡುಗಟ್ಟಿದ ನೀರು ಧಾರಾಕಾರವಾಗಿ ಹರಿದಿತ್ತು. ಅಂದೇ ನಿರ್ಧರಿಸಿದರು, 'ಸಮುದಾಯ' ದೊಂದಿಗೆ ತನ್ನ ಸಂಬಂಧವನ್ನು ತಾತ್ಕಾಲಿಕವಾಗಿ ಯಾದರೂ ಬಂದ್ ಮಾಡಬೇಕೆಂದು. ಅವರ ತೀರ್ಮಾನ ಕೇಳಿ ಸಮುದಾಯದ ಗೆಳೆಯರು ತಮ್ಮ ತಪ್ಪನ್ನು ಒಪ್ಪಿಕೊಂಡು ಮರಳಿ ಸಂಘಟನೆಗೆ ಬರುವಂತೆ ಒತ್ತಾಯಿಸಿದರು. ಸಿ. ಜಿ. ಕೆ. ಮರಳಲು ನಿರಾಕರಿಸಿದರು. ಮುಂದೆ ಸಿ. ಜಿ. ಕೆ. ಸಮುದಾಯಕ್ಕೆ ಅನೇಕ ನಾಟಕಗಳನ್ನು ನಿರ್ದೇಶಿಸಿದರೂ, ಅದರ ಸಕ್ರಿಯ ಸದಸ್ಯರಾಗಿ ಉಳಿಯಲಿಲ್ಲ.

## ೨. ಸಮುದಾಯ ಮತ್ತು ರಂಗಸಂಪದದ ನಡುವೆ ಸಿ. ಜಿ. ಕೆ.

ಮನೆಯ ಪರಿಸ್ಥಿತಿ ಹದಗೆಟ್ಟಿತ್ತು. ಮೊದಲಿಗೆ ಮನೆಯ ಪರಿಸ್ಥಿತಿ ಸುಧಾರಿತವಾಗಬೇಕು. ಅಲ್ಲಿಯವರೆಗೆ ಮನೆ ಎಂಬುದೊಂದು ಇದೆ ಎನ್ನುವುದನ್ನೇ ಸಿ. ಜಿ. ಕೆ. ಮರೆತಿದ್ದರು. ರಂಗದ ಮೇಲೆ ಯಾವ ವಸ್ತುಗಳು ಇರಬೇಕು, ಎಷ್ಟು ಚೆನ್ನಾಗಿ ಕಾಣಬೇಕು ಎಂದು ಕ್ಷಣ ಕ್ಷಣಕ್ಕೂ ಲೆಕ್ಕಾ ಹಾಕುತ್ತಾ ಇದ್ದ ಸಿ. ಜಿ. ಕೆ. ಗೆ ತನ್ನ ಮನೆಯ ಪರಿಸ್ಥಿತಿ ಕಂಡು ಖೇದವಾಯಿತು. ಕತ್ತಲಲ್ಲಿ ಕೂತು 'ಕತ್ತಲೆ ದಾರಿದೂರ'ನಾಟಕದ 'ನಾವು ಸಮಾಜವನ್ನು ನೋಡ್ಕೋತೀವಿ, ಸಮಾಜದೋರು ನಮ್ಮ ಮನೆಯವ್ರನ್ನ ನೋಡ್ಕೋತಾರೆ' ಎಂಬ ಸಂಭಾಷಣೆಯನ್ನು ಜ್ಞಾಪಿಸಿಕೊಂಡರು. ಅದೊಂದು ಕ್ರೂರ ವ್ಯಂಗ್ಯ ಅನಿಸಿತು. ಆದರೂ ಮನಸ್ಸಿನಲ್ಲಿ ನೂರಾರು ಗೊಂದಲಗಳು. ತಾನು ಸಂಘಟನೆ ಬಿಟ್ಟಿದ್ದು ಸರಿಯೆ? ಮನೆಯನ್ನು ನಿರ್ಲಕ್ಷಿಸಿದ್ದು ಸರಿಯೆ? ಉದ್ಯೋಗವನ್ನು ನಿರ್ಲಕ್ಷಿಸಿದ್ದು ಸರಿಯೆ? ಈ ಪ್ರಶ್ನೆಗಳು ಒಂದೇ ಸಮನೆ ತಲೆತಿನ್ನ ತೊಡಗಿದವು. ಈ ಒಳತೋಟಿಗಳ ನಡುವೆಯೇ ಸಿ. ಜಿ. ಕೆ. ನಿಧಾನವಾಗಿ ಮನೆಯವರೊಂದಿಗೆ ಒಂದಾಗ ತೊಡಗಿದರು. ಸೆಂಟ್ರಲ್ ಕಾಲೇಜಿನಲ್ಲಿ ಹೆಚ್ಚು ಕಾಲ ಕಳೆಯತೊಡಗಿದರು. ಶೈಕ್ಷಣಿಕ ವಲಯದ ಹಳೆಯ ಗೆಳೆಯರು ಮತ್ತೆ ಹತ್ತಿರ ಬರತೊಡಗಿದರು.

ಪ್ರೊ. ಕೆ. ವೆಂಕಟಗಿರಿಗೌಡರು ಈ ಅವಧಿಯಲ್ಲೇ 'ನಮ್ಮ ವಿಭಾಗದಲ್ಲಿ ಅಧ್ಯಾಪಕರ ಹುದ್ದೆಗಳಿಗೆ ಅರ್ಜಿ ಕರೆಯಲಾಗಿದೆ. ಅಪ್ಲಿಕೇಷನ್ ಹಾಕು' ಎಂದರು.

ಮಧ್ಯೆ ಮಧ್ಯೆ ಕಲಾಕ್ಷೇತ್ರದ ಆಕರ್ಷಣೆ ಸೆಳೆಯುತ್ತಿದ್ದರೂ ಪ್ರಯತ್ನಪೂರ್ವಕ ವಾಗಿಯೇ ಆ ಕಡೆ ಹೋಗುವುದನ್ನು ನಿಲ್ಲಿಸಿದರು. ಹಳೆಯ ಗೆಳೆಯರ ಜೊತೆ ಹೊರ ಪ್ರವಾಸಗಳಿಗೆ ಹೋಗಿ ಬಂದರು. ಆದರೂ ರಂಗಭೂಮಿಯ ಸಂಪರ್ಕದಿಂದ ಸಿ. ಜಿ. ಕೆ. ಹೊರಗೆ ಉಳಿಯಲು ಆಗಲೇ ಇಲ್ಲ. ಅನಂತಮೂರ್ತಿಯವರ 'ಸಂಸ್ಕಾರ' ಕಾದಂಬರಿಯಲ್ಲಿ ಒಂದು ಮಾತು ಬರುತ್ತದೆ. ''ನಾರಣಪ್ಪ ಬ್ರಾಹ್ಮಣ್ಯವನ್ನು ಬಿಟ್ಟರೂ ಬ್ರಾಹ್ಮಣ್ಯ ನಾರಣಪ್ಪನನ್ನು ಬಿಡಲಿಲ್ಲ'' ಎಂಬುದೇ ಆ ಮಾತು. ಸಿ. ಜಿ. ಕೆ, ಜೆ. ಲೋಕೇಶ್ , ಕೇಶವರಾವ್, ವೆಂಕಟಸುಬ್ಬಯ್ಯ ಮುಂತಾದವರು ಆ ತಂಡದ ಪ್ರಮುಖರು. ಕಾರ್ನಾಡರ 'ಯಯಾತಿ' ಜಡಭರತರ 'ಕದಡಿದ ನೀರು' , ಕಂಬಾರರ ಅನೇಕ ನಾಟಕಗಳನ್ನು ರಂಗಕ್ಕೆ ತಂದ ಕೀರ್ತಿ ಅವರದಾಗಿತ್ತು. ಒಂದು ದಿನ ಜೆ. ಲೋಕೇಶ್ ಇದ್ದಕಿದ್ದಂತೆ ತನ್ನ ಮೋಟಾರ್ ಬೈಕಿನಲ್ಲಿ ಸಿ. ಜಿ. ಕೆ. ಮನೆಗೆ ಬಂದು ಬಿ. ವಿ. ವೈಕುಂಠರಾಜು ಅವರ ಹೊಸ ನಾಟಕ 'ಸಂದರ್ಭ'ದ ರೀಡಿಂಗ್ ಇದೆ ಬಾ ಎಂದು ಕರೆದರು. ಮನೆಯಲ್ಲಿಯೇ ಕೂತು ಸಾಕಷ್ಟು ಬೇಸರವಾಗಿದ್ದ ಸಿ. ಜಿ. ಕೆ.

ಮೋಟಾರ್ ಸೈಕಲ್ ಹತ್ತಿದರು. ಸಿ. ಜಿ. ಕೆ. ಈ ಮೋಟಾರ್ ಬೈಕ್ ಪ್ರಯಾಣ ಮುಂದೆ ಒಂದು ಮಹಾನ್ ರಂಗ ಪ್ರಸ್ಥಾನವಾಗಲಿದೆ ಎಂದು ಬಹುಶಃ ಅಂದು ತಿಳಿದಿರಲಿಕ್ಕಿಲ್ಲ.

ಬಿ. ವಿ. ವೈಕುಂಠರಾಜು ಅಂದು 'ಪ್ರಜಾವಾಣಿ' ಯಲ್ಲಿ ಕೆಲಸದಲ್ಲಿದ್ದರು. ಆಧುನಿಕ ರಂಗಭೂಮಿಯ ಬೆಳವಣಿಗೆಯಲ್ಲಿ ಅವರ ಪಾತ್ರ ದೊಡ್ಡದು. ತಮ್ಮ ವಿಮರ್ಶೆಗಳಿಂದ ಅವರು ಅನೇಕ ಪ್ರತಿಭಾವಂತ ನಿರ್ದೇಶಕರು, ನಟರು ಮತ್ತು ನಾಟಕಕಾರರಿಗೆ ಬೇಕಾದ ಪ್ರಚಾರ ಕೊಡುತ್ತಿದ್ದರು. ಅಲ್ಲದೆ ಸ್ವತಃ ನಾಟಕಗಳನ್ನು ರಚಿಸಿದವರು. ಸಿ. ಜಿ. ಕೆ., ಲೋಕೇಶ್, ಕಪ್ಪಣ್ಣ ಮುಂತಾದವರ ಜೊತೆ ರಂಗಭೂಮಿಯನ್ನು ಶೂದ್ರ ಶಕ್ತಿಗಳ ಸಂಘಟನೆಯ ಬಗ್ಗೆ ಚರ್ಚಿಸುತ್ತಿದ್ದವರು. ಈ ಮಧ್ಯೆ ಸಿ. ಜಿ. ಕೆ. ಯಿಂದ ಪ್ರಜಾವಾಣಿ ಕಾರ್ಮಿಕ ಸಂಘಕ್ಕೆ ಲಿಂಗದೇವರು ಹಳೆಮನೆಯವರ 'ಚಿಕ್ಕದೇವಭೂಪ' ನಾಟಕವನ್ನು ನಿರ್ದೇಶಿಸಿದ್ದರು. ವೈಕುಂಠ ರಾಜು ಅವರ 'ಸಂದರ್ಭ'ನಾಟಕವನ್ನು ಅಶೋಕ್ ಬಾದರದಿನ್ನಿ ಅತ್ಯಂತ ಯಶಸ್ವಿಯಾಗಿ ನಿರ್ದೇಶಿಸಿದರು. ಸಿ. ಜಿ. ಕೆ. ಯ ಒಡನಾಟ 'ರಂಗಸಂಪದ' ದೊಂದಿಗೆ , ವೈಕುಂಠರಾಜು ಅವರೊಂದಿಗೆ ಹೀಗೇ ಮುಂದುವರೆದಿತ್ತು. 'ಸಂದರ್ಭ'ದ ನಂತರ ವೈಕುಂಠರಾಜು ಇನ್ನೊಂದು ನಾಟಕ ಬರೆಯುವುದೆಂತಲೂ, ಅದನ್ನು ರಂಗ ಸಂಪದಕ್ಕೆ ಸಿ. ಜಿ. ಕೆ. ನಿರ್ದೇಶನ ಮಾಡಬೇಕೆಂತಲೂ ಮಾತುಗಳು ಹೊರಟವು. ಈಗ ಸಿ. ಜಿ. ಕೆ. ಗೆ ನಿಜವಾಗಲೂ ಪೀಕಲಾಟ ಶುರುವಾಯಿತು. ಯಾಕೆಂದರೆ, ಈಗಾಗಲೇ ಕ್ರಮಿಸಿದ್ದ ದಾರಿ ಜೀವನದ ಅರ್ಧದಷ್ಟಾಗಿತ್ತು. ಈಗ ನಿರ್ದೇಶಕನಾಗಬೇಕೆ? ಇಲ್ಲ, ಈ ಎಲ್ಲಾ ಕ್ರಿಯಾತ್ಮಕ ಚಟುವಟಿಕೆಗಳಿಗೆ ಬೆನ್ನು ತಿರುಗಿಸಿ ವಿಶ್ವವಿದ್ಯಾಲಯದ ಪಂಡಿತನಾಗಬೇಕೆ? ದ್ವಂದ್ವಗಳು ಪ್ರಾರಂಭವಾದವು. ಕಡೆಗೂ ಗೆದ್ದದ್ದು ರಂಗಭೂಮಿ. ಅರ್ಥಶಾಸ್ತ್ರದ ಪದವಿ ಗಳಿಸಿಕೊಟ್ಟ ಉದ್ಯೋಗ ಬದುಕಿನ ಆಸರೆಗಷ್ಟೇ ಸೀಮಿತ ವಾಯಿತು. ತಾತ್ಕಾಲಿಕವಾಗಿ ರಂಗಭೂಮಿಯಿಂದ ದೂರ ಉಳಿದಿದ್ದ ಸಿ. ಜಿ. ಕೆ. ರಂಗಸಂಪದದ ಮೂಲಕ ತಮ್ಮ ನಿಜವಾದ ಇನ್ನಿಂಗ್ಸ್ ಆರಂಭಿಸಿದರು.

### ೩. ರಂಗಸಂಪದ ಮತ್ತು ಸಿ. ಜಿ. ಕೆ.

ಸಮುದಾಯ ಸಿ. ಜಿ. ಕೆ. ಯ ಸಂಘಟನಾ ಸಾಮರ್ಥ್ಯವನ್ನು ಪರಿಚಯಿಸಿದರೆ, ರಂಗಸಂಪದ ಸಿ. ಜಿ. ಕೆ. ಯ ರಂಗ ನಿರ್ದೇಶನಾ ಪ್ರತಿಭೆಯನ್ನು ಪರಿಚಯಿಸಿತು. ಸಿ. ಜಿ. ಕೆ. ಯ ಅತ್ಯಂತ ಯಶಸ್ವೀ ರಂಗ ಪ್ರದರ್ಶನಗಳು ಮೂಡಿ ಬಂದದ್ದು ಈ ತಂಡದ ಮೂಲಕ. ಸಿ. ಜಿ. ಕೆ. ಆತ್ಮ ವಿಶ್ವಾಸ ಕಳೆದುಕೊಂಡಿದ್ದ ಸಂದರ್ಭದಲ್ಲಿ

ವಿಶ್ವಾಸವಿಟ್ಟು ಮತ್ತೆ ರಂಗಭೂಮಿಗೆ ಅವರು ಬರುವಂತೆ ಮಾಡಿದ್ದು ರಂಗಸಂಪದ. ತಂಡದ ಪ್ರತಿಯೊಬ್ಬ ಸದಸ್ಯರನ್ನು ಅರಿಯುವ, ಅವರ ಮನಸ್ಥಿತಿಯನ್ನು ಪರಿಚಯ ಮಾಡಿಕೊಳ್ಳುವ ಜೊತೆಗೆ ತನ್ನ ಮನಸ್ಥಿತಿಯನ್ನು ಅವರಿಗೆ ಪರಿಚಯಿಸುವ ಕೆಲಸವನ್ನು ಅವರು ಮಾಡಬೇಕಿತ್ತು.

ವೈಕುಂಠರಾಜು ನಾಟಕ ಬರೆಯಬೇಕಾಗಿತ್ತಾದರೂ ಅದರ ವಸ್ತು ಏನು ಎಂಬುದು ಅವರಿಗೇ ಸ್ಪಷ್ಟವಿರಲಿಲ್ಲ. ಸಿ. ಜಿ. ಕೆ. ಸಹಾ ನಾಟಕದ ವಸ್ತುವಿನ ಬಗ್ಗೆ ಚಿಂತಿಸ ತೊಡಗಿದರು. ಮುಂದೆ ಸಿ. ಜಿ. ಕೆ. ಇದೇ ಕ್ರಮವನ್ನು ಮುಂದುವರೆಸಿಕೊಂಡು ಬಂದರು. ಹೊಸ ನಾಟಕವೊಂದರ ರಚನೆಯಾಗುವಾಗ ನಾಟಕಕಾರರ ಜೊತೆ ನಾಟಕದ ವಸ್ತು, ಸ್ವರೂಪ, ಬಂಧ ಮುಂತಾದವುಗಳ ಬಗ್ಗೆ ಚರ್ಚಿಸುತ್ತಾ ನಾಟಕದ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆಯನ್ನು ಕೊಡುತ್ತಾ ಬಂದಿದ್ದಾರೆ. ತನ್ನ ಜೊತೆ ಕುಳಿತು ಚರ್ಚಿಸಲು ಒಪ್ಪದ ನಾಟಕಕಾರರ ಸ್ಕ್ರಿಪ್ಟ್‌ಗಳನ್ನು ಅವರು ನಿರ್ದೇಶನಕ್ಕೆ ಎತ್ತಿ ಕೊಳ್ಳುವುದನ್ನು ನಿರಾಕರಿಸಿದ್ದೂ ಇದೆ. ಹಾಗೆಂದು ಅವರೆಂದೂ ನಾಟಕದ ರಚನೆಯಲ್ಲಿ ನನ್ನ ಪಾಲಿದೆ ಎಂದು ಹಕ್ಕೊತ್ತಾಯ ಮಾಡಿದ್ದಿಲ್ಲ. ಬಹುಶಃ ನಾಟಕ ರಚನೆಯ ಸಂದರ್ಭದಲ್ಲಿ ಅವರು ಆ ರೀತಿಯಲ್ಲಿ ಭಾಗಿಯಾಗಿರುವುದರಿಂದಲೇ ತಮ್ಮ ನಿರೀಕ್ಷೆಗೆ ತಕ್ಕಂತೆ ಸ್ಕ್ರಿಪ್ಟ್‌ಗಳನ್ನು ಸಿದ್ಧ ಪಡಿಸಲು ಸಾಧ್ಯವಾಗಿರುವುದು. ಹೀಗೆ ಯೋಚಿಸುತ್ತಿರುವಾಗ 'ಕಾಲ್‌ಗರ್ಲ್'ಗಳ ಬಗ್ಗೆ ಯಾಕೆ ನಾಟಕ ಮಾಡಬಾರದು? ಎಂಬ ಆಲೋಚನೆ ಅವರಿಗೆ ಬಂತು. ತಮ್ಮ ಆಲೋಚನೆಯನ್ನು ವೈಕುಂಠರಾಜು ಅವರ ಬಳಿ ಹೇಳಿಕೊಂಡರು. ''ಹಾಗಾದರೆ ಬೀದಿ ಸೂಳೆಯರು, ಪೋಲೀಸರು, ಕೋರ್ಟಿನ ಆವರಣ, ತಲೆಹಿಡುಕರು, ಮನೆ ಒಡತಿಯರು, ಇವುಗಳನ್ನೆಲ್ಲಾ ವರದಿ ಮಾಡುವ ವರದಿಗಾರರು, ಹೀಗೆ ನಾಟಕವನ್ನು ಹೆಣೆದರೆ ಹೇಗೆ?''ಎಂದರು ವೈಕುಂಠರಾಜು. ಹೀಗೆ ಹುಟ್ಟಿದ್ದು 'ಸನ್ನಿವೇಶ'ನಾಟಕ. ಪತ್ರಿಕಾ ವರದಿಗಾರನೊಬ್ಬ ವೇಶ್ಯೆಯೊಬ್ಬಳನ್ನು ಆದರ್ಶದ ನೆಲೆಯಲ್ಲಿ ವಿವಾಹವಾಗಿ ಕಡೆಗೆ ತಾನು ಬೆಳೆದು ಬಂದ ಮೌಲ್ಯಗಳ ಹಿನ್ನೆಲೆಯಲ್ಲಿ ಅವಳೊಟ್ಟಿಗೆ ಬಾಳಲಾಗದ ಸಂಕೀರ್ಣ ಸ್ಥಿತಿಗೆ ಬಂದು ತಲುಪುತ್ತಾನೆ. ಆಧುನಿಕ ಸಮಾಜದ ಪ್ರಸ್ತುತ ಸಮಸ್ಯೆಯನ್ನು ಇಲ್ಲಿ ಕಾಣಬಹುದು. ಸತ್ಯ, ಸೌಂದರ್ಯದ, ಶ್ರಮದ ಹಾಗು ನಿಷ್ಠುರದ ಪ್ರತಿಪಾದನೆ ಈ 'ಸನ್ನಿವೇಶ' ನಾಟಕದೊಂದಿಗೆ ನನ್ನ ಜನರ ಕೂಗಾಗಿತ್ತು ಎನ್ನುತ್ತಾರೆ ಸಿ. ಜಿ. ಕೆ.. ನಾಟಕ ಅತ್ಯಂತ ಯಶಸ್ವಿಯಾಗಿ ಪ್ರದರ್ಶನ ಕಂಡಿತು. ಅತ್ಯಂತ ಯಶಸ್ವೀ ನಿರ್ದೇಶಕನಾಗಿ ಸಿ. ಜಿ. ಕೆ. ಹೊರಹೊಮ್ಮಿದ್ದರು.

'ಸನ್ನಿವೇಶ'ನಾಟಕದ ಯಶಸ್ಸಿನ ನಂತರ ಸಿ. ಜಿ. ಕೆ. ಮತ್ತೆ ನಿಯತವಾಗಿ ಕಲಾಕ್ಷೇತ್ರದ ಮೆಟ್ಟಿಲು ಹತ್ತತೊಡಗಿದರು. ಈ ಮಧ್ಯೆ ಆಕಾಶವಾಣಿಯ ಈರಣ್ಣ ಎಂದೇ ಹೆಸರಾಗಿದ್ದ ಎ. ಎಸ್. ಮೂರ್ತಿಯವರು ತಮ್ಮ 'ಅಭಿನಯ ತರಂಗ'ತಂಡಕ್ಕೆ ಬೀದಿ ನಾಟಕವೊಂದನ್ನು ನಿರ್ದೇಶಿಸುವಂತೆ ಸಿ. ಜಿ. ಕೆ. ಯವರನ್ನು ಕೇಳಿದರು. ''ಆಳುವ ರಾಜರು ಹೇಗೆ ಜಮೀನ್ದಾರರಾದರು; ಇದೇ ಜಮೀನ್ದಾರರು ಹೇಗೆ ಗಾಂಧಿವಾದದೊಟ್ಟಿಗೆ ತಮ್ಮನ್ನು ತಾವೇ ಬೆರೆಸಿಕೊಂಡರು; ಅನಂತರ ಎಲ್ಲಾ ರಾಜಕೀಯ ಪಕ್ಷದಲ್ಲಿ ಹೇಗೆ ಇವರು ಪಕ್ಷಾಂತರಿಗಳಾದರು; ಹಾಗೆಯೇ ಜೀತಗಾರರು ಎಲ್ಲಾ ಕಾಲಕ್ಕೂ ಹೇಗೆ ಜೀತಗಾರರಾಗಿಯೇ ಉಳಿದರು''ಎನ್ನುವುದು ನಾಟಕದ ವಸ್ತು. ದಲಿತ ಕವಿ ಸಿದ್ಧಲಿಂಗಯ್ಯ ಅರ್ಥವತ್ತಾದ ಹಾಡುಗಳನ್ನು ಬರೆದಿದ್ದರು. ನಾಟಕದ ಹೆಸರು ''ಅಲ್ಲೇ ಇದ್ದೋರು''. ನಾಟಕವನ್ನು ಸಿ. ಜಿ. ಕೆ. ಯವರೇ ಬರೆದಿದ್ದರು. ಎ. ಎಂ. ಪ್ರಕಾಶ್ ಈ ನಾಟಕದಿಂದ ಒಬ್ಬ ಪ್ರಮುಖ ರಂಗಕರ್ಮಿಯಾಗಿ ಹೊರ ಹೊಮ್ಮಿದರು. ನಾಟಕ ಯಶಸ್ವಿಯಾಗಿ ಪ್ರಶಂಸೆಯ ಸುರಿಮಳೆ ಗಿಟ್ಟಿಸಿಕೊಂಡಿತು.

ಅಷ್ಟು ಹೊತ್ತಿಗೆ ಬೆನಕ, ರಂಗಸಂಪದ, ಸೂತ್ರಧಾರ ತಂಡಗಳು 'ಬೆರಸೂ' ಎಂಬ ಹೆಸರಿನಿಂದ ದೆಹಲಿಯಲ್ಲಿ ಆರ್. ನಾಗೇಶ್ ನಿರ್ದೇಶನದ ನಾಟಕಗಳ ಉತ್ಸವವನ್ನು ಏರ್ಪಡಿಸಿದ್ದವು. ಅಂತಹ ಒಂದು ಉತ್ಸವವನ್ನು ನಾವು ಹಮ್ಮಿ ಕೊಳ್ಳಬೇಕು. ದೆಹಲಿ ಮುಟ್ಟಿದರೆ, ರಂಗಸಂಪದದ ಹೆಸರು, ಖ್ಯಾತಿ ದೇಶದಲ್ಲೆಲ್ಲಾ ಹರಡುತ್ತದೆ ಎಂಬುದು ಲೋಕೇಶ್ ಆಲೋಚನೆಯಾಗಿತ್ತು. ಹಾಗೆಯೇ ರಂಗಸಂಪದಿಂದ ನಾಟಕ ರಚನಾ ಸ್ಪರ್ಧೆಯೊಂದನ್ನು ಏರ್ಪಡಿಸುತ್ತಿರುವುದಾಗಿಯೂ, ಪ್ರಥಮ ಬಹುಮಾನ ಐದು ಸಾವಿರ, ದ್ವಿತೀಯ ಬಹುಮಾನ ಮೂರು ಸಾವಿರ, ತೃತೀಯ ಬಹುಮಾನ ಎರಡು ಸಾವಿರ ಎಂದು ಹೇಳಿದರು. ಜೊತೆಗೆ 'ನೀನ್ಯಾಕೆ 'ಒಂದು ನಾಟಕ ಬರೀ ಬಾರ್ದು'ಅಂತಾನೂ ಸೇರಿಸಿದರು. ಒಂದು ಕಡೆ ಬಹುಮಾನದ ಆಕರ್ಷಣೆ; ಇನ್ನೊಂದು ಕಡೆ ನಾಟಕ ಬರೆಯಬಲ್ಲೆನೆ ಎಂಬ ಆತಂಕ. ಅಷ್ಟರಲ್ಲಿ ದೇವನೂರ ಮಹಾದೇವ ಅವರ 'ಒಡಲಾಳ' ಕಿರು ಕಾದಂಬರಿ ಕಣ್ಣಿಗೆ ಬಿದ್ದು ಅದನ್ನು ಓದಿಯೂ ಆಗಿತ್ತು. ಅದನ್ನೊಂದು ಅತ್ಯಂತ ಯಶಸ್ವೀ ನಾಟಕ ಮಾಡಬಹುದೆಂದು ಅನ್ನಿಸಿತ್ತು. ಆದರೆ ಅದನ್ನು ತಾನೇ ನಾಟಕ ರೂಪಕ್ಕೆ ಪರಿವರ್ತಿಸಿದರೆ ಅದರ ಯಶಸ್ಸಿಗೆ ಎಲ್ಲಿ ಭಂಗ ಬರುತ್ತದೋ ಎಂಬ ಅಳುಕು. ಸಾಹಿತ್ಯದ ಮಿತ್ರರ ಮುಂದೆ ಇದನ್ನು ಪ್ರಸ್ತಾಪಿಸಿದಾಗ, 'ಅದು ನಾಟಕವಾಗಲು ಸಾಧ್ಯವೇ ಇಲ್ಲ'ಎಂದು ಹೇಳಿ ನಿರಾಶೆಗೊಳಿಸಿದ್ದರು. ಬೇರೆ ದಾರಿಕಾಣದೆ ಸಿ. ಜಿ. ಕೆ. ತಾವೇ ಸ್ವತಃ 'ಒಡಲಾಳ'ಕೃತಿಯನ್ನು ನಾಟಕ ರೂಪಕ್ಕೆ ತರಲು ಮುಂದಾದರು.

'ಒಡಲಾಳ'ದ ಪುರಾಣ ಬರೆದಷ್ಟೂ ಬೆಳೆಯುತ್ತದೆ. ಅದನ್ನು ಆದಷ್ಟು ಸಂಕ್ಷಿಪ್ತವಾಗಿ ಅಷ್ಟೇ ಪರಿಚಯಿಸುತ್ತಿದ್ದೇನೆ. 'ಒಡಲಾಳ'ಕನ್ನಡ ರಂಗಭೂಮಿಗೆ ಒಂದು ಹೊಸ ದಿಕ್ಕು ತಂದು ಕೊಟ್ಟ ನಾಟಕ. ಸಿ. ಜಿ. ಕೆ. ಯನ್ನು ಒಬ್ಬ ಅಪ್ರತಿಮ ಪ್ರತಿಭಾವಂತ ರಂಗ ನಿರ್ದೇಶಕನನ್ನಾಗಿ ಹೊರ ಜಗತ್ತಿಗೆ ತೋರಿಸಿಕೊಟ್ಟ ನಾಟಕ. 'ಒಡಲಾಳ' ನಾಟಕದ ರಚನೆ ಮತ್ತು ಸಿದ್ಧತೆಗೆ ಅವರು ಸುಮಾರು ಎರಡು ವರ್ಷಗಳಷ್ಟು ಸಮಯ ತೆಗೆದುಕೊಂಡಿದ್ದರು. 'ಒಡಲಾಳ'ಬೇರೆ ಯಾರದೋ ಕತೆ ಅಲ್ಲ, ನನ್ನ ಕುಟುಂಬದ ಕತೆ ಎಂದು ಅವರಿಗೆ ಅನ್ನಿಸತೊಡಗಿತ್ತು. ಇದನ್ನು ನಾಟಕ ಮಾಡಿಯೇ ತೀರಬೇಕು ಎಂಬ ಛಲ ದಿನದಿನಕ್ಕೆ ಗಟ್ಟಿಯಾಗುತ್ತಾ ಹೋಯಿತು. ಇಲ್ಲಿಯವರೆಗೆ ಕನ್ನಡ ರಂಗಭೂಮಿಯ ಮೇಲೆ ರಾರಾಜಿಸಿದ ಕನ್ನಡ ನಾಟಕಗಳ ಚಿತ್ರವೇ ಕಣ್ಣುಮುಂದೆ ತೇಲಿ ಹೋಯಿತು. ಇಲ್ಲ, ಒಡಲಾಳದಂತಹ ವಸ್ತುವುಳ್ಳ ಒಂದು ನಾಟಕವೂ ಅಲ್ಲಿರಲಿಲ್ಲ. ದೇವನೂರ ಮಹಾದೇವ ದಲಿತ ಕುಟುಂಬವೊಂದರ ಬಡತನ, ಹಸಿವು ಮತ್ತು ಸಂಕಟಗಳನ್ನು ಅತ್ಯಂತ ಸಾಂದ್ರವಾಗಿ ಹಿಡಿದಿಟ್ಟಿದ್ದ ಮಹಾನ್ ನೀಳ್ಗತೆ ಅದು. ಸಿ. ಜಿ. ಕೆ. ಯ ಮುಂದೆ ತಾನು ಬಾಲ್ಯದಲ್ಲಿ ಕಂಡ ಬಡತನ, ತನ್ನ ಕುಟುಂಬದಲ್ಲೇ ತಾನು ಕಂಡ ಅಜ್ಜಿಯರು, ಅವರುಗಳು ಬಳಸುತ್ತಿದ್ದ ಭಾಷೆ, ಬೈಗುಳ, ವರ್ತನೆಗಳು ಒಂದೊಂದಾಗಿ ಎದ್ದು ಬಂದು ಸಿ. ಜಿ. ಕೆ. ಯನ್ನು ಆವರಿಸಿಕೊಳ್ಳತೊಡಗಿದವು. 'ಒಡಲಾಳ'ದ ರಂಗಕೃತಿಯ ಕಲ್ಪನೆ ನಿಧಾನವಾಗಿ ಮೂಡತೊಡಗಿತು.

'ರಂಗಸಂಪದ'ತಂಡ ಈ ನಾಟಕವನ್ನು ತಯಾರಿಸಲು ಮುಂದೆ ಬಂತು. ಆದರೆ ಸಿ. ಜಿ. ಕೆ. ಯನ್ನು ತೀವ್ರವಾಗಿ ಕಾಡುತ್ತಿದ್ದ ಗುಂಗಿ ಹುಳುವೆಂದರೆ, ಒಡಲಾಳದ ಕೇಂದ್ರ ಪಾತ್ರವಾಗಿರುವ ಸಾಕವ್ವನನ್ನು ರಂಗದ ಮೇಲೆ ಸಮರ್ಥವಾಗಿ ಅಭಿನಯಿಸುವ ನಟಿ ಯಾರು? ಎಂಬುದು. ಆಗ ಅವರ ಕಣ್ಣಿಗೆ ಬಿದ್ದದ್ದು ಅಲ್ಲಿ ಇಲ್ಲಿ ಸಣ್ಣ ಪುಟ್ಟ ಪಾತ್ರಗಳನ್ನು ಮಾಡಿಕೊಂಡು ಓಡಾಡುತ್ತಿದ್ದ ಉಮಾಶ್ರೀ. ಉಮಾಶ್ರೀ ಇಂದು ಪ್ರಸಿದ್ಧ ನಟಿಯಾಗಿ ರೂಪುಗೊಂಡಿರುವುದಕ್ಕೆ ಮೂಲತಃ ಸಿ. ಜಿ. ಕೆ. ಕಾರಣ. ತನ್ನ ಕಲ್ಪನೆಯ ಸಾಕವ್ವನನ್ನು ಅವರು ಉಮಾಶ್ರೀಯಲ್ಲಿ ಕಂಡುಕೊಂಡಿದ್ದರು. ಮಿಕ್ಕ ಪಾತ್ರಗಳಿಗೆ ಕಷ್ಟಪಟ್ಟು ಅತ್ಯಂತ ಸೂಕ್ತ ನಟರನ್ನೇ ಹುಡುಕಿ ತೆಗೆದಿದ್ದರು. ರಂಗದ ಮೇಲೆ ಒಂದು ಹೊಲಗೇರಿಯನ್ನು ಸೃಷ್ಟಿಸುವ ರಂಗವಿನ್ಯಾಸ ಸಿದ್ಧಪಡಿಸಿದರು. ಭಾಷೆ, ವರ್ತನೆ, ವಸ್ತ್ರ ವಿನ್ಯಾಸ ಹೀಗೆ ಪ್ರತಿಯೊಂದರಲ್ಲೂ ಹೊಲಗೇರಿಯ ವಾಸ್ತವ ಸನ್ನಿವೇಶ ಸೃಷ್ಟಿಸಲು ಶ್ರಮಪಟ್ಟರು. ಬೆಂಗಳೂರಿನ ಪ್ರೇಕ್ಷಕರ ಮುಂದೆ ಹೊಸದೊಂದು ಅಧೋಲೋಕವನ್ನು ತೆರೆದು ತೋರಿಸುವ ಹಠ ಅವರ ಮುಂದೆ ಮೂಡಿ ನಿಂತಿತ್ತು. ಇನ್ನು ಚಿಕ್ಕ ವಯಸ್ಸಿನ

ಉಮಾಶ್ರೀಯನ್ನು ಅರವತ್ತರ ಹಣ್ಣು ಹಣ್ಣು ಮುದುಕಿಯನ್ನಾಗಿ ಮೇಕಪ್‌ನಲ್ಲಿ ಪರಿವರ್ತಿಸಬೇಕಾಗಿತ್ತು. ಮೇಕಪ್ ನಾಣಿಯವರು ಉಮಾಶ್ರೀಯನ್ನು ಮುದುಕಿಯಾಗಿಸಲು ಸುಮಾರು ಎರಡು ಗಂಟೆಯಷ್ಟು ಸಮಯ ತೆಗೆದುಕೊಳ್ಳುತ್ತಿದ್ದರು. ಕಪ್ಪಣ್ಣ ಬೆಳಕಿನ ವಿನ್ಯಾಸಕ್ಕೆ ಮುಂದಾದರು. ಹೀಗೆ ಸಿ. ಜಿ. ಕೆ. ತನ್ನ ಜೀವನದ ಮಹಾನ್ ರಂಗ ಸಾಧನೆಯ ಪ್ರದರ್ಶನಕ್ಕೆ ಅಣಿಯಾದರು.

'ಒಡಲಾಳ' ನ ಭೂತೋ ನ ಭವಿಷ್ಯತ್ ಎಂಬಷ್ಟು ಯಶಸ್ವಿಯಾಯಿತು. ಎಲ್ಲಾ ಕಡೆಯಿಂದ ಪ್ರಶಂಸೆಯ ಸುರಿಮಳೆಯಾದವು. ಮೊದಲ ಪ್ರದರ್ಶನದಲ್ಲಿಯೇ ಸಿ. ಜಿ. ಕೆ. ರಂಗಭೂಮಿಯ ಹೊಸತಾರೆಯಾಗಿ ಆವಿರ್ಭವಿಸಿ ಬಿಟ್ಟಿದ್ದರು. ಇದರ ಜೊತೆಗೇ ಉಮಾಶ್ರೀ ಅಭಿನಯದ ಬಗ್ಗೆ ಎಲ್ಲರೂ ಮಾತನಾಡುವವರೇ. ಅಂಥ ಪ್ರತಿಭೆ ಅಲ್ಲಿಯವರೆಗೆ ಬೆಳಕಿಗೆ ಬಾರದದ್ದಕ್ಕೆ ಎಲ್ಲರಿಗೂ ಆಶ್ಚರ್ಯ. ನಾಟಕದ ಬಂಧ, ಭಾಷೆ, ನಟರುಗಳ ಅಭಿನಯ, ಸಿ. ಜಿ. ಕೆ. ಒಂದೊಂದು ದೃಶ್ಯವನ್ನೂ ಬೆಳೆಸಿದ ರೀತಿ ಹೀಗೆ ನಾಟಕದ ಬೇರೆ ಬೇರೆ ಆಯಾಮಗಳ ಬಗ್ಗೆ ಚರ್ಚೆ, ಪ್ರಶಂಸೆ ನಡೆಯತೊಡಗಿದವು. ಮಾಧ್ಯಮಗಳಂತೂ ಬೆರಗು ಮತ್ತು ವಿಸ್ಮಯಗಳಿಂದ ನಾಟಕವನ್ನು ವಿಮರ್ಶಿಸಿದ್ದುವು.

'ಒಡಲಾಳ'ದ ಬಗ್ಗೆ ಬಂದ ಕೆಲವು ಮೆಚ್ಚುಗೆಯ ಮಾತುಗಳನ್ನು ನೋಡಬಹುದು.

> "ಕಲಾಕ್ಷೇತ್ರದ ಸಂಜೆಯ ಬಣ್ಣದ ಲೋಕದಲ್ಲಿ 'ರಂಗಮಂದಿರ'ದ ಕಲ್ಪನೆಯನ್ನು ವಾಸ್ತವಕ್ಕಿಳಿಸಿದ ರಂಗತಜ್ಞರ ಸಾಲಿನಲ್ಲಿ ಸಿ. ಜಿ. ಕೆ. ನನಗೆ ಭಿನ್ನರಾಗಿ ಕಂಡಿದ್ದು 'ಸಾಕವ್ವ'ನನ್ನು ಕಟೆದು ನಿಲ್ಲಿಸಿದಾಗ, ನನ್ನ ಕಣ್ಣ ಎದುರಿನ 'ಒಡಲಾಳ'ದ ದೃಶ್ಯಗಳು ಯಾವತ್ತೂ ಮಾಸದ ನೆನಪು. ದ್ಯಾವನೂರರ ಪುಟ್ಟ ಕಾದಂಬರಿಯನ್ನು ಜೀವಂತವಾಗಿರಿಸಿದ ಆ ದಿನಗಳು ನನಗೆ ಅದ್ಭುತ ಲೋಕ ಸೃಷ್ಟಿಸಿತ್ತು. ಉಮಾಶ್ರೀಯ ಸಾಕವ್ವನ ಪಾತ್ರ ನನ್ನ ಹಳ್ಳಿಗಾಡಿನ ಅಜ್ಜಿಯರ ನೆನಪು ಹೊತ್ತು ತಂದಿತ್ತು."
>
> – ಆರ್. ಜಿ. ಹಳ್ಳಿ ನಾಗರಾಜ್.

> "ಒಡಲಾಳ ರಂಗಕೃತಿ ಕಟ್ಟಿ, ಅದರಲ್ಲಿ ದಲಿತರ ಜೀವನದ ವಿರಾಟ್‌ರೂಪ ಕಂಡದ್ದು, ಅದನ್ನು ಯಶಸ್ವಿಯಾಗಿ ರಂಗದ ಮೇಲೆ ತಂದದ್ದು ಕನ್ನಡ ಹವ್ಯಾಸಿ ರಂಗಭೂಮಿಯಲ್ಲಿ ಒಂದು ಚೊಕ್ಕ ಮುದ್ರೆ . ಧಮಕ್ ಧಮಕ್ ಉಮಾಶ್ರೀಯೊಳಗಿನ ಸಾಕವ್ವಳನ್ನು ಹೊರತಂದದ್ದು ಅವರ ನಿರ್ದೇಶನ ಪ್ರತಿಭೆಯ ಹೆಗ್ಗುರುತು."
>
> – ಜಿ. ಎನ್. ರಂಗನಾಥ್‌ರಾವ್. ಪ್ರಜಾವಾಣಿ.

‘‘ದೇವನೂರರ ಒಂದೊಂದು ಅಕ್ಷರವೂ ರಂಗದಲ್ಲಿ ಮೈ ತಳೆದು ನಿಲ್ಲುವಂತೆ ಶ್ರಮಿಸಿದ್ದಾರೆ ಸಿ. ಜಿ. ಕೆ. ರಂಗಕ್ಕಳವಡಿಸಲು ಅಸಾಧ್ಯ ಎಂದು ಪರಿಗಣಿಸಿದ ಕೃತಿಯನ್ನು ಛಾಲೆಂಜಾಗಿ ತೆಗೆದುಕೊಂಡು, ಗೆಳೆಯರ ಪ್ರೋತ್ಸಾಹದಿಂದ ‘ಒಡಲಾಳ’ದ ಅಂತರಂಗವನ್ನು ಕೆದಕಿರುವ ಸಿ. ಜಿ. ಕೆ. ತಮ್ಮ ಹಿಂದಿನ ಅನೇಕ ಯಶಸ್ವಿ ನಾಟಕಗಳಿಗಿಂತಲೂ ಈ ನಾಟಕವನ್ನು ಉತ್ತಮವಾಗಿ ನಿರ್ದೇಶಿಸಿದ್ದಾರೆ. ಪಾತ್ರಗಳ ಆಯ್ಕೆಯಲ್ಲಿ ಮಾತ್ರವಲ್ಲದೆ, ಅವರ ಸಣ್ಣದೊಂದು ಚಲನವಲನವನ್ನು ಸೂಕ್ಷ್ಮವಾಗಿ ಪರಿಶೀಲಿಸಿದ್ದರಿಂದ ಗ್ರಾಮ್ಯ ಭಾಷೆಯ ಸೊಗಡಷ್ಟೆ ಅಲ್ಲದೆ ಅಲ್ಲಿಯ ಚಿತ್ರಣವೂ ಅಷ್ಟೇ ಗಟ್ಟಿಯಾಗಿ ನೈಜವಾಗಿ ಮೂಡಿದೆ.’’

– ಶಮಂತ. ಮುಂಜಾನೆ.

‘‘ಜೀವಂತಿಕೆ, ಕೆಳವರ್ಗದವರ ನೋವು, ಶೋಷಣೆ, ಅಸಹಾಯಕತೆಯನ್ನು ದೇವನೂರು ತಮ್ಮ ಒಂದೊಂದು ಅಕ್ಷರದಲ್ಲಿಯೂ ಇಳಿಸಿದ್ದಾರೆ, ಸಿ. ಜಿ. ಕೆ. ಈ ದಲಿತರ ನೋವಿಗೆ ತಮ್ಮ ದನಿ ಕೂಡಿಸಿ ಮತ್ತಷ್ಟು ಹರದಾರಿ ದೂರ ಕೇಳಿಸುವಂತೆ ಮಾಡಿದ್ದಾರೆ.’’

– ಗಣೇಶ್ ಕಾಸರಗೋಡು, ಚಿತ್ರದೀಪ.

‘ಒಡಲಾಳ’ಸಿ. ಜಿ. ಕೆ. ಯ ಒಡಲಾಳವನ್ನೇ ರಂಗದ ಮೇಲೆ ತೆರೆದಿಟ್ಟ ನಾಟಕ. ನಿರ್ದೇಶಕನೊಬ್ಬನ ಜೀವನದಲ್ಲಷ್ಟೇ ಅಲ್ಲ, ಒಂದು ರಂಗ ಪರಂಪರೆಯ ಬೆಳವಣಿಗೆಯ ಹಾದಿಯಲ್ಲೂ ಹೊಸ ಸಾಧ್ಯತೆಗಳನ್ನು ತೆರೆದು ತೋರಿಸಿದ ನಾಟಕ; ಅಲ್ಲಿಯವರೆಗೆ ಸೈದ್ಧಾಂತಿಕ ಹಿನ್ನೆಲೆಯ , ರಾಜಕೀಯ ಹಿನ್ನೆಲೆಯ, ಆಧುನಿಕ ನಾಟಕಗಳ ಹಿನ್ನೆಲೆಯ ಚಕ್ರವ್ಯೂಹದಲ್ಲಿ ಸುತ್ತುತ್ತಿದ್ದ ಕನ್ನಡ ರಂಗಭೂಮಿಯಲ್ಲಿ ಇದ್ದಕಿದ್ದಂತೆ ಸ್ಥಳೀಯ ದೀನದಲಿತರ ದನಿಯನ್ನು ತನ್ನೆಲ್ಲಾ ನೈಜ, ವಾಸ್ತವ ನೆಲೆಯಲ್ಲಿ ಪ್ರದರ್ಶಿಸಿದ ನಾಟಕ. ವಾಸ್ತವವಾದಿ ನೆಲೆಯಲ್ಲಿ ಪ್ರದರ್ಶಿತಗೊಂಡ ಈ ನಾಟಕ ತನ್ನ ವಸ್ತುವಿನ ಗಾಢ ತಟ್ಟುವಿಕೆ ಮತ್ತು ಸಮರ್ಥ ನಿರ್ದೇಶನದಿಂದಾಗಿ ಸಿ. ಜಿ. ಕೆ. ಯನ್ನು ರಂಗದ ಕೇಂದ್ರ ಭಾಗಕ್ಕೆ ತಂದು ನಿಲ್ಲಿಸಿತು. ಅಲ್ಲಿಂದ ಮುಂದೆ ಸಿ. ಜಿ. ಕೆ. ನಿರ್ದೇಶಿಸಿದ ನಾಟಕಗಳು ಅವರಲ್ಲಿರಬಹುದಾದ ಪ್ರತಿಭೆಯನ್ನು ಒಂದರ ನಂತರ ಒಂದು ಹೊರ ಹಾಕಿವೆ.

‘ಒಡಲಾಳ’ದ ಯಶಸ್ಸು ಯಾವ ಮಟ್ಟಕ್ಕೆ ಹೋಯಿತೆಂದರೆ, ಕೇವಲ 90 ದಿನಗಳಲ್ಲಿ 63 ಪ್ರದರ್ಶಗಳನ್ನು ನಾಡಿನಾದ್ಯಂತ ತಂಡ ನೀಡಿತ್ತು. ಹವ್ಯಾಸಿ ರಂಗಭೂಮಿಯಲ್ಲಿ ಅದೊಂದು ದೊಡ್ಡ ಸಾಧನೆಯಾಗಿತ್ತು. ಸಿ. ಜಿ. ಕೆ. ಒಬ್ಬ ಸಬಾಲ್ಟನ್ ರಂಗ ನಿರ್ದೇಶಕನಾಗಿ ಹೊರ ಹೊಮ್ಮಿದ್ದರು. ನಿರ್ಲಕ್ಷ್ಯಕ್ಕೆ ಒಳಗಾದವರ, ಶೋಷಣೆಗೆ,

ಒಳಗಾದವರ ಕಥಾವಸ್ತು ಸಿ. ಜಿ. ಕೆ. ಯ ಮೂಲಕ ರಂಗ ಶ್ರೀಮಂತಿಕೆ ಪಡೆದುಕೊಂಡು ಎಲ್ಲರನ್ನು ಬೆರಗುಗೊಳಿಸಿತ್ತು. ನಾಟಕದ ಥೀಮ್ ಬಡವರದ್ದಾದರೂ ನಾಟಕದ ಪ್ರದರ್ಶನ ಬಡವಾಗಿರಬಾರದು ಎಂಬದು ಅವರ ಧೋರಣೆ.

ಈ ಮಧ್ಯೆ ಸಿ. ಜಿ. ಕೆ. ಗೆ 'ನಾಟ್ಯಸಂಘ'ದ ಸಂಪರ್ಕ ಏರ್ಪಟ್ಟಿತು. 'ನಾಟ್ಯಸಂಘ'ದ ಪರವಾಗಿ ರಷ್ಯಾದಲ್ಲಿ ನಡೆಯಲಿದ್ದ ಸ್ಟ್ಯಾನ್‌ಸ್ಲೋವ್‌ಸ್ಕಿ ಸೆಮಿನಾರಿನಲ್ಲಿ ಭಾಗವಹಿಸುವ ಅವಕಾಶ ಸಿಕ್ಕಿತು. ತರಾತುರಿಯಲ್ಲಿ ಸ್ನೇಹಿತರ ಸಹಾಯ ಸಿಕ್ಕಿ ಅಲ್ಲಿ ಇಲ್ಲಿ ಸಾಲ ಮಾಡಿ ಮಾಸ್ಕೋದಲ್ಲಿ ನಡೆಯಲಿದ್ದ ಸೆಮಿನಾರಿಗೆ ಹೋದರು. 'ಸಮುದಾಯ' ಸಂಘಟನೆ ಸೇರುವ ಮೊದಲು, ಸೇರಿದ ನಂತರ ರಷ್ಯಾ ಕ್ರಾಂತಿಯ ಬಗ್ಗೆ, ಮಾರ್ಕ್ಸ್-ಲೆನಿನ್ ಸಿದ್ಧಾಂತದ ಬಗ್ಗೆ ಸಿ. ಜಿ. ಕೆ. . ಸಾಕಷ್ಟು ಓದಿಕೊಂಡಿದ್ದರು. ಆಗಿನ ಕಾಲದಲ್ಲಿ ಕ್ರಾಂತಿಯ ಬಗ್ಗೆ ಕನಸು ಕಾಣುತ್ತಿದ್ದ ಪ್ರತಿಯೊಬ್ಬ ಯುವಕ್ರಾಂತಿಕಾರಿಗೂ ರಷ್ಯಾ ಒಂದು ಆದರ್ಶವಾಗಿತ್ತು. ಅಂಥಾ ರಷ್ಯಾವನ್ನು ಕಂಡಾಗ ಅವರಿಗೆ ತಾವು ರಷ್ಯಾದ ಬಗ್ಗೆ ಕಟ್ಟಿಕೊಂಡಿದ್ದ ಅನೇಕ ಭ್ರಮೆಗಳು ನಿರಸನವಾದವು. ರಷ್ಯಾ ಆಗಲೇ ಆರ್ಥಿಕ ಬದಲಾಣೆಗಳಿಗೆ ತೆತ್ತುಕೊಂಡಿತ್ತು. ಯುವಕರಲ್ಲಿ ಕಮ್ಯುನಿಸಂ ಬಗ್ಗೆ ಅತೃಪ್ತಿ ಹೊಗೆಯಾಡುತ್ತಿತ್ತು. ಅಲ್ಲಿ ನಾಟಕ, ಬ್ಯಾಲೆ ಪ್ರದರ್ಶನ ನೋಡುವ ಅವಕಾಶ ದೊರಕಿದವು. ಹಾಗೆಯೇ ಬೇರೆ, ಬೇರೆ ದೇಶಗಳಿಂದ ಬಂದಿದ್ದ ಪ್ರತಿನಿಧಿಗಳೊಡನೆ ವಿಚಾರ ವಿನಿಮಯ ಮಾಡಿಕೊಳ್ಳುವ ಅವಕಾಶ ಸಿಕ್ಕಿತು. 'ಒಡಲಾಳ'ದ ಕಥೆ ಹೇಳಿ, ಅದರ ಕೆಲವು ದೃಶ್ಯಗಳನ್ನು ಪ್ರಾತ್ಯಕ್ಷಿಕೆಯ ಮೂಲಕ ತೋರಿಸಿದಾಗ ಸೆಮಿನಾರಿನಲ್ಲಿ ಭಾಗವಹಿಸಿದವರೆಲ್ಲಾ ಮೆಚ್ಚುಗೆ ಸೂಚಿಸಿದರು. ಸ್ಟ್ಯಾನ್‌ಸ್ಲೋವ್‌ಸ್ಕಿ ರಷ್ಯಾದ ಮಹಾನ್ ರಂಗ ನಿರ್ದೇಶಕ. 'ಮಾಸ್ಕೋ ಆರ್ಟ್ ಥಿಯೇಟರ್'ಎಂಬ ಸಂಸ್ಥೆ ಕಟ್ಟಿ ಅದರ ಮೂಲಕ ಅತ್ಯಂತ ವಾಸ್ತವವಾದಿ ನಾಟಕಗಳನ್ನು ಪ್ರದರ್ಶಿಸಿದವನು. ಅವನು ನಿರ್ದೇಶಿಸಿದ 'ಲೋಯರ್ ಡೆಪ್ತ್ಸ್' ಎಂಬ ಮ್ಯಾಕ್ಸಿಂ ಗಾರ್ಕಿಯ ನಾಟಕ ಪ್ರಥಮ ಬಾರಿಗೆ ಅಧೋಲೋಕದ ಪರಿಚಯವನ್ನು ರಂಗ ಭೂಮಿಯ ಮೇಲೆ ಮಾಡಿಸಿ ಇಡೀ ರಷ್ಯನ್ ಬೂರ್ಜ್ವಾ ಸಮಾಜವನ್ನು ಬೆಚ್ಚಿ ಬೀಳಿಸಿತ್ತು. ಸಿ. ಜಿ. ಕೆ. ಯ 'ಒಡಲಾಳ' ಕೂಡಾ ನಮ್ಮ ನೆಲದಲ್ಲಿ ಅದೇ ಕೆಲಸವನ್ನು ಮಾಡಿತ್ತು. ಸ್ಟ್ಯಾನ್‌ಸ್ಲೋವ್‌ಸ್ಕಿ ಜಗತ್ತಿನ ಶ್ರೇಷ್ಠ ರಂಗ ಸಿದ್ಧಾಂತಿ ಕೂಡಾ. ನಟನೆಯ ಬಗ್ಗೆ, ನಟರನ್ನು ತಯಾರು ಮಾಡುವ ಬಗ್ಗೆ ಅನೇಕರು ವ್ಯಕ್ತಪಡಿಸಿರುವ ಅನೇಕ ಚಿಂತನೆಗಳು ಇಂದಿಗೂ ಯುವ ನಿರ್ದೇಶಕರಿಗೆ ಮಾರ್ಗದರ್ಶನಗಳಾಗಿವೆ. ಸಿ. ಜಿ. ಕೆ. ಕೂಡಾ ಅವನ ರಂಗ ಸಿದ್ಧಾಂತಗಳಿಂದ ಪ್ರಭಾವಿತರಾದವರು. ಮಾಸ್ಕೋದ ಈ ಸೆಮಿನಾರ್ ಸಿ. ಜಿ. ಕೆ. ತಮ್ಮ ರಂಗಾಸಕ್ತಿಯ ಪರಿಧಿಗಳನ್ನು ವಿಸ್ತರಿಸಿಕೊಳ್ಳಲು ಸಹಾಯವಾಯಿತು.

ಮಾಸ್ಕೋದಿಂದ ವಾಪಸ್ ಬಂದ ಮೇಲೆ ಸಿ. ಜಿ. ಕೆ. ಗಮನ 12ನೇ ಶತಮಾನದ ಶರಣರ ಚಳುವಳಿಯ ಕಡೆ ತಿರುಗಿತು. ಪ್ರತಿಯೊಬ್ಬ ಪ್ರಜ್ಞಾವಂತ ವ್ಯಕ್ತಿಗೂ , ಹನ್ನೆರಡನೇ ಶತಮಾನದ ಆ ಚಳುವಳಿ ಮತ್ತೆ ಮತ್ತೆ ಕಾಡುತ್ತಿರುತ್ತದೆ. ಬಸವಣ್ಣ, ಮಹಾಮನೆ, ಅಲ್ಲಮ, ಅಕ್ಕಮಹಾದೇವಿ, ಅಸಂಖ್ಯಾತ ಕೆಳವರ್ಗದ ಶರಣರು ಸಿ. ಜಿ. ಕೆ. ಯ ಬಗೆಯನ್ನು ಬಗೆಯತೊಡಗಿದರು. ಈಗಾಗಲೇ ಪ್ರಕಟವಾಗಿದ್ದ ಲಂಕೇಶ್‌ರ 'ಸಂಕ್ರಾಂತಿ'ಓದಿದರು. ಆ ನಾಟಕದಲ್ಲಿ ಲಂಕೇಶ್ ಚಿತ್ರಿಸಿದ್ದ ಹೊಲೆಯರ ಕೇರಿಯ ದೃಶ್ಯಗಳು, ಉಜ್ಜನ ಪಾತ್ರ ಅವರನ್ನು ಅಪಾರವಾಗಿ ಆಕರ್ಷಿಸಿದ್ದವು. ಆದರೆ ಬಸವಣ್ಣ ನಿಲ್ಲದ ಕಲ್ಯಾಣವನ್ನು ಸಂಪೂರ್ಣವಾಗಿ ಪ್ರತಿನಿಧಿಸುವ ನಾಟಕ ನಾಟಕ ಅದಾಗಿರಲಿಲ್ಲ. ಬಸವಣ್ಣನಿಲ್ಲದ ಕಲ್ಯಾಣ ಎಂದರೆ, ಬಿಜ್ಜಳನಿರುವ, ಕೆಳವರ್ಗದ ಶರಣರು ಇರುವ ಕಲ್ಯಾಣ ಎಂದೇ ಅರ್ಥ. ಬಿಜ್ಜಳ ಮತ್ತು ಕೆಳವರ್ಗದ ಶರಣರ ಸಂಘರ್ಷಗಳನ್ನು ಪರಿಚಯಿಸುವ ನಾಟಕ ಯಾರು ಬರೆಯಬಲ್ಲರು ಎನ್ನುವಾಗ ಸಿಕ್ಕಿದವರು ಪ್ರತಿಭಾವಂತ ಕವಿ ಎಚ್. ಎಸ್. ಶಿವಪ್ರಕಾಶ್ ಅವರು. ಶಿವಪ್ರಕಾಶ್ ವಚನ ಸಾಹಿತ್ಯವನ್ನು ಕೂಲಂಕಷವಾಗಿ ಅಧ್ಯಯನ ಮಾಡಿದವರು. ಹೊಸ ರೀತಿಯ ಅಭಿವ್ಯಕ್ತಿಗಾಗಿ ಹುಡುಕಾಡುತ್ತಿದ್ದವರು. ತಮ್ಮ ಕಾವ್ಯದಲ್ಲಿ ಹೊಸ ನುಡಿಗಟ್ಟು, ರೂಪಕಗಳನ್ನು ಬಳಸಿ ಹೆಸರು ಮಾಡುತ್ತಿದ್ದವರು.

ಎಚ್. ಎಸ್. ಶಿವಪ್ರಕಾಶ್ ಮಡಿವಾಳ ಮಾಚಿದೇವ, ಹಡಪದ ಅಪ್ಪಣ್ಣ, ಬಿಜ್ಜಳ ಮತ್ತು ನೀಲಾಂಬಿಕೆಯನ್ನು ಕೇಂದ್ರವಾಗಿಟ್ಟುಕೊಂಡು ದುಡಿಯುವ ವರ್ಗದ ಆಶಯಗಳ ಮೂಲಕ ಬಸವನಿಲ್ಲದ ಕಲ್ಯಾಣವನ್ನು 'ಮಹಾಚೈತ್ರ'ದ ಮೂಲಕ ಕಟ್ಟಿಕೊಟ್ಟರು. 'ಮಹಾಚೈತ್ರ'ಪ್ರತಿಭಾವಂತ ನಾಟಕಕಾರನೊಬ್ಬನ ಹುಟ್ಟನ್ನು ಪ್ರಕಟಪಡಿಸಿತ್ತು.

ಸಿ. ಜಿ. ಕೆ. ಪುರಾಣ, ಜನಪದ ಮತ್ತು ಐತಿಹಾಸಿಕ ಬೆಡಗಿನಿಂದ ಕಿಕ್ಕಿರಿದು ಸಾಂದ್ರವಾಗಿದ್ದ 'ಮಹಾಚೈತ್ರ'ನಾಟಕವನ್ನು ರಂಗಕೃತಿಯಾಗಿಸಲು ಬೇಕಾದ ದ್ರವ್ಯಗಳನ್ನು ಸಂಯೋಜಿಸಲು ಮುಂದಾದರು. ಚಿಕ್ಕಂದಿನಲ್ಲಿ ತನ್ನ ಊರಿನಲ್ಲಿ ನಡೆಯುತ್ತಿದ್ದ ವೀರಭದ್ರನ ಜಾತ್ರೆಯಲ್ಲಿ ನಡೆಯುತ್ತಿದ್ದ ವೀರಗಾಸೆಯ ನೃತ್ಯ ಕಣ್ಣಮುಂದೆ ಹಾದು ಹೋಯಿತು. ನಾಟಕಕ್ಕೆ ಬೇಕಾದ ವಿಶೇಷ ಪಾರದರ್ಶಕ ಪರದೆಗಳು ಸಿದ್ಧವಾದವು. ಪಾತ್ರಗಳಿಗೆ ಬೇಕಾದ ಸೂಕ್ತ ನಟರ ಆಯ್ಕೆ ಆಗಿ ತಾಲೀಮು ಪ್ರಾರಂಭವಾಯಿತು.

'ಮಹಾಚೈತ್ರ'ರಂಗಪ್ರದರ್ಶನ 'ಕನ್ನಡ ರಂಗಭೂಮಿಯ ವಸಂತ'ಎಂದೇ ಪ್ರಖ್ಯಾತವಾಯಿತು. ಒಂದೊಂದು ದೃಶ್ಯದ ರಂಗ ವೈಭವ ಕಣ್ಣಿಗೆ ಕಟ್ಟುವಂತಿದ್ದವು. ಬಸವಣ್ಣ ಕಲ್ಯಾಣ ಬಿಟ್ಟು ಹೋಗುವಾಗ ಅದನ್ನು ನೋಡಲು ನೆರೆದ ಜನರ ಸಿಲ್ಹಟ್

ದೃಶ್ಯ, ಬಹುರೂಪಿ ಚೌಡಯ್ಯ ಬಸವಣ್ಣನ ಕೂಡಲ ಸಂಗಮದ ದೃಶ್ಯವನ್ನು ಪುನರಭಿನಯಿಸುವುದು, ಕಡೆಯಲ್ಲಿ ಬಿಜ್ಜಳನ ಯಜ್ಞ ಮತ್ತು ಕೊಲೆಯ ದೃಶ್ಯ ಕನ್ನಡ ರಂಗಭೂಮಿ ಬೆಳೆದು ನಿಂತ ಉನ್ನತ ಸ್ತರವನ್ನು ಸೂಚಿಸುವಂತಿದ್ದವು. ಸಿ. ಜಿ. ಕೆ. ಸಾಧನೆಯ, ಯಶಸ್ಸಿನ ಅತ್ಯಂತಿಕ ಸ್ಥಿತಿಯನ್ನು ಈ ನಾಟಕದ ಪ್ರದರ್ಶನದ ಮೂಲಕ ತಲುಪಿಯಾಗಿತ್ತು.

'ಮಹಾಚೈತ್ರ'ಪ್ರದರ್ಶನದ ಬಗ್ಗೆ ಆಗ ಬಂದ ಪ್ರಮುಖ ಅಭಿಪ್ರಾಯಗಳು.

> ''ಸೃಜನಾತ್ಮಕ ನಿರ್ದೇಶಕನಿಗೆ ಸವಾಲಾಗುವಂಥ ಶಕ್ತಿಯುತವಾದ ವಸ್ತುವನ್ನು ಹೊಂದಿರುವ 'ಮಹಾಚೈತ್ರ'ವನ್ನು ನಿರ್ದೇಶಿದ ಸಿ. ಜಿ. ಕೃಷ್ಣಸ್ವಾಮಿ ಕೃತಿಯ ಆಶಯವನ್ನು ಜನಕ್ಕೆ ಕಣ್ಣಿಗೆ ಕಟ್ಟುವಂಥ ದೃಶ್ಯಗಳ ಮುಖೇನ ತಲುಪಿಸುವುದರಲ್ಲಿ ಯಶಸ್ವಿಯಾದರು''..... ನಾಟಕದ ಆಶಯದ ನಿರೂಪಣೆಗೆ ನಿರ್ದೇಶಕರು ಮೇಳದಂತೆ ನಿರ್ವಹಿಸಿದ ಆಟಗಾರರನ್ನು ಪಾತ್ರಗಳನ್ನಾಗಿ ನಿರೂಪಕರನ್ನಾಗಿ ಸಮರ್ಥವಾಗಿ ಬಳಸಿಕೊಂಡರು. ಕಲ್ಯಾಣ ತೊರೆದು ಸಂಗಮಕ್ಕೆ ಹೋದ ಬಸವಣ್ಣನ ಬಗ್ಗೆ ನೀಲಾಂಬಿಕೆಗೆ ಹೇಳುವಾಗ ಅವನ ಮನಸ್ಸಿನ ದ್ವಂದ್ವ ನಿರೂಪಿಸುವ ದೃಶ್ಯ, ದಕ್ಷಬ್ರಹ್ಮನ ಯಜ್ಞ ಹಾಳುಗೆಡಹುವ ವೀರ ಭದ್ರನ ನೃತ್ಯ ಮೇಲಿನ ಮಾತಿಗೆ ನಿದರ್ಶನ. ಬಿಜ್ಜಳನ ದುಃಸ್ವಪ್ನದ ಸನ್ನಿವೇಶದಲ್ಲಿ ಪಂಜುಗಳನ್ನು ಕಟ್ಟಿಕೊಂಡ ಪಾತ್ರಧಾರಿಗಳ ಬಳಕೆಯಿಂದ ಭ್ರಮಾತ್ಮಕ ವಾತಾವರಣ ಸೃಷ್ಟಿಸಿದ್ದು ನಿರ್ದೇಶಕ ಕಲ್ಪನಾ ಸಾಮರ್ಥ್ಯಕ್ಕೆ ಮತ್ತೊಂದು ನಿದರ್ಶನ.
>
> – ಪ್ರಜಾವಾಣಿ.

> ''ಕ್ರೋಧನ ಸಂವತ್ಸರದ ಯುಗಾದಿಯ ಮರುದಿನದಿಂದ ನಾಲ್ಕು ದಿನ ಪ್ರದರ್ಶನಗೊಂಡ 'ಮಹಾಚೈತ್ರ'ನಾಟಕ ಒಂದು ಮಹತ್ವದ ಪ್ರಯೋಗವೆನ್ನುವುದಕ್ಕಿಂತ ರಾಜಧಾನಿಯ ಹವ್ಯಾಸಿ ರಂಗಭೂಮಿಯ ಇತ್ತೀಚಿನ ದಿನಗಳ ಒಂದು ಮಹತ್ವದ ಘಟನೆಯೆಂದೇ ಹೇಳಬಹುದು. ಸಿ. ಜಿ. ಕೃಷ್ಣಸ್ವಾಮಿ ನಿರ್ದೇಶಿಸಿದ ಕವಿ ಎಚ್. ಎಸ್. ಶಿವಪ್ರಕಾಶರ ಈ ನಾಟಕ ರಂಗಸಂಪದ ತಂಡದ ಮಹತ್ವಾಕಾಂಕ್ಷಿ ಪ್ರಯೋಗ''
>
> – ಜಯರಾಮ ಅಡಿಗ, ಕನ್ನಡ ಪ್ರಭ.

ಮುಂದೆ ಸಿ. ಜಿ. ಕೆ. ಗೆ ನಾಟಕ ಮಾಡಿಸದೆ ಸುಮ್ಮನೆ ಕೂರಲಾರೆ ಎಂಬ ಮನಸ್ಥಿತಿ ಉಂಟಾಗಿತ್ತು. ರಂಗಸಂಪದಕ್ಕೆ ಇಲ್ಲಿಯವರೆಗೆ ಮಾಡಿಸಿದ ಕಾರ್ನಾಡರ 'ಯಯಾತಿ', ವೈಕುಂಠರಾಜು ಅವರ 'ಸನ್ನಿವೇಶ' ದೇವನೂರರ 'ಒಡಲಾಳ' ಶಿವಪ್ರಕಾಶರ

'ಮಹಾಚೈತ್ರ' ಅವರನ್ನು ಆಗಿನ ಸಂದರ್ಭದ ಕನ್ನಡದ ನಂಬರ್ ಒನ್ ನಿರ್ದೇಶಕನನ್ನಾಗಿ ಕಡೆದು ನಿಲ್ಲಿಸಿದ್ದವು. ತನ್ನ ನಿರ್ದೇಶನದ ಯಶಸ್ಸಿನ ಮಹಾಪೂರದಲ್ಲಿ ಸಿ. ಜಿ. ಕೆ. ಕೈಗೆ ಸಿಕ್ಕಿದ ನಾಟಕಗಳನ್ನು ತೆಗೆದುಕೊಂಡು ನಿರ್ದೇಶಿಸಲು ಹೋಗಲಿಲ್ಲ. ಹಿಂದೆಯೇ ತಿಳಿಸಿದಂತೆ, ಬಹಳ ಹುಷಾರಾಗಿ ಅವರು ತಾವು ಸಬಾಲ್ಟ್ರನ್ ಸಮುದಾಯದ ಪ್ರಾತಿನಿಧಿಕ ನಿರ್ದೇಶಕರಾಗುವತ್ತ ನಿಧಾನವಾಗಿ ಚಲಿಸತೊಡಗಿದ್ದರು. ಆದ್ದರಿಂದ ಪ್ರತಿಯೊಂದು ಬಾರಿಯೂ ಅವರು ತಮ್ಮ ಹೊಸ ನಾಟಕಕ್ಕೆ ಕೈ ಹಾಕುವಾಗ ವಸ್ತುವಿನ ಬಗ್ಗೆ ಅತ್ಯಂತ ಎಚ್ಚರ ವಹಿಸುತ್ತಿದ್ದರು. ತನಗೆ ಇಷ್ಟವಾದ ವಸ್ತುವಿನ ಬಗ್ಗೆ ಸಿದ್ಧ ನಾಟಕ ಇಲ್ಲದಿದ್ದರೆ ನಾಟಕ ಬರೆಯುವ ಸಾಮರ್ಥ್ಯ ಇರುವವರನ್ನು ಪತ್ತೆ ಹಚ್ಚಿ ಅವರಿಂದ ನಾಟಕ ಬರೆಸುತ್ತಿದ್ದರು. ಅವರನ್ನೊಬ್ಬ ನಾಟಕಕಾರನನ್ನಾಗಿಸುತ್ತಿದ್ದರು.

ಸಿ. ಜಿ. ಕೆ. ನಾಟಕಕಾರರನ್ನಾಗಿಸಿದ್ದು ಎಂಥವರನ್ನು? ಕಿ. ರಂ. ನಾಗರಾಜ ಅಂಥಾ ಮಹಾನ್ ಸಂವೇದನಾಶೀಲರನ್ನು. ಯಾವ ವ್ಯವಸ್ಥೆಗೂ ಒಳಪಡದೆ, ಯಾರ ಹಿಡಿತಕ್ಕೂ ಸಿಕ್ಕದೆ ತಾನಾಯಿತು ತನ್ನ ಸಾರಸ್ವತ ಲೋಕವಾಯಿತು ಎಂದು ಸದಾ ಕಾವ್ಯದ, ಗುಂಡಿನ ಗುಂಗಿನಲ್ಲಿದ್ದ ಕಿ. ರಂ. ಅವರನ್ನು ಹಿಡಿದು ಕೂರಿಸಿ ಅವರಿಂದ 'ನೀಗಿಕೊಂಡ ಸಂಸ' ಎಂಬ ಅಪರೂಪದ ನಾಟಕ ಬರೆಸಿದ ಖ್ಯಾತಿ ಸಿ. ಜಿ. ಕೆ. ಯದು. 'ಸಂಸ'ರು ಕನ್ನಡ ನಾಟಕ ಪ್ರಪಂಚದ ಒಂದು ವಿಸ್ಮಯ. ಅಷ್ಟೇ ವಿಕ್ಷಿಪ್ತ ವ್ಯಕ್ತಿತ್ವ ಅವರದು. ಆತ್ಮಹತ್ಯೆಯ ಮೂಲಕ ಅಕಾಲ ಮರಣಕ್ಕೆ ತುತ್ತಾದ ಅವರ ಜೀವನವನ್ನು ಬೇರೆ, ಬೇರೆ ದಾಖಲೆಗಳು ಹಾಗೂ ಅವರ ನಾಟಕಗಳ ಮೂಲಕ ಕಿ. ರಂ. ಪುನರ್ ಸೃಷ್ಟಿಸಿ 'ನೀಗಿಕೊಂಡ ಸಂಸ' ಬರೆದಿದ್ದಾರೆ. ಇದನ್ನು ಸಿ. ಜಿ. ಕೆ. ಅಷ್ಟೇ ಪರಿಣಾಮಕಾರಿಯಾಗಿ ರಂಗಕ್ಕೆ ತಂದರು. ಸಂಸನ ಪಾತ್ರದಲ್ಲಿ ಟಿ. ಎಸ್. ನಾಗಾಭರಣ ಅದ್ಭುವಾಗಿ ಅಭಿನಯಿಸಿದ ನಾಟಕ. ನಾಗಾಭರಣ ಈ ನಾಟಕದಲ್ಲಿ ಸಂಸರ ಪಾತ್ರ ಮಾಡುವುದರ ಜೊತೆಗೆ, ಸಂಸರ ನಾಟಕದಲ್ಲಿ ಬರುವ ಬೇರೆ ಬೇರೆ ಪಾತ್ರಗಳನ್ನೂ ಕೂಡ ಅಭಿನಯಿಸುತ್ತಿದ್ದರು. ಆಗ ಅನೇಕ ತಾಂತ್ರಿಕ ಸವಾಲುಗಳು ಎದುರಾಗುತ್ತಿದ್ದವು. ಈ ರೀತಿಯ ತಾಂತ್ರಿಕ ಸವಾಲುಗಳನ್ನು ಸಿ. ಜಿ. ಕೆ. ಅತ್ಯಂತ ಸಮರ್ಥವಾಗಿ ನಿಭಾಯಿಸುತ್ತಿದ್ದರು. ''ನನ್ನನ್ನು ಬಿಟ್ಟು ಕನ್ನಡ ರಂಗಭೂಮಿಯಲ್ಲಿ ಈ ನಾಟಕವನ್ನು ಬೇರೆ ಯಾರೂ ನಿರ್ದೇಶಿಸಲಾರರು. ಆ ನಾಟಕ ಬೇಡುವ ತಾಂತ್ರಿಕ ವಿಶಿಷ್ಟತೆ ಹಾಗಿದೆ'' ಎನ್ನುತ್ತಾರೆ ಸಿ. ಜಿ. ಕೆ. 1985 ರಲ್ಲಿ ಮೈಸೂರಿನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದ ಭಾಗವಾಗಿ ಇದು ಪ್ರದರ್ಶನಗೊಂಡು ಪ್ರೇಕ್ಷಕರ ಅತೀವ ಮೆಚ್ಚುಗೆ ಗಳಿಸಿತು.

'ರಂಗ ಸಂಪದ 'ಕ್ಕೆ ಅವರು ಆರಿಸಿಕೊಂಡ ಮುಂದಿನ ನಾಟಕ ಎಚ್. ಎಸ್. ಶಿವಪ್ರಕಾಶರ 'ಸುಲ್ತಾನ್ ಟಿಪ್ಪು'. ದಕ್ಷಿಣವಲಯ ನಾಟಕೋತ್ಸವಕ್ಕೆ ಅವರು ಕರ್ನಾಟಕದಿಂದ ಆಯ್ಕೆಯಾಗಿದ್ದರು. ಹೊಸ ನಾಟಕವೊಂದನ್ನು ಅವರು ಮಾಡಿಸಬೇಕಿತ್ತು. ಆಗ ಅವರು ಈ ದೇಶದ ಅಸಂಖ್ಯಾತ ಜಾತಿಗಳು, ಅವರ ಕಾಯಕಗಳು, ಅಲ್ಪ ಸಂಖ್ಯಾತ ವರ್ಗದವರ ಸಮಸ್ಯೆಗಳು ಹಾಗೂ ಇವುಗಳನ್ನು ಮೆಟ್ಟಿ ನಿಂತಿದ್ದ ಪುರೋಹಿತ ಶಾಹಿ ಸಂಸ್ಕೃತಿಯ ಬಗ್ಗೆ ಗಾಢವಾಗಿ ಚಿಂತಿಸುತ್ತಿದ್ದರು. ಆಗ ಅವರಿಗೆ ಹೊಳೆದದ್ದು ಟೀಪುವಿನ ಬಗೆಗೆ ನಾಟಕ ಮಾಡಬೇಕು ಎಂದು. ಮೀರ್ ಸಾದಕ್ ಮತ್ತು ಟೀಪುವನ್ನು ಕೇಂದ್ರವಾಗಿಟ್ಟುಕೊಂಡು ಶಿವಪ್ರಕಾಶ್ ನಾಟಕ ರಚಿಸಿದರು. ಮೀರ್‌ಸಾದಕನ ಪಾತ್ರಕ್ಕೆ ಬಿ. ವಿ. ರಾಜಾರಾಂ, ಟೀಪು ಪಾತ್ರಕ್ಕೆ ಬಳ್ಳಾರವಾಡ್ ಮತ್ತು ಪೂರ್ಣಯ್ಯನ ಪಾತ್ರಕ್ಕೆ ಬೆನಕ ತಂಡದ ಕಿಟ್ಟಿ ಆಯ್ಕೆಯಾದರು. ಈ ನಾಟಕದಲ್ಲಿ ಬಿ. ವಿ. ರಾಜಾರಾಂ ತಮ್ಮ ಅಸಾಧಾರಣ ಅಭಿನಯದಿಂದಾಗಿ ಇದೇನು ಮೀರ್‌ಸಾದಕನ ನಾಟಕವೋ ಟೀಪುವಿನ ನಾಟಕವೋ ಎಂಬ ಅನುಮಾನ ಮೂಡಿಸಿದ್ದರು.

ನಾಟಕ ನಿರೀಕ್ಷೆಯಂತೆಯೇ ಅತ್ಯಂತ ಯಶಸ್ವಿ ಪ್ರಯೋಗಗಳನ್ನು ಕಂಡಿತು. ಟೀಪು ಈಗಲೂ ಸಿ . ಜಿ. ಕೆ. ಗೆ ಆಪ್ತವಾದ ಐತಿಹಾಸಿಕ ವ್ಯಕ್ತಿ. ಟೀಪುವಿನ ಬಗೆಗೆ ಮೈಸೂರಿನಿಂದ ಹಿಡಿದು ಲಂಡನ್‌ವರೆಗೆ ಸಿಗಬಹುದಾದ ಆಕರಗಳನ್ನೆಲ್ಲಾ ಅವರು ಸಂಗ್ರಹಿಸಿದ್ದರು. ಇದು ಸಿ. ಜಿ. ಕೆ. ಯ ವಿಶಿಷ್ಟ ಗುಣ. ತಾನು ಆರಿಸಿಕೊಳ್ಳುವ ನಾಟಕಕ್ಕೆ ಸಂಬಂಧಪಟ್ಟ ಬೇರೆ ಬೇರೆ ಮಾಹಿತಿಗಳು, ಆಕರಗಳನ್ನೆಲ್ಲಾ ಅವರು ಹುಡುಕಿ ತೆಗೆಯುತ್ತಾರೆ. ಮೈಸೂರಿನ ಕಲಾಮಂದಿರದಲ್ಲಿ ನಡೆದ ಈ ನಾಟಕದ ಪ್ರಥಮ ಪ್ರದರ್ಶನ ಸಿ. ಜಿ. ಕೆ. ರಂಗ ಮಾಧ್ಯಮದ ಮೇಲೆ ಸಾಧಿಸಿದ ಹಿಡಿತವನ್ನು ಸ್ಪಷ್ಟವಾಗಿ ತೋರಿತು. ಬಹಳ ಮುಖ್ಯವಾಗಿ ತನಗೆ ಬೇಕಾದ ನಟರನ್ನು ಅವರು ಬಳಸಿಕೊಂಡು ಅವರ ಪ್ರತಿಭೆಯನ್ನು ಹೊರತೆಗೆಯುವಲ್ಲಿ ಅವರು ತೋರುತ್ತಿದ್ದ ಕೌಶಲ ಮೆಚ್ಚುವಂಥಾದ್ದು.

'ರಂಗಸಂಪದ'ದಿಂದ ಟೀಪು ನಾಟಕ ರಿಹರ್ಸಲ್ ತೆಗೆದುಕೊಳ್ಳುವ ಹೊತ್ತಿಗೆ ಅವರ ಮತ್ತು ಸಿ. ಜಿ. ಕೆ. ಸಂಬಂಧ ನಿಧಾನವಾಗಿ ಬಿರುಕು ಬಿಡಲಾರಂಭಿಸಿತ್ತು. ಮೊದಲಿಗೆ ರಂಗಸಂಪದದ ನಟರು ಬೇರೆ ಬೇರೆ ಆಗಿದ್ದರು. ಸಿ. ಜಿ. ಕೆ. ಸಹ ಹೊಸ ಕಲ್ಚರಲ್ ಸಿಂಥಿಸಿಸ್ ಬಗ್ಗೆ ಯೋಚಿಸುತ್ತಿದ್ದರು. ಈ ಎಲ್ಲಾ ಸಮಸ್ಯೆಗಳು ಮಧ್ಯೆಯೂ ನಾಟಕ ಪ್ರದರ್ಶನಗೊಂಡಿತ್ತು. ಅದೇ ಸಿ. ಜಿ. ಕೆ. ರಂಗಸಂಪದಕ್ಕೆ ನಿರ್ದೇಶಿಸಿದ ಕಡೆಯ ನಾಟಕವಾಗಿತ್ತು.

## ೪. ರಂಗ ನಿರಂತರ ಮತ್ತು ಸಿ. ಜಿ. ಕೆ.

ಸಿ. ಜಿ. ಕೆ. ಮತ್ತು ಎಚ್. ಎಸ್. ಶಿವಪ್ರಕಾಶರ ಕಾಂಬಿನೇಷನ್, 'ಶೇಕ್ಸಪಿಯರನ ಸ್ವಪ್ನ ಸಾಕೆ'ಎಂಬ ಹೊಸ ನಾಟಕದ ಮೂಲಕ ಮುಂದುವರೆಯಿತು. ಶೇಕ್ಸಪಿಯರನ ಬದುಕು, ಆವನ ಸಾಧನೆ, ಅವನಿಗಿದ್ದ ರಂಗ ಕಲ್ಪನೆ ಶಿವಪ್ರಕಾಶರ ಮನಸ್ಸನ್ನು ಸೆಳೆದಿತ್ತು. ಅವನು ತನ್ನ ಜೀವನದ ಅನೇಕ ಘಟನೆಗಳನ್ನು ತನ್ನ ಕೆಲವು ನಾಟಗಳಲ್ಲಿ ಅಳವಡಿಸಿಕೊಂಡಿದ್ದಾನೆ. ವಸ್ತು ಮತ್ತು ತಂತ್ರ ಎರಡೂ ದೃಷ್ಟಿಯಿಂದ ವಿಶಿಷ್ಟವಾಗಿ ಗಮನ ಸೆಳೆಯುವಂತಿದ್ದ ನಾಟಕ ಇದು. ಸಿ. ಜಿ. ಕೆ. ಇದನ್ನು ನಿರ್ದೇಶನಕ್ಕೆ ಆರಿಸಿಕೊಂಡರು. ಅಷ್ಟು ಹೊತ್ತಿಗೆ ಅವರ ಜೊತೆ ಅನೇಕ ಹೊಸ ರಂಗಕರ್ಮಿಗಳು ಬಂದು ಸೇರಿಕೊಂಡರು. ಸಿ. ಜಿ. ಕೆ. ಒಬ್ಬ ಸ್ಟಾರ್ ನಿರ್ದೇಶಕರಾಗಿ ಅವರಿಗೆಲ್ಲಾ ದೊಡ್ಡ ಆಕರ್ಷಣೆಯಾಗಿದ್ದರು. ನುರಿತ ನಟರಾದ ಶ್ರೀನಿವಾಸ್ ಮೇಷ್ಟ್ರು ಶೇಕ್ಸ್‌ಪಿಯರನಾಗಿ ಅಭಿನಯಿಸಿದರು. ಈ ನಾಟಕದ ಪ್ರದರ್ಶನವನ್ನು ಅಣಿಗೊಳಿಸಿದ ತಂಡದ ಹೆಸರು'ಸಿ. ಜಿ. ಕೆ. 88'. ಇದರಿಂದಲೇ ಗೊತ್ತಾಗುತ್ತದೆ, ಸಿ. ಜಿ. ಕೆ. ತನ್ನ ಪ್ರಯೋಗಳಿಗೆ ಬೇರೆ ತಂಡದವರ ಮೇಲೆ ಅವಲಂಬನವಾಗುವುದರ ಬದಲು ತನ್ನದೇ ಆದ ತಂಡವೊಂದನ್ನು ಕಟ್ಟುವ ಹವಣಿಕೆಯಲ್ಲಿದ್ದರೆಂಬುದು. 'ಶೇಕ್ಸ್‌ಪಿಯರ್‌ನ ಸ್ವಪ್ನ ನೌಕೆ' ಪ್ರದರ್ಶನದ ದೃಷ್ಟಿಯಿಂದ ಯಶಸ್ವಿಯಾದರೂ, ಸಹಜವಾಗಿಯೇ ಪ್ರೇಕ್ಷಕರು ಈ ನಾಟಕವನ್ನು 'ಒಡಲಾಳ', 'ಮಹಾಚೈತ್ರ'ದೊಂದಿಗೆ ಇಟ್ಟು ಹೋಲಿಸಲಾರಂಭಿಸಿದರು. ಆ ಹೋಲಿಕೆಯಲ್ಲಿ 'ಶೇಕ್ಸ್‌ಪಿಯರ್'ಹೊಳಪು ಕಳೆದುಕೊಂಡಿದ್ದಾನೆಯೇ ಎಂಬ ಅನುಮಾನ ಬರತೊಡಗಿತು. ಸಿ. ಜಿ. ಕೆ. ಮತ್ತು ಶಿವಪ್ರಕಾಶ್ ಕಾಂಬಿನೇಷನ್ ಇಲ್ಲಿಂದ ಬೇರ್ಪಟ್ಟಿತು.

ಈ ಮಧ್ಯೆ ರಂಗಭೂಮಿಗೇ ಸಂಬಂಧಪಟ್ಟಂತೆ ಕೆಲವು ಸಮಸ್ಯೆಗಳು ಉದ್ಭವಿಸಿದ್ದವು. ಪ್ರಮುಖ ರಂಗ ತಂಡಗಳಾದ ಸಮುದಾಯ , ನಟರಂಗ, ರಂಗ ಸಂಪದ, ಸೂತ್ರಧಾರ, ನಾಟ್ಯಸಂಘ ಮುಂತಾದವು ತಮ್ಮ ರಂಗ ಚಟುವಟಿಕೆಗಳನ್ನು ಕಡಿಮೆ ಮಾಡಿದ್ದವು. ಈ ತಂಡಗಳು ಅನೇಕ ಕಾರಣಗಳಿಂದಾಗಿ ಒಡೆದು ಹೋಗಿ ಒಂದು ರೀತಿಯ ವಿಷಣ್ಣತೆ ಕಲಾಕ್ಷೇತ್ರದ ಆವರಣದಲ್ಲಿ ಆವರಿಸಿತ್ತು. ಈ ಮಧ್ಯೆ ಟಿ. ವಿ. ಚಾನೆಲ್‌ಗಳು ನಿಧಾನವಾಗಿ ಮೈದೋರ ತೊಡಗಿದವು. ಕೆಲವು ನುರಿತ ನಟರು ಆ ಕಡೆ ಹೋಗ ತೊಡಗಿದರು. ನಾಟಕಗಳ ಆಕರ್ಷಣೆ ಕಡಿಮೆಯಾಗಿ ಪ್ರೇಕ್ಷಕರು ನಾಟಕಗಳಿಗೆ ಬರುವುದೂ ಕಡಿಮೆಯಾಯಿತು. ಇದು ಪ್ರತಿಯೊಬ್ಬ ಗಂಭೀರ ರಂಗಕರ್ಮಿಯ ವ್ಯಾಕುಲತೆಯನ್ನು ಹೆಚ್ಚಿಸಿತು.

ಅಷ್ಟರಲ್ಲಿ ಕರ್ನಾಟಕ ಸರ್ಕಾರ ಮೈಸೂರಿನಲ್ಲಿ 'ರಂಗಾಯಣ' ಎಂಬ ರೆಪರ್ಟರಿಯೊಂದನ್ನು ತೆರೆಯುವ ಸಿದ್ಧತೆ ಮಾಡಿಕೊಳ್ಳುತ್ತಿತ್ತು. 'ರೆಪರ್ಟರಿ' ಎಂಬುದು ಆಗ ಹೊಸ ಪರಿಕಲ್ಪನೆ. ಅದೊಂದು ರೀತಿಯ 'ಪ್ಯಾರೆಲಲ್ ರಂಗಭೂಮಿ' ಎಂದೇ ತುಂಬಾ ಜನ ಭಾವಿಸಿದ್ದರು. ಕಲಾತ್ಮಕ ಚಲನಚಿತ್ರಗಳು ಎಪ್ಪತ್ತರ ದಶಕದಲ್ಲಿ ಬರಲಾರಂಭಿಸಿದಾಗ ಅವುಗಳನ್ನು ಕಮರ್ಷಿಯಲ್ ಸಿನಿಮಾಗಳಿಗೆ ಹೋಲಿಸಿ, 'ಪ್ಯಾರೆಲಲ್ ಸಿನಿಮಾ' ಎಂದು ಕರೆದಿದ್ದರು. ಈ ರೆಪರ್ಟರಿ ಕೂಡಾ ವೃತ್ತಿ ನಿರತ ನಾಟಕ ಕಂಪೆನಿಗಳಿಗೆ ಹೋಲಿಸಿದರೆ, ಪ್ಯಾರೆಲಲ್ ರಂಗಭೂಮಿಯೇ. ಸಿ. ಜಿ. ಕೆ. ಗೆ ಹೆಚ್ಚು ಹಣ ಹಾಕಿ ಮೈಸೂರಿನಲ್ಲಿ ರೆಪರ್ಟರಿ ಪ್ರಾರಂಭಿಸುವುದರ ಬಗ್ಗೆ ಭಾರೀ ಅಸಮಾಧಾನ ಇತ್ತು. ಅದರ ಅರ್ಧದಷ್ಟು ಹಣ ಕೊಡಿ, ನಾನು ಮೂರ್‍ನಾಲ್ಕು ರೆಪರ್ಟರಿ ಕಟ್ತೀನಿ ಅನ್ನುತ್ತಿದ್ದರು. ಈ ಎಲ್ಲಾ ಕಾರಣಗಳಿಂದಾಗಿ ತಾನೇ ಗೆಳೆಯರ ಗುಂಪು ಕಟ್ಟಿಕೊಂಡು ಯಾಕೆ ಒಂದು ರೆಪರ್ಟರಿ ತೆಗೆಯಬಾರದು ಎಂಬ ಆಲೋಚನೆ ಅವರಿಗೆ ಬಂತು. ಅವರ ಜೊತೆಗಿದ್ದವರು ಕೆ. ಜಿ. ವಿಶ್ವನಾಥ್. ಎ. ಎಸ್. ರಮೇಶ್ ಮುಂತಾದವರು. ಕೈಜೋಡಿಸಿದವರು ಪದ್ದಣ್ಣ, ನಾಗರಾಜಮೂರ್ತಿ, ಕಿಟ್ಟಿ, ಕಲ್ಪನಾ ಮುಂತಾದವರು. 'ರಂಗ ನಿರಂತರ' ರೆಪರ್ಟರಿ ಪ್ರಾರಂಭವಾದದ್ದು ಹೀಗೆ.

"ನಾವು ರಂಗಭೂಮಿಗೆ ನಿರಂತರತೆಯನ್ನು ತರಬೇಕು. ಈ ನಿರಂತರತೆ ನಟರನ್ನು, ಪ್ರೇಕ್ಷಕರನ್ನು, ನಾಟಕಕಾರರನ್ನು ಸದಾ ಎಚ್ಚರದಲ್ಲಿಟ್ಟಿರುತ್ತದೆ. ಹಾಗೆಯೇ ಸಂಘಟನಾಕಾರರನ್ನು ಕೂಡ" ಎಂಬ ಮಾತುಗಳನ್ನು ಸಿ. ಜಿ. ಕೆ. 'ರಂಗನಿರಂತರ'ದ ಪ್ರಾರಂಭಕ್ಕೆ ಆಡಿದ್ದರು. 'ರಂಗನಿರಂತರ' ಕೆಲವು ರಿಸ್ಕ್ ತೆಗೆದುಕೊಂಡು ಪ್ರಯೋಗಗಳನ್ನು ಮಾಡಲು ಮುಂದಾಯಿತು. ಮೊದಲಿಗೆ ಕಲಾಕ್ಷೇತ್ರದ ಒಳಗೆ ನಾಟಕ ಮಾಡಬಾರದು, ಕಲಾಕ್ಷೇತ್ರದ ಆವರಣದೊಳಗೆ ನಾಟಕ ಮಾಡಬೇಕು. ಅದು ಪ್ರೇಕ್ಷಕರಿಗೆ ಆಪ್ತರಂಗ ಮಂದಿರವಾಗಬೇಕು ಎಂಬ ನಿರ್ಣಯಕ್ಕೆ ಬರಲಾಯಿತು. ಕಲಾಕ್ಷೇತ್ರದ ರಿಹರ್ಸಲ್ ಶೆಡ್ ಮತ್ತು ಮುಂದಿನ ಖಾಲಿ ಜಾಗ ಉಪಯೋಗಿಸಿಕೊಂಡು ಸುಮಾರು 100 ಜನ ಕೂರಬಹುದಾದಂಥ ಒಂದು ರಂಗಸ್ಥಳವನ್ನು ಇದಕ್ಕಾಗಿ ನಿರ್ಮಿಸಲಾಯಿತು. ಕಲಾವಿದರು, ತಂತ್ರಜ್ಞರು, ನಿರ್ದೇಶಕರು, ನಾಟಕಕಾರರು ಎಲ್ಲಾ ಸೇರಿ 150 ದಿನಗಳ ನಿರಂತರ ಪ್ರದರ್ಶನ ಕೊಡುವ ಬೃಹತ್ ಯೋಜನೆಯೊಂದನ್ನು ಸಿ. ಜಿ. ಕೆ. ತಯಾರಿಸಿಯೇ ಬಿಟ್ಟರು.

ಸಿ. ಜಿ. ಕೆ. ಯಾವಾಗಲೂ ಹೀಗೆಯೆ. ಬೇರೆಯವರು ಸಾಹಸಿಗಳಾದರೆ, ಇವರು ಹುಚ್ಚು ಸಾಹಸಿ. ಯಾವುದಾದರೂ ವಿಪರೀತದ ಆಲೋಚನೆ (ವೈಲ್ಡ್ ಥಾಟ್ಸ್ ಅಂತಾರಲ್ಲ ಹಾಗೆ) ತಲೆಗೆ ಬಂದರೆ ಎಷ್ಟೇ ಕಷ್ಟ ಬರಲಿ ಅದನ್ನು ಮಾಡಿಯೇ

ತೀರುತ್ತೇನೆಂಬ ಛಲ ಅವರದು. ಕೈಯಲ್ಲಿ ಬಿಡಿಗಾಸು ಇಲ್ಲದಿದ್ದರೂ ಕೋಟಿ ರೂಪಾಯಿನ ಯೋಜನೆಗೇನೂ ಬರ ಇಲ್ಲ. ಹಾಗೆಂದು ಬರೀ ಯೋಜನೆ ತಯಾರಿಸಿ ಸುಮ್ಮನೆ ಕೂರುವ ವ್ಯಕ್ತಿಯೂ ಅಲ್ಲ. ನಿರಂತರವಾಗಿ ನೂರಾ ಐವತ್ತು ದಿನಗಳ ಅಂದರೆ ಐದು ತಿಂಗಳ ಕಾಲ ಸತತವಾಗಿ ನಾಟಕ ಆಡುವುದು ಸಾಮಾನ್ಯವಾದ ಕೆಲಸ ಅಲ್ಲ. ಅದೂ ನಾಟಕವಾಡುವವರು ಹವ್ಯಾಸಿಗಳು. ವೃತ್ತಿ ನಿರತರಲ್ಲ. ಆದರೂ ಸಿ. ಜಿ. ಕೆ. ಈ ಯೋಜನೆ ಕೈಗೆತ್ತಿಕೊಂಡರು. ಹವ್ಯಾಸಿಗಳಿಗೆ ವೃತ್ತಿನಿರತೆಯ ಪಾಠ ಹೇಳಿಕೊಡಲು ಮುಂದಾದರು.

ರಂಗ ನಿರಂತರಕ್ಕೆ ನಿಂತು ನೀರಾಗಬಹುದಾಗಿದ್ದ ಹವ್ಯಾಸಿ ರಂಗಭೂಮಿಯನ್ನು ಬತ್ತದ ತೊರೆಯಾಗಿಸಿದ ಖ್ಯಾತಿ ದೊರಕಬೇಕು. ಸಿ. ಜಿ. ಕೆ. ಈ ರೆಪರ್ಟರಿಯ ಮೂಲಕ ಅನೇಕ ಹೊಸ ಪ್ರತಿಭೆಗಳನ್ನು ಹುಡುಕಿ, ಬೆಳಕಿಗೆ ತಂದರು. ಆಧುನಿಕ ಹವ್ಯಾಸಿ ಕನ್ನಡ ರಂಗಭೂಮಿಯಲ್ಲೇ ಮರೆಯಲಾಗದ ಘಟನೆ ತಂದರು. ಆಧುನಿಕ ಹವ್ಯಾಸಿ ಕನ್ನಡ ರಂಗಭೂಮಿಯಲ್ಲೇ ಮರೆಯಲಾಗದ ಘಟನೆ ಇದು. ಸಿ. ಜಿ. ಕೆ. ಯಲ್ಲಿ ಮೊದಲಿನಿಂದಲೂ ನಾನು ಕಂಡುಕೊಂಡ ವಿಶೇಷವೇನೆಂದರೆ, ಪ್ರತಿಭೆ ಇದ್ದವರನ್ನು ಹುಡುಕಿ, ಅವರನ್ನು ಕೆಲಸಕ್ಕೆ ಹಚ್ಚಿ, ಅವರಿಂದ ರಂಗಭೂಮಿಗೆ ಪಡೆದುಕೊಳ್ಳಬೇಕಾದ ಕೊಡುಗೆಯನ್ನು ಪಡೆದುಕೊಳ್ಳುವುದು. ಅಲ್ಲಿ ಹೊಸಬರು, ಹಳಬರು, ಅನುಭವಿಗಳು, ಅನನುಭವಿಗಳು ಎಂಬ ಭೇದ ಇಲ್ಲ. ಬಹುಶಃ ಅವರ ಈ ಗುಣದಿಂದಾಗಿಯೇ ಅವರ ಹಿಂದೆ, ಸುತ್ತಾ ಮುತ್ತಾ ಸದಾ ರಂಗಕರ್ಮಿಗಳ ಒಂದು ಗುಂಪು ಇದ್ದೇ ಇರುತ್ತದೆ. ಅಂಡರ್ ಗ್ರೌಂಡ್ ಡಾನ್‌ನ ಸುತ್ತಾ ಇರುವ ಬಾಡಿ ಗಾರ್ಡ್‌ಗಳಂತೆ. ಕಲಾಕ್ಷೇತ್ರದ ಆವರಣದಲ್ಲಿ ಒಂದು ಸಮಾನಾಂತರ ಕಲಾಕ್ಷೇತ್ರವನ್ನು ತಾತ್ಕಾಲಿಕವಾಗಿ ಸೃಷ್ಟಿಸಿ ನೂರೈವತ್ತು ದಿನಗಳು ನಿರಂತರವಾಗಿ ನಾಟಕವಾಡಿಸುವುದು, ಟೆಂಟ್ ಹಾಕಿ ಒಂದು ತಿಂಗಳ ಕಾಲ ಗ್ರಾಮ ಸಮಾಜ ಸೃಷ್ಟಿಸುವುದು ಸಿ. ಜಿ. ಕೆ. ಗೆ ಸಾಧ್ಯವೇ ಹೊರತು ಬೇರೆಯವರಿಗೆ ಸಾಧ್ಯ ಇಲ್ಲ. ಯಾಕೆಂದರೆ ಈ ರೀತಿಯ ಸಾಹಸವನ್ನು ಬೇರೆಯವರು ಇಲ್ಲಿಯವರೆಗೆ ಮಾಡಿ ತೋರಿಸಿಲ್ಲ. ನಾನು ಕಂಡ ಹಾಗೆ ಸಿ. ಜಿ. ಕೆ. ಯ ಅನೇಕ ಹಳೆಯ ಗೆಳೆಯರು ಅವರಿಂದ ದೂರವಾಗಿದ್ದಾರೆ. ಅದರ ಎರಡು ಮೂರು ಪಟ್ಟು ಹೊಸಬರು ಬಂದು ಸೇರಿದ್ದಾರೆ. ಸದಾ ತನ್ನ ಹುಡುಕು ಕಣ್ಣನ್ನು ತೆರೆದಿಟ್ಟು ಕೊಂಡಿರುವ ಸಿ. ಜಿ. ಕೆ. ಪ್ರತಿಭಾವಂತರು ಕಣ್ಣಿಗೆ ಬಿದ್ದರೆ ರಂಗಭೂಮಿಯ ತೆಕ್ಕೆಗೆ ಅವರನ್ನು ಸೇರಿಸಿಬಿಡುತ್ತಾರೆ. ಇದು ಅವರು ರಂಗಭೂಮಿ ಕಟ್ಟುವ ರೀತಿ. ಈ ವಿಷಯದಲ್ಲಿ ಅವರಿಗೆ ಅವರೇ ಸಾಟಿ.

1987ರ ಫೆಬ್ರವರಿ 9ರಂದು ಸಿ. ಜಿ. ಕೆ. ಯ ಮಹತ್ವಾಕಾಂಕ್ಷಿ ರೆಪರ್ಟರಿ 'ರಂಗ ನಿರಂತರ' ಉದ್ಘಾಟನೆಯಾಯಿತು. ಅದನ್ನು ಉದ್ಘಾಟನೆ ಮಾಡಿದವರು ಅಂದಿನ ಯುವಜನ ಖಾತೆ ಸಚಿವರಾಗಿದ್ದ ಡಾ. ಜೀವರಾಜ ಆಳ್ವ ಅವರು. ಜೀವರಾಜ ಆಳ್ವ ಸಿ. ಜಿ. ಕೆ. ಗೆ ಅತ್ಯಂತ ಆಪ್ತರು . ಸಿ. ಜಿ. ಕೆ. ಯ ಪ್ರತಿಯೊಂದು ಸಾಹಸದ ಹಿಂದೆ ಅವರ ಸಹಾಯ ಹಸ್ತ ಸದಾ ಇರುತ್ತಿತ್ತು. ನೂರೈವತ್ತು ದಿನಗಳ ರಂಗ ನಿರಂತರ ಚಟುವಟಿಕೆ ಪ್ರಾರಂಭವಾಗಿಯೇ ಬಿಟ್ಟಿತು. ಕರ್ನಾಟಕ ನಾಟಕ ಅಕೆಡಮಿ ಪ್ರಾರಂಭದಲ್ಲಿ ಸ್ವಲ್ಪ ಹಣದ ಸಹಾಯ ಮಾಡಿದ್ದರಿಂದ ಹಣದ ಕೊರತೆ ಮೊದಲಿಗೆ ಕಾಡಲಿಲ್ಲ. ಇನ್ನು ನೂರೈವತ್ತು ದಿನ ನಾಟಕಕ್ಕೆ ಮೇಕಪ್ ಮಾಡುವವರು, ಬೆಳಕಿನ ವಿನ್ಯಾಸ ಮಾಡುವವರು, ಧ್ವನಿ ವ್ಯವಸ್ಥೆ ಮಾಡುವವರು ತಾತ್ಕಾಲಿಕವಾಗಿ ಅಲ್ಲೇ ಠಿಕಾಣಿ ಹೂಡಿದರು.

ನೂರೈವತ್ತು ದಿನಗಳ ರಂಗಪ್ರದರ್ಶನಕ್ಕೆ ಪ್ರಥಮ ನಾಟಕವನ್ನು ನಿರ್ದೇಶಿಸಿದವರು ಬಿ. ವಿ. ರಾಜಾರಾಂ. ಪಾಲ್ ಸುದರ್ಶನ್ ಬರೆದ 'ಸುಣ್ಣ ಹಚ್ಚಿದ ಸಮಾಧಿಗಳು' ನಾಟಕ. ಸುಮಾರು ಒಂದು ವಾರಗಳ ಕಾಲ ಈ ನಾಟಕ ಪ್ರದರ್ಶನಗೊಂಡಿತು. ಪ್ರೇಕ್ಷಕರೂ ಸಹ ಇದೊಂದು ಹೊಸ ಆಕರ್ಷಣೆ ಎನ್ನುವ ರೀತಿಯಲ್ಲಿ ಬಂದು ನಾಟಕ ನೋಡಿದರು. ಅಷ್ಟರಲ್ಲೇ ಮುಂದಿನ ನಾಟಕ ತಯಾರಾಗಬೇಕಿತ್ತು. ಸಿದ್ಧ ನಾಟಕವೊಂದು ಪ್ರದರ್ಶನಗೊಳ್ಳುತ್ತಿರುವಾಗಲೇ ಹೊಸ ನಾಟಕವೊಂದು ಪ್ರದರ್ಶನಕ್ಕೆ ಸಿದ್ಧವಾಗಬೇಕಿತ್ತು. ಎರಡನೆಯ ನಾಟಕ 'ಅಹಲ್ಯೆ ನನ್ನ ತಾಯಿ'ಯನ್ನು ನಿರ್ದೇಶಿಸಿದವರು ಬಿ. ಸುರೇಶ. ನಾಟಕವನ್ನು ಅವರೇ ಬರೆದಿದ್ದರು. ಅದೂ ಕೂಡಾ ಒಂದು ವಾರ ಪ್ರದರ್ಶನಗೊಂಡಿತು. ಮುಂದಿನ ನಾಟಕವನ್ನು ಯಾರಾದರೂ ಹೊಸಬರಿಂದ ನಿರ್ದೇಶಿಸಬೇಕೆಂಬ ಯೋಚನೆ ಬಂದಿತು. ಗಾಂಧಿ ಪಾತ್ರದಲ್ಲಿ ನಟಿಸಿ ಗಾಂಧಿಟೋಪಿಯೆಂದೇ ಹೆಸರಾಗಿದ್ದ ಗೋಪಿಯನ್ನು ಈ ಕೆಲಸಕ್ಕೆ ಹಚ್ಚಿದ್ದರು. ಅವರು ಮಣಿಗನಹಳ್ಳಿ ಸತ್ಯ ಎಂಬುವರು ಬರೆದ ರಾಜಕೀಯ ವಿಡಂಬನೆಯ 'ಗರಂ ಕಡ್ಲೆಕಾಯಿ' ಎಂಬ ನಾಟಕವನ್ನು ನಿರ್ದೇಶನಕ್ಕೆ ತೆಗೆದುಕೊಂಡರು. ಎಂಟು ದಿನಗಳ ಕಾಲ ನಡೆದ ಈ ನಾಟಕ ರಾಜಕೀಯ ವಿಡಂಬನೆಯ ವಸ್ತುವಿನಿಂದಾಗಿ ಪ್ರೇಕ್ಷಕರಿಗೆ ಮೆಚ್ಚುಗೆಯಾಯಿತು. ಮುಂದಿನ ನಾಟಕ ರಾಮಚಂದ್ರ ದೇವ ರೂಪಾಂತರಿಸಿದ ಶೇಕ್ಸ್‌ಪಿಯರನ ಮ್ಯಾಕ್‌ಬೆತ್. 'ಮಾಂಡಲಿಕ ಪುರದ ದುರಂತ' ಎಂಬ ಹೆಸರಿನ ನಾಟಕವನ್ನು ನಿರ್ದೇಶಿಸಿದವರು ಎನ್. ಎಸ್. ಡಿ. ಪದವೀಧರ ಸುರೇಂದ್ರನಾಥ್.

ಅಷ್ಟು ಹೊತ್ತಿಗೆ ರಂಗನಿರಂತರ ಹಣದ ಬಿಕ್ಕಟ್ಟಿಗೆ ಸಿಕ್ಕಿಕೊಳ್ಳುತ್ತಾ ಹೋಯಿತು. ಖರ್ಚು ಜಾಸ್ತಿ, ಸಂಪಾದನೆ ಕಡಿಮೆ. ದಿನನಿತ್ಯದ ಖರ್ಚು ಹೆಚ್ಚಾಗುತ್ತಿತ್ತು. ಈ ಮಧ್ಯೆ ಇವರ ಸಾಹಸ ಕಂಡು ಕೆಲವರು ಗೆಳೆಯರು ಅಷ್ಟಿಷ್ಟು ಸಹಾಯ ಮಾಡಲು ಮುಂದೆ

ಬಂದರು. ಕೆಲವರು ರಂಗಸಾಮಗ್ರಿಗಳನ್ನು ಉಚಿತವಾಗಿ ನೀಡಿದರು. ಮತ್ತೆ ಉತ್ಸಾಹ ತುಂಬಿಕೊಂಡು, ತನ್ನ ಜತೆಯವರಿಗೂ ಉತ್ಸಾಹ ತುಂಬಿ 'ಶೋ ಮಸ್ಟ್ ಗೋ ಆನ್' ಎಂದರು ಸಿ. ಜಿ. ಕೆ. ಈಗ ನಾಟಕ ನಿರ್ದೇಶಿಸಲು ನಿಯೋಜಿತರಾದವರು ಅಮರ್ ಎಂಬ ಕೆಳಜಾತಿಯ ಹುಡುಗ. ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿದ್ದ ನಗರಿ ಬಾಬಯ್ಯನವರನ್ನು ನಕ್ಸಲೈಟ್ ಎಂದು ಬ್ರ್ಯಾಂಡ್ ಮಾಡಿ ಪೋಲೀಸರು ಬಂಧಿಸಿ ಚಿತ್ರ ಹಿಂಸೆ ನೀಡಿದ್ದರು. ಅವರ ಜೈಲಿನ ಅನುಭವಗಳನ್ನು ನಾಟಕ ಮಾಡಿ 'ಜಗನ್ನಾಥನ ರಥ ಚಕ್ರಗಳು 'ಎಂಬ ಹೆಸರಿನಲ್ಲಿ ಅಮರ್ ನಿರ್ದೇಶಿಸಿದರು. ಮುಂದಿನ ನಾಟಕ ಟಿ. ಎನ್. ನರಸಿಂಹನ್ ಅವರು ಬರೆದ 'ಸೇತುಮಾಧವನ ಸಲ್ಲಾಪ' ಇದನ್ನು ನಿರ್ದೇಶಿಸಿದವರು ಈಗ ಖ್ಯಾತ ನಟರಾಗಿರುವ ಪ್ರಕಾಶರೈ ಮತ್ತು ಅವರ ಗೆಳೆಯ ಸುಧೀಂದ್ರ ಕುಲಕರ್ಣಿ. ಪ್ರಕಾಶ್‌ರೈ ಆಗಿನ್ನೂ ಕಾಲೇಜು ವಿದ್ಯಾರ್ಥಿ. ಅವರ ಪ್ರತಿಭೆಯನ್ನು ಸಿ. ಜಿ. ಕೆ. ಆಗಲೇ ಗುರುತಿಸಿದ್ದರು. ಅನಂತರದ ನಾಟಕ ಎನ್. ಎಸ್. ವೆಂಕಟರಾಂ ಅನುವಾದಿಸಿದ 'ಗಿನಿಪಿಗ್' ಎಂಬ ನಾಟಕ, ಇದನ್ನು ನಿರ್ದೇಶಿಸಿದವರು ಅಶೋಕ್ ಸಂದೀಪ್.

ಎ. ಕೆ. ರಾಮಾನುಜನ್ ಬರೆದ 'ಬಡಪಾಯಿ ಬ್ರಹ್ಮರಾಕ್ಷಸ' ನಾಟಕವನ್ನು ಎನ್. ಎ. ಸೂರಿ, ಎ. ಎಸ್. ಮೂರ್ತಿಯವರು ಬರೆದ 'ಟೋಪಿಯಾಟವಯ್ಯ' ನಾಟಕವನ್ನು ವಿ. ರಾಮಮೂರ್ತಿ, ನಾಗರಾಜರಾವ್ ಅವರು ಬರೆದ 'ಬಿಳಲು ಬೇರಾಗ ಬಲ್ಲುದೆ?' ನಾಟಕವನ್ನು ಎಸ್. ಆನಂದ್, ಶ್ರೀರಂಗರ 'ಇದು ಭಾಗ್ಯವಯ್ಯಾ' ನಾಟಕವನ್ನು ಎಚ್. ವಿ. ವೆಂಕಟಸುಬ್ಬಯ್ಯ, ಜಿ. ಎನ್. ರಂಗನಾಥರಾವ್ ಅನುವಾದಿಸಿದ ಜೀನ್ ಅನ್ವಿಯ ನಾಟಕ 'ಅಂತಿಗೊನೆ'ಯನ್ನು ಶ್ರೀನಿವಾಸಪ್ರಭು, ತೇಜಸ್ವಿಯರ 'ತುಕ್ಕೋಜಿ'ಯನ್ನು ನಾಟಕಕ್ಕಳವಡಿಸಿ ರಮೇಶ್ ಚಂದ್, ಶಿವಪ್ರಕಾಶ್ ರೂಪಾಂತರಿಸಿದ ಏಟ್ಸ್‌ನ 'ನರಕದ ಬೇಗೆ'ಯನ್ನು ಉಮಾಶಂಕರ್, ಪ್ರಕಾಶ್ ಅರಸ್ ಅವರ 'ಮರೀಚಿಕೆ' ನಾಟಕವನ್ನು ಉಮಾಶಂಕರ್ ಹಾಗೂ ಕಡೆಯ ನಾಟಕವಾಗಿ ಸಿ. ಜಿ. ಕೆ. ರಚಿಸಿದ ಯಶವಂತ ಚಿತ್ತಾಲರ 'ಅಬೋಲಿನ'ಕಥೆಯಾಧಾರಿತ ನಾಟಕವನ್ನು ಬಿ. ಜಯಶ್ರೀ ನಿರ್ದೇಶಿಸಿದರು.

ಜುಲೈ 7, 1987 ರಂದು ಕಡೆಯ ಪ್ರದರ್ಶನವಾದಾಗ ಕಲಾಕ್ಷೇತ್ರದಲ್ಲಿ ದೊಡ್ಡ ಕಾರ್ಯಕ್ರಮ ಏರ್ಪಟ್ಟಿತ್ತು. ಡಾ. ಜೀವರಾಜ್ ಆಳ್ವ ಮತ್ತು ಎಂ. ಪಿ. ಪ್ರಕಾಶ್ ಮುಖ್ಯ ಅತಿಥಿಗಳಾಗಿದ್ದರು. ಕಷ್ಟ ಕಾರ್ಪಣ್ಯಗಳ ಮಧ್ಯೆ 150 ದಿನಗಳ ರಂಗ ನಿರಂತರ ಸವಾಲನ್ನು ಎದುರಿಸಿ ನಿಂತಿತ್ತು. ''ರಂಗ ನಿರಂತರಕ್ಕೆ ಜಾಗ ಕೊಡಿ, ರೆಪರ್ಟರಿ ಕಟ್ಟುತ್ತೇವೆ'' ಎಂದು

ಸಿ. ಜಿ. ಕೆ. ಮಂತ್ರಿಗಳಿಗೆ ಅಹವಾಲು ನೀಡಿದರು. ಆದರೆ ಅದು ಫಲಪ್ರದವಾಗಲಿಲ್ಲ. ಒಂದು ಪಕ್ಕಾ ಜಾಗ ಸಿಕ್ಕಿದ್ದರೆ ಸಿ. ಜಿ. ಕೆ. ಜನಪರ ರೆಪರ್ಟರಿಯೊಂದನ್ನು ಕಟ್ಟುತ್ತಿದ್ದುದರಲ್ಲಿ ಸಂಶಯವಿಲ್ಲ. ನೂರೈವತ್ತು ದಿನಗಳು ರವೀಂದ್ರ ಕಲಾಕ್ಷೇತ್ರದ ಆವರಣವನ್ನೇ ತಮ್ಮ ತಾತ್ಕಾಲಿಕ ವಾಸಸ್ಥಾನವನ್ನಾಗಿ ಮಾಡಿಕೊಂಡಿದ್ದ ಕಲಾವಿದರು, ತಂತ್ರಜ್ಞರು, ನಿರ್ದೇಶಕರು ನಿಧಾನವಾಗಿ ಒಬ್ಬೊಬ್ಬರೇ ತಮ್ಮ ತಮ್ಮ ಮನೆಗಳ ಕಡೆ ಹೊರಟಿದ್ದರು. ಇದೆಲ್ಲದರ ಸೂತ್ರಧಾರಿಯಾಗಿದ್ದ ಸಿ. ಜಿ. ಕೆ. ತನ್ನ ಹುಚ್ಚು ಸಾಹಸಕ್ಕೆ, ತಾನು ಅನುಭವಿಸಿದ ಆರ್ಥಿಕ ಅಡಚಣೆಗಳಿಗೆ, ಅನಿರೀಕ್ಷಿತವಾಗಿ ಬಂದ ಸಹಾಯಗಳಿಗೆ, ಯಶಸ್ವಿಯಾಗಿ ಕೊನೆ ಮುಟ್ಟಿಸಿದ ರಂಗಯಾತ್ರೆಗೆ ಕೃತಜ್ಞತೆಯ ಮುಗುಳ್ನಗೆ ಬೀರಿದ್ದರು.

150 ದಿನಗಳ ರಂಗಯಾತ್ರೆಯ ಕಡೆಯಲ್ಲಿ ಹಣದ ಲೆಕ್ಕಾಚಾರಕ್ಕೆ ಕೂತಾಗ ಒಟ್ಟಾರೆಯಾಗಿ ಟರ್ನ್‌ಓವರ್ ಆಗಿದ್ದ ಹಣ ನಾಲ್ಕು ಲಕ್ಷಕ್ಕೂ ಹೆಚ್ಚು. ಹೆಗಲ ಮೇಲೆ ಬಿದ್ದ ಸಾಲ ಅರವತ್ತು ಸಾವಿರ. ಸಾಲದ ಹೊರೆಗಿಂತ ಸಾಧಿಸಿದ ಸಾಧನೆ ಸಿ. ಜಿ. ಕೆ. ಗೆ ಖುಷಿ ತಂದಿತ್ತು. 'ರಂಗನಿರಂತರ' ಮುಂದೇನು ಮಾಡಬೇಕು ಎಂಬ ಆಲೋಚನೆಗಳು ಆಗಲೇ ತಲೆಯಲ್ಲಿ ಗುನುಗುಟ್ಟುತ್ತಿದ್ದವು. 'ಗ್ರಾಮ ಸಮಾಜ', 'ಯುವ ನಾಟಕಕಾರ ಹಾಗೂ ನಿರ್ದೇಶಕರ ನಾಟಕೋತ್ಸವ', ಸ್ವಂತ ನಿರ್ದೇಶನದ ನಾಟಕಗಳು, ಹೀಗೆ ಒಂದೊಂದೇ ಯೋಜನೆಗಳು ಕಣ್ಣ ಮುಂದೆ ಬರತೊಡಗಿದವು.

'ರಂಗನಿರಂತರ'ಕ್ಕೆ ಸಿ. ಜಿ. ಕೆ. ನಾಟಕ ನಿರ್ದೇಶಿಸಿದ್ದು ಕಡಿಮೆ. ಬೇರೆಯವರಿಂದ ನಾಟಕ ಮಾಡಿಸಿದ್ದೇ ಹೆಚ್ಚು. ಕಿ. ರಂ. ನಾಗರಾಜರಿಂದ 'ನೀಗಿಕೊಂಡ ಸಂಸ' ಬರೆಸಿ ಹಿಂದೆ 'ರಂಗಸಂಪದ' ಕ್ಕೆ ನಿರ್ದೇಶಿಸಿದ್ದರು. ಈಗ ಮತ್ತೆ ಇನ್ನೊಂದು ನಾಟಕ ಬರೆದು ಕೊಡುವಂತೆ ಕಿ. ರಂ. ಹಿಂದೆ ಬಿದ್ದರು. ಕಿ. ರಂ. ಅವರು ಬರೆದ ಹೊಸ ನಾಟಕ 'ಕಾಲಜ್ಞಾನಿ ಕನಕ'. ಕಾಲಜ್ಞಾನಿ ಕನಕನ ಹುಡುಕಾಟ ಇದ್ದದ್ದು ಕೇಶವನ ಸುತ್ತ. 'ಕೇಶವ' ಎಂದರೆ ಬಾಡದ ಚೈತನ್ಯ ಎನ್ನುವ ವಿಶೇಷ ಅರ್ಥದ ಮುಖಾಂತರ ಅವರು ಕನಕನನ್ನು ತಿಳಿಯಲು ಪ್ರಯತ್ನಿಸಿದ್ದರು. ನಾಟಕದಲ್ಲಿ ಕಾಲಜ್ಞಾನವನ್ನು ಸಾಕಷ್ಟು ಬಳಸಿಕೊಂಡಿದ್ದರು.

ಈ ನಾಟಕವನ್ನು ವಿಶೇಷವಾಗಿ ಕನಕದಾಸರ 500ನೇ ಜಯಂತ್ಯುತ್ಸವಕ್ಕೆ ಸಿದ್ಧಪಡಿಸಲಾಯಿತು. ಖ್ಯಾತ ನೃತ್ಯಪಟು ಪಿ. ಸಿ. ಸುಬ್ರಹ್ಮಣ್ಯಂ ಈ ನಾಟಕಕ್ಕೆ ನೃತ್ಯ ಸಂಯೋಜನೆ ಮಾಡಿದ್ದರು. ನಾಟಕ ಸಾಕಷ್ಟು ಯಶಸ್ವಿಯೂ ಆಯಿತು.

ಸಿ. ಜಿ. ಕೆ. ಅವರ ಮುಂದಿನ ಮಹತ್ವಾಕಾಂಕ್ಷೆಯ ಪ್ರಯತ್ನವಾಗಿದ್ದು 'ಗ್ರಾಮ ಸಮಾಜ' ನಾಟಕೋತ್ಸವ. ಯುವ ಬರಹಗಾರರಿಗೆ ಮತ್ತು ನಿರ್ದೇಶಕರಿಗೆ ಅವಕಾಶ

ಕಲ್ಪಿಸಲಾಗಿದ್ದ ಈ ನಾಟಕೋತ್ಸವ ನಮ್ಮ ಹಳ್ಳಿಯ ಸೊಗಡಿನ ಖ್ಯಾತ ಬರಹಗಾರ ಶ್ರೀ ಕೃಷ್ಣ ಆಲನಹಳ್ಳಿಯವರ ನೆನಪಿಗೆ ಸಿ. ಜಿ. ಕೆ. ಅರ್ಪಿಸಿದ್ದರು. ನಾಟಕೋತ್ಸವದ ಜೊತೆ ಜೊತೆಗೆ ''ಸ್ವಾತಂತ್ರ್ಯ ನಂತರದ ಗ್ರಾಮೀಣ ಭಾರತದ ವಾಸ್ತವ ಸ್ಥಿತಿ'' ಕುರಿತ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು............ ಏಪ್ರಿಲ್ ಕೊನೆಯ ವಾರ ನಡೆದ ಈ ಗ್ರಾಮ ಸಮಾಜ ನಾಟಕೋತ್ಸವ 'ಕತ್ತಲೆ ತುಂಬಿರುವ ಪ್ರಪಂಚದಲ್ಲಿ ಗಾಳಿಗೆ ಆರಿ ಹೋಗುವ ಸೊಡರನ್ನಿಟ್ಟುಕೊಂಡು ನಡೆಸುವ ಹೋರಾಟದ ಪ್ರತೀಕ'' ಎಂದು ಸಿ. ಜಿ. ಕೆ. ಸಂದರ್ಶನವೊಂದರಲ್ಲಿ ಹೇಳಿದ್ದರು. ಐದು ದಿನಗಳ ಕಾಲ ನಡೆದ ಈ ನಾಟಕೋತ್ಸವದಲ್ಲಿ ಪ್ರತಿದಿನವೂ ಎರಡು ನಾಟಕಗಳ ಪ್ರದರ್ಶನ. ಗ್ರಾಮೀಣ ಸಮಾಜದ ವಿವಿಧ ಮುಖಗಳನ್ನು ರಸಮಯ ಕ್ಷಣಗಳನ್ನು, ಮಾನವೀಯ ಸಂಬಂಧಗಳ ಹುಡುಕಾಟಗಳನ್ನು ಅವು ತೆರೆದಿಟ್ಟಿದ್ದವು.

ನಾಟಕೋತ್ಸವದ ಮೊದಲ ನಾಟಕ ಕೇಶವ ರೆಡ್ಡಿ ಹಂದ್ರಾಳ ಅವರ 'ದಮನ' ಕತೆಯ ನಾಟಕ ರೂಪ 'ಕಳ್ಳಿಯಲ್ಲಿ ಕೆಂಪು ಹೂವು'. ನಾಟಕ ರೂಪ ಸಿ. ಜಿ. ಕೆ. ; ನಿರ್ದೇಶನ ಅ. ನ. ರಮೇಶ. ಅನಂತರ ಪ್ರದರ್ಶಿತವಾದ ನಾಟಕಗಳು, ಮಂಗಳೂರಿನ ವಿದ್ಯಾರ್ಥಿ ಮಹಾಲಿಂಗ ಬರೆದ 'ಕೊಂಬಿನವರು', ನಿರ್ದೇಶನ ಡಾ. ನಾ. ದಾಮೋದರ ಶೆಟ್ಟಿ. ನಾಗತಿಹಳ್ಳಿ ಚಂದ್ರಶೇಖರ್ ಅವರ ಸಣ್ಣಕಥೆ 'ಪುಟ್ಟಕ್ಕನ ಮೆಡಿಕಲ್ ಕಾಲೇಜ್' ಅನ್ನು ನಾಟಕ ರೂಪಕ್ಕೆ ಅಳವಡಿಸಿದವರು ಮೈನಾ ಚಂದ್ರಶೇಖರ್, ನಿರ್ದೇಶಿಸಿದವರು ಮಲ್ಲಿಕಾರ್ಜುನ್. ರಾಮಚಂದ್ರಶರ್ಮರ 'ಸಂಗಮ' ಕತೆಯನ್ನು 'ಊನ'ಎಂದು ನಾಟಕಕ್ಕೆ ಇಳಿಸಿದವರು ಪಾಲ್ ಸುದರ್ಶನ್, ಕಾಶಿ. ನಿರ್ದೇಶಿಸಿದ್ದು ರಮೇಶ್ ಪಂಡಿತ್. ಅನಂತರ ಬಿ. ಸಿ. ದೇಸಾಯಿಯವರ 'ಸುರಂಗ' ಕತೆಯನ್ನು ನಾಟಕಕ್ಕೆ ತಂದವರು ಮೀನಾಕ್ಷಿ, ನಿರ್ದೇಶಿಸಿದವರು ಪಾಲ್ ಸುದರ್ಶನ್. ಶಾಂತರಸರ 'ಬೇಸ್ತು' ಕತೆಯನ್ನು ರೂಪಾಂತರಿಸಿ ನಿರ್ದೇಶಿಸಿದವರು ಮೈನಾ ಚಂದ್ರಶೇಖರ್, ಶಿವಲಿಂಗೇಗೌಡ. ದೇವನೂರು ಮಹದೇವ ಅವರ 'ಡಾಂಬರು ಬಂದುದು' ಕತೆಯನ್ನು ರೂಪಾಂತರಿಸಿ ನಿರ್ದೇಶಿಸಿದವರು ಕತ್ತುಿ ಸತ್ಯ. ಬೆಸಗರ ಹಳ್ಳಿ ರಾಮಣ್ಣನವರ 'ಗಾಂಧಿ ಸಂತಾನ' ಕತೆಯನ್ನು 'ಕಪ್ಪೆ ಬಾವಿ ನಕ್ಷತ್ರ ' ಎಂಬ ಹೆಸರಿನಲ್ಲಿ ರಂಗರೂಪಕ್ಕಳವಡಿಸಿದವರು ಚಂದ್ರು, ನಿರ್ದೇಶಿಸಿದವರು ಶ್ರೀಕಂಠಯ್ಯ. ಯು. ಆರ್. ಅನಂತಮೂರ್ತಿಯವರ 'ಮೌನಿ' ಕತೆಯನ್ನು ಉಮಾಶಂಕರ್ ಮತ್ತು ಬಿ. ವಿ. ರಾಜಾರಾಂ ನಾಟಕ ರೂಪಕ್ಕೆ ತಂದು ನಾಗರಾಜಮೂರ್ತಿ ನಿರ್ದೇಶಿಸಿದ್ದರು. ಕುಂ. ವೀರಭದ್ರಪ್ಪನವರ 'ದೇವರ ಹೂ' ಕತೆಯನ್ನು ನಟರಾಜ ಹುಳಿಯಾರ್ ರೂಪಾಂತರಿಸಿ ಶಿವರುದ್ರಯ್ಯ ನಿರ್ದೇಶಿಸಿದ್ದರು.

ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ ಪ್ರದರ್ಶನಗೊಂಡ ನಾಟಕಗಳೆಲ್ಲವೂ ಕಥಾ ಮೂಲದವು. ಸಿ. ಜಿ. ಕೆ. ಈ ನಾಟಕೋತ್ಸವದ ಮೂಲಕ ಸಿದ್ಧ ನಾಟಕ ರೂಪ ಇಲ್ಲದಿದ್ದರೂ, ಸಶಕ್ತ ಕತೆಯೊಂದು ಇದ್ದರೆ ಅದನ್ನು ಯಶಸ್ವಿಯಾಗಿ ರಂಗದ ಮೇಲೆ ತರಬಹುದು ಎಂದು ಸಾಬೀತು ಮಾಡಿದ್ದರು. ನಾಟಕೋತ್ಸವದಲ್ಲಿ ಪ್ರದರ್ಶನಗೊಂಡ ಎಲ್ಲಾ ನಾಟಕಗಳೂ ಯಶಸ್ವಿಯಾದವು ಎಂದು ಹೇಳಲಾಗದಿದ್ದರೂ, ಅನೇಕ ಯುವ ನಿರ್ದೇಶಕರು, ನಟರು, ನಾಟಕಕಾರು ಮುಂದಿನ ಸವಾಲು ಸ್ವೀಕರಿಸಲು ತಯಾರಾಗಿದ್ದರು. ಸಿ. ಜಿ. ಕೆ. "ನೂರು ತಾರೆಗಳ ಜನಕ" ಎಂಬ ಪ್ರಶಂಸೆಗೆ ಒಳಗಾಗಿದ್ದರು.

'ರಂಗ ನಿರಂತರ' ಬೆಳಕಿಗೆ ತಂದ ಅನೇಕ ಯುವ ಕಲಾವಿದರು ನಿಧಾನವಾಗಿ ಟೆಲಿವಿಷನ್ ಧಾರಾವಾಹಿಗಳ ಕಡೆ ಹೊರಳತೊಡಗಿದರು. ಅವರಿಗೆ ಅದೊಂದು ದೊಡ್ಡ ಆಕರ್ಷಣೆಯಾಗಿ ಪರಿಣಮಿಸಿತ್ತು. 'ರಂಗ ನಿರಂತರ' ವೇನೋ ಒಂದು ರಂಗತಂಡವಾಗಿ ಸಾಕಷ್ಟು ಹೆಸರು ಮಾಡಿತ್ತು. ಆದರೆ ಅದರದೇ ಆದ ಸಮಸ್ಯೆಗಳೂ ದೊಡ್ಡದಾಗಿ ಬೆಳೆದಿದ್ದವು. ಒಂದು ಕಡೆ 'ರಂಗ ನಿರಂತರ' ತಯಾರು ಮಾಡಿದ ಕಲಾವಿದರು ಟೆಲಿವಿಷನ್, ಸಿನಿಮಾ ಅಂತ ಹೋಗುತ್ತಿದ್ದರೆ, ಇನ್ನೊಂದು ಕಡೆ ಆರ್ಥಿಕ ಋಣಭಾರ ಹೆಚ್ಚುತ್ತಿತ್ತು. ಕಡೇ ಪಕ್ಷ ಸ್ಕೂಲು, ಕಾಲೇಜಿನ ವಿದ್ಯಾರ್ಥಿಗಳನ್ನು ಸಂಘಟಿಸಿ ಪ್ರತಿಭಾವಂತರನ್ನು ಯಾಕೆ ರಂಗಭೂಮಿ ಕಡೆ ಹೊರಳಿಸಬಾರದು ಎಂಬ ಯೋಚನೆ ಬಂತು. 'ಕ್ಯಾಚ್ ದೆಮ್ ಯಂಗ್' ಎಂಬ ನಾಟಕ ಸ್ಪರ್ಧೆಯನ್ನು ಅವರಿಗಾಗಿಯೇ ವಿಶೇಷವಾಗಿ ಏರ್ಪಡಿಸಿದರು. ಅದೂ ಕೂಡಾ ಒಂದು ಘಟ್ಟದಲ್ಲಿ ನಿಂತುಹೋಯಿತು.

'ರಂಗ ನಿರಂತರ' ಕ್ಕೆ ಸಿ. ಜಿ. ಕೆ. ನಿರ್ದೇಶಿಸಿದ ಇನ್ನೊಂದು ಮಹತ್ವದ ನಾಟಕವೆಂದರೆ, 'ಸುರಪುರದ ದೇಶಪ್ರೇಮಿ ನಾಯಕ'. ಸಮುದಾಯದ ಜಾಥಾದ ದಿನಗಳಿಂದಲೂ ಸುರಪುರದ ವೆಂಕಟಪ್ಪ ನಾಯಕನ ಬಗ್ಗೆ ನಾಟಕ ಮಾಡಬೇಕು ಎಂಬ ಆಲೋಚನೆ ಅವರ ತಲೆಯಲ್ಲಿ ಹೊಕ್ಕಿತ್ತು. ವೆಂಕಟಪ್ಪ ನಾಯಕನ ಬಗ್ಗೆ ನಾಟಕ ಬರೆಯಲು ಅವರು ಆರಿಸಿಕೊಂಡಿದ್ದು ಕವಿ ಕೆ. ಎಂ. ಮುನಿಕೃಷ್ಣಪ್ಪ ಅವರನ್ನು. ಸುರಪುರ ಸುತ್ತಿ ಅದರ ಇತಿಹಾಸಕ್ಕೆ ಸಂಬಂಧಪಟ್ಟ ದಾಖಲೆಗಳನ್ನೆಲ್ಲಾ ಹುಡುಕಿ ತೆಗೆದು ಮುನಿಕೃಷ್ಣಪ್ಪನವರನ್ನು ಹಿಡಿದು ಕೂರಿಸಿ ನಾಟಕ ಬರೆಸಿಯೇ ಬಿಟ್ಟರು. ಈ ನಾಟಕವನ್ನು ಆಗತಾನೆ ಹೊಸದಾಗಿ ಪ್ರಾರಂಭವಾಗಿದ್ದ ಒಂದು ತಂಡದ ಮೂಲಕ ಸುರಪುರದ ಕೋಟೆಯ ಹಿನ್ನೆಲೆಯಲ್ಲಿಯೇ ಪ್ರದರ್ಶನಕ್ಕೆ ತರಬೇಕೆಂಬ ಆಶಯ ಸಿ. ಜಿ. ಕೆ. ಯವರದಾಗಿತ್ತು. ಕಾರಣಾಂತರದಿಂದ ಅದು ಸಾಧ್ಯವಾಗಲಿಲ್ಲ. ಕಡೆಗೆ ರಂಗ ನಿರಂತರವೇ ಅದನ್ನು ಪ್ರದರ್ಶನಕ್ಕೆ ಎತ್ತಿಕೊಂಡಿತು. ಸಿ. ಜಿ. ಕೆ. ಈ ನಾಟಕಕ್ಕೆ ಕಂಸಾಳೆ, ಸುಡುಗಾಡು

ಸಿದ್ಧರ ಹಾಡುಗಳು, ಕಾಲಜ್ಞಾನದ ಮಾತುಗಳನ್ನು ಬೆರೆಸಿ ನಾಟಕಕ್ಕೆ ಹೊಸ ಆಯಾಮ ನೀಡಿದ್ದರು. ಸಿ. ಜಿ. ಕೆ. ಮೊದಲಿನಿಂದಲೂ ನಮ್ಮ ಶಕ್ತ ಜಾನಪದ ಪ್ರದರ್ಶಕ ಕಲೆಗಳ ಸೊಗಡನ್ನು ತಮ್ಮ ಬೇರೆ ಬೇರೆ ನಾಟಕಗಳಲ್ಲಿ ಅಳವಡಿಸಿಕೊಳ್ಳುತ್ತಲೇ ಬಂದಿದ್ದರು. ಈ ನಾಟಕದ ಮೂಲಕ ಹಾಗೂ ಮುಂದಿನ ಅನೇಕ ನಾಟಕಗಳಲ್ಲಿ ಇದೇ ಪ್ರವೃತ್ತಿಯನ್ನು ಮುಂದುವರೆಸಿದರು. ಈ ನಾಟಕ ತಯಾರಾದದ್ದು ರಂಗತರಬೇತಿ ಶಿಬಿರದ ಅಂಗವಾಗಿ. ಅಭಿನಯಿಸಿದ ನಟರೆಲ್ಲಾ ಹೊಸಬರೇ. ಅಭಿನಯ ಕೊಂಚ ಸೊರಗುತ್ತಿದೆ ಎನಿಸಿದರೆ ಅಥವಾ ಪ್ರಬುದ್ಧ ನಟರು ಇಲ್ಲದಂಥ ಕಡೆ ಸಿ. ಜಿ. ಕೆ. ತಂತ್ರ ಸಮೃದ್ಧಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುತ್ತಾರೆ. ಆ ಮೂಲಕ ಕೊರತೆಯನ್ನು ಸರಿತೂಗಿಸಲು ನೋಡುತ್ತಾರೆ. 'ಸುರಪುರದ ದೇಶಪ್ರೇಮಿ ನಾಯಕ' ದಲ್ಲಿ ಆದದ್ದೂ ಅದೇ. ತಂತ್ರ ಸಮೃದ್ಧಿಯ ಸುರಪುರದ ನಾಯಕ'ಎಂದೇ ಆಗ ಪತ್ರಿಕೆಗಳು ಆ ನಾಟಕದ ಬಗ್ಗೆ ವರದಿ ಮಾಡಿದ್ದವು.

ಯಾವುದೇ ಸಂಘಟನೆಗೆ ಏರು ಮುಖವಿದ್ದಂತೆ ಇಳಿಮುಖವೂ ಇರುತ್ತದೆ. 'ರಂಗ ನಿರಂತರ' ದ ಉತ್ಸಾಹ ಬರಬರುತ್ತಾ ಕುಗ್ಗಿ ಮೂಲ ಆಶಯಗಳು ಗಾಳಿಗೆ ತೂರಿ ಹೋಗಬಹುದು ಎಂಬ ಅನುಮಾನ ಬರತೊಡಗಿತು. ಹಾಗಾಗುವ ಮೊದಲು ಅದರ ಚಟುವಟಿಕೆಯನ್ನು ಸ್ಥಗಿತಗೊಳಿಸುವುದೇ ಸರಿ ಎಂಬ ತೀರ್ಮಾನಕ್ಕೆ ಸಿ. ಜಿ. ಕೆ. ಬಂದರು. ಸುಮಾರು ಸಾಲ ಮೈಮೇಲೆ ಹೊತ್ತುಕೊಂಡು ಸಂಘಟನೆಯ ಚಟುವಟಿಕೆಯನ್ನು ಸ್ಥಗಿತಗೊಳಿಸಿದರು. ಅದರೊಟ್ಟಿಗೆ ಸಿ. ಜಿ. ಕೆ. ಯ ರೆಪರ್ಟರಿ ಕಟ್ಟಿ ಬೆಳೆಸಬೇಕೆಂಬ ಆಸೆಯೂ ಕಮರಿಹೋಯಿತು.

೫. ಸಿನಿಮಾ ಮತ್ತು ಸಿ. ಜಿ. ಕೆ.

ಸಿನಿಮಾ ನಟ ಲೋಕೇಶ್ ಒಮ್ಮೆ ಸಿ. ಜಿ. ಕೆ. ಬಳಿ ಮಾತನಾಡುತ್ತಾ ಕೃಷ್ಣ ಆಲನಹಳ್ಳಿ ಅವರ 'ಭುಜಂಗಯ್ಯನ ದಶಾವತಾರಗಳು' ಕಾದಂಬರಿಯನ್ನು ಸಿನಿಮಾ ಮಾಡುವ ಆಸೆ ತೋಡಿಕೊಂಡರು. ಸಿ. ಜಿ. ಕೆ. ಇದೇ ಮೊದಲೇನೂ ಸಿನಿಮಾಕ್ಕೆ ಹೆಜ್ಜೆ ಇಟ್ಟವರಲ್ಲ. ಕೆಲ ವರ್ಷಗಳ ಹಿಂದೆ ಕೋಡಳ್ಳಿ ಶಿವರಾಂ ಮಾಡಿದ್ದ 'ಬೆಳ್ಳಿ ಬೆಳಕು' ಎಂಬ ಸಿನಿಮಾದಲ್ಲಿ ಸಣ್ಣ ಪಾತ್ರವೊಂದರಲ್ಲಿ ನಟಿಸಿದ್ದರು. ಆದರೂ ಸಿನಿಮಾದೊಂದಿಗೆ ತಮ್ಮ ಸಹಯೋಗ ಹೊಡೆದು ಕಾಣುವಂತೆ ಪ್ರವೇಶಿಸಿದ್ದು 'ಭುಜಂಗಯ್ಯನ' ಮೂಲಕ. ಸಹಾಯಕ ನಿರ್ದೇಶಕನೆಂದು ಕೆಲಸ ಮಾಡಲು ಶುರು ಮಾಡಿದರು ಸಿ. ಜಿ. ಕೆ. . ಸ್ಕ್ರಿಪ್ಟ್ ನಿಂದ ಹಿಡಿದು ಎಲ್ಲಾ ವಿಭಾಗಗಳಲ್ಲೂ ಕೆಲಸ ಮಾಡಲಾರಂಭಿಸಿದರು. ಆ ಸಮಯದಲ್ಲಿ ಚಲನಚಿತ್ರ ರಂಗದ ಕೆಲವು ಪ್ರಮುಖ ನಿರ್ಮಾಪಕರ ಪರಿಚಯವೂ ಆಯಿತು.

'ಭುಜಂಗಯ್ಯನ ದಶಾವತಾರ' ಕಲಾತ್ಮಕವಾಗಿ ಮೂಡಿಬಂದಿತ್ತು. ಆದರೆ ಗಲ್ಲಾಪೆಟ್ಟಿಗೆಯಲ್ಲಿ ಸೋತಿತ್ತು. ಪ್ರಜ್ಞಾವಂತ ಪ್ರೇಕ್ಷಕರಿಗೆ ಇಷ್ಟವಾಗಿತ್ತು.

'ಭುಜಂಗಯ್ಯನ ದಶಾವತಾರ' ಬಿಡುಗಡೆಯಾಗಿ ಇನ್ನೇನು ಮತ್ತೆ ರಂಗಭೂಮಿ ಕಡೆ ಹೊರಳಬೇಕೆನ್ನುವಷ್ಟರಲ್ಲಿ ಭುಜಂಗಯ್ಯನ ಮೂಲಕವೇ ಪರಿಚಯವಾಗಿದ್ದ ಯುವ ನಿರ್ದೇಶಕ ರವೀಂದ್ರನಾಥ್'ವೀರಪ್ಪನ್' ಚಿತ್ರಕ್ಕೆ ಸಿ. ಜಿ. ಕೆ. ಯನ್ನು ಎಳೆದೊಯ್ದರು. ಆಗ ವೀರಪ್ಪನ್ ಅಟ್ಟಹಾಸ ತುತ್ತತುದಿಗೇರಿತ್ತು. ಪೋಲೀಸ್ ಅಧಿಕಾರಿಗಳನ್ನು ಕೊಂದು ದೊಡ್ಡ ಹೆಸರು ಮಾಡಿದ್ದ ವೀರಪ್ಪನ್. ಕನ್ನಡ ಚಲನಚಿತ್ರರಂಗದ ಪ್ರತಿಷ್ಠಿತ ನಿರ್ಮಾಪಕರೂಲ್ಲೊಬ್ಬರಾದ ಚಂದೂಲಾಲ್ ಜೈನ್ ಆ ಸಿನಿಮಾದ ನಿರ್ಮಾಪಕರು. ರವೀಂದ್ರನಾಥ್ ನಿರ್ದೇಶಕರು.

ಸಿ. ಜಿ. ಕೆ. 'ವೀರಪ್ಪನ್'ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆಯಬೇಕೆಂದು ಒಪ್ಪಂದವಾಯಿತು. 'ವೀರಪ್ಪನ್'ಗೆ ಸಂಬಂಧಪಟ್ಟ ಎಲ್ಲಾ ಮಾಹಿತಿಗಳನ್ನೂ ಬೇರೆ ಬೇರೆ ಮೂಲಗಳಿಂದ ಸಂಗ್ರಹಿಸಿದರು. ಅನಂತರ ಕೂತು ಗಟ್ಟಿಯಾದ್ಧ ಕತೆಯನ್ನು ಹೆಣೆದರು. 'ವೀರಪ್ಪನ್' ಬಿಡುಗಡೆಯಾಗಿ ಯಶಸ್ವಿಯಾಯಿತು. ಅದಕ್ಕೆ ರಾಜ್ಯಪ್ರಶಸ್ತಿಯೂ ಬಂತು. ಆದರೆ ಅಷ್ಟು ಹೊತ್ತಿಗೆ ಸಿ. ಜಿ. ಕೆ. ಗೆ ರಂಗಭೂಮಿಯ ಜೀವಂತಿಕೆ ಸಿನಿಮಾದಲ್ಲಿ ಇಲ್ಲ ಎನಿಸಿ ಮತ್ತೆ ಕಲಾಕ್ಷೇತ್ರದ ಕಡೆ ಕಾಲುಗಳು ಚಲಿಸಿದವು. ಸಿ. ಜಿ. ಕೆ. ಯ ಸಿನಿಮಾ ಜೊತೆಗಿನ ಒಂದು ಸಣ್ಣ ಚಮಕ್ ಮುಕ್ತಾಯವಾಯಿತು.

## ೬. ಮೈಕೋ ಲಲಿತ ಕಲಾ ಸಂಘ ಮತ್ತು ಸಿ. ಜಿ. ಕೆ.

ಸಿ. ಜಿ. ಕೆ. ಗೆ ಸಮುದಾಯದ ಒಡನಾಟದ ದಿನಗಳಿಂದಲೂ ಕಾರ್ಮಿಕ ಸಂಘಗಳ ಜೊತೆ ಆತ್ಮೀಯ ಸಂಬಂಧವಿತ್ತು. ಬಿ. ಇ. ಎಲ್., ಐ. ಟಿ. ಐ., ಎಚ್. ಎ. ಎಲ್., ಮೈಕೊ, ಬಿ. ಇ. ಎಂ. ಎಲ್. ಮುಂತಾದ ಕಡೆ ಅವರು ಹಲವಾರು ರಂಗ ಶಿಬಿರಗಳನ್ನು ನಡೆಸಿಕೊಟ್ಟಿದ್ದರು. ಕಾರ್ಮಿಕರ ಪರವಾದ ಧೋರಣೆ ಅವರನ್ನು ಆತ್ಮೀಯ ಕಾಮ್ರೇಡ್‌ನನ್ನಾಗಿಸಿತ್ತು. ಚಲನಚಿತ್ರದ ಕಡೆ ಬೆನ್ನು ಹಾಕಿ, ಕಲಾಕ್ಷೇತ್ರದ ಕಡೆ ಕಾಲು ಹಾಕಿದಾಗ, ಸಿ. ಜಿ. ಕೆ. ಯನ್ನು ನಾಟಕ ನಿರ್ದೇಶಿಸುವಂತೆ ಆಮಂತ್ರಿಸಿದವರು ಮೈಕೊ ಲಲಿತ ಕಲಾಸಂಘದ ಮುಖ್ಯಸ್ಥರಾದ ಗೋಪಿನಾಥ್ ಅವರು. ಮೈಕೊ ಲಲಿತ ಕಲಾ ಸಂಘಕ್ಕೆ ನಾಟಕ ಮಾಡಿಸಲು ಸಿ. ಜಿ. ಕೆ. ಆರಿಸಿಕೊಂಡದ್ದು ಶೇಕ್ಸ್‌ಪಿಯರ್‌ನ 'ಜೂಲಿಯಸ್ ಸೀಸರ್' ನಾಟಕವನ್ನು. ನಾಟಕದ ಅನುವಾದಕರು ಕೆ. ಎಸ್. ಭಗವಾನ್.

ಸಿ. ಜಿ. ಕೆ. ಯ ರಂಗ ಒಡನಾಡಿಗಳಾಗಿದ್ದ ಎ. ಎಸ್. ರಮೇಶ್, ಮೈಕೊ ಕಿಟ್ಟಿ, ಶ್ರೀನಿವಾಸ ಕುಮಾರ್ ಮುಂತಾದವರು ಮೈಕೊದ ಉದ್ಯೋಗಿಗಳೇ ಆಗಿದ್ದರು. ಅವರೆಲ್ಲಾ ಈ ಪ್ರೊಡಕ್ಷನ್‌ನ ಹಿನ್ನೆಲೆಗಿದ್ದರು. ಮೈಕೊ ಲಲಿತ ಕಲಾ ಸಂಘದಲ್ಲಿ ನುರಿತ ನಟರು ಇದ್ದರೂ ಈ ನಾಟಕಕ್ಕೆ ಹೊಸ ನಟರು ದೊಡ್ಡ ಸಂಖ್ಯೆಯಲ್ಲಿ ಸೇರಿದ್ದರು. ಕಾರ್ಮಿಕ ಸಂಘಗಳಿಗೆ ನಾಟಕ ಮಾಡಿಸುವುದು ಸುಲಭದ ಕೆಲಸವಲ್ಲ. ಅವರ ಮಧ್ಯದಲ್ಲಿ ಅನೇಕ ಭಿನ್ನಾಭಿಪ್ರಾಯಗಳಿರುತ್ತವೆ. ಇಲ್ಲಿಯೂ ಆ ರೀತಿಯ ಒಂದು ಪ್ರಕ್ಷುಬ್ಧ ಪರಿಸ್ಥಿತಿ ಏರ್ಪಟ್ಟು ಒಂದು ಘಟ್ಟದಲ್ಲಿ ನಾಟಕ ನಿಲ್ಲಿಸುವ ಪರಿಸ್ಥಿತಿ ಉಂಟಾಯಿತು. ಇಂಥ ಬಿಕ್ಕಟ್ಟಿನಲ್ಲಿ ಪರಿಸ್ಥಿತಿಯನ್ನು ಸಿ. ಜಿ. ಕೆ. ನಾಜೂಕಾಗಿ ನಿಭಾಯಿಸಬಲ್ಲರು. ಕಡೆಗೂ ಘರ್ಷಣೆಗೆ ಇಳಿದಿದ್ದ ಎರಡೂ ತಂಡಗಳೂ ನಾಟಕಕ್ಕೆ ಶುಭ ಹಾರೈಸುವಂತೆ ಮಾಡಿ ಕಲಾಕ್ಷೇತ್ರದಲ್ಲಿ ನಾಟಕವನ್ನು ಆಡಿಸಿಯೇ ಬಿಟ್ಟರು.

ಮೈಕೊ ಲಲಿತ ಕಲಾಸಂಘಕ್ಕೆ ಸಿ. ಜಿ. ಕೆ. ನಿರ್ದೇಶಿಸಿದ ಮುಂದಿನ ನಾಟಕ ಕುಂ. ವೀರಭದ್ರಪ್ಪನವರ 'ಬೇಲಿ ಮತ್ತು ಹೊಲ'. ಕುಂ. ವೀ. ಅವರೇ ತಮ್ಮ ನೀಳ್ಗತೆಯೊಂದನ್ನು ನಾಟಕ ರೂಪಕ್ಕೆ ಅಳವಡಿಸಿದ್ದರು. ನಾಟಕದ ವಸ್ತು ದೇಶವನ್ನು ಕಾಯಬೇಕಾದ ಪೋಲೀಸ್ ವ್ಯವಸ್ಥೆಯು ಸ್ವಾತಂತ್ರ್ಯ ಬಂದ ನಂತರ ಪಡೆದ ಸ್ವರೂಪದ ನೈಜ ಚಿತ್ರಣ ಹಾಗೂ ಮುಗ್ಧರು ವ್ಯವಸ್ಥೆಯಿಂದಾಗಿ ಹೇಗೆ ನಿರ್ನಾಮವಾಗುತ್ತಾರೆ ಎಂಬುದು. ನಾಟಕದ ಹಾಡುಗಳನ್ನು ಕುಂ. ವೀ. ಅವರೇ ಬರೆದಿದ್ದರು. ಈ ನಾಟಕದ ನಟರೂ ಮುಕ್ಕಾಲು ಪಾಲು ಹೊಸಬರು. ಹೊಸ ನಟರನ್ನು ನಟನೆಗೆ ಅಣಿಗೊಳಿಸುತ್ತಾ ನಾಟಕದ ನಿರ್ದೇಶನವನ್ನು ಮಾಡುವುದು ಸಿ. ಜಿ. ಕೆ. ಗೆ ಮೊದಲಿನಿಂದಲೂ ಇಷ್ಟವಾದ ವಿಷಯವೇ.

'ಮೈಕೊ ಲಲಿತ ಕಲಾಸಂಘ' ಹಮ್ಮಿಕೊಂಡ ನಾಟಕೋತ್ಸವಕ್ಕೆ ಸಿ. ಜಿ. ಕೆ. ನಿರ್ದೇಶಿಸಿದ ನಾಟಕ ಚಂದ್ರಶೇಖರ ಕಂಬಾರರ ಮಹಾಕಾವ್ಯ 'ಚಕೋರಿ' ಯನ್ನು ಆಧರಿಸಿದ ನಾಟಕ. ಅದನ್ನು ನಾಟಕದ ಚೌಕಟ್ಟಿನಲ್ಲಿ ಇಡಲು ಸಿ. ಜಿ. ಕೆ. ಹೊಸೂರು ಮುನಿಶಾಪ್ಪನವರ ಜೊತೆ ಶ್ರಮಿಸಿದ್ದರು. ಇದು ನಾಟಕೋತ್ಸವ ಆದ್ದರಿಂದ ನಟರು ಬೇರೆ ಬೇರೆ ನಾಟಕಗಳಿಗೆ ಹಂಚಿ ಹೋಗಿದ್ದರು. ಸಿ. ಜಿ. ಕೆ. ತನ್ನ ಪರಿಚಯದ ಕಲಾವಿದರನ್ನು ಸೇರಿಸಿ ನಾಟಕ ನಿರ್ದೇಶಿಸಿದರು. ಸ್ತ್ರೀವಾದಿ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದ ಸರಸ್ವತಿ, ಮಮತಾರಾವ್ ಮುಂತಾದವರು ಇದರಲ್ಲಿ ಪಾತ್ರ ಮಾಡಿದರು. ಪಿಚ್ಚಳ್ಳಿ ಶ್ರೀನಿವಾಸ್ ಸಂಗೀತ, ರಾಧಾಕೃಷ್ಣ ಉರಾಳರ ನೃತ್ಯಸಂಯೋಜನೆ ಮಾಡಿದ್ದರು. ಸಿ. ಜಿ. ಕೆ. ನಿರ್ದೇಶಿಸಿದ ನಾಟಕಗಳಲ್ಲೇ ಇದು ಸವಾಲು ಎಸೆದ ನಾಟಕ.

ಆ ಸವಾಲನ್ನು ಅಷ್ಟೇ ಗಂಭೀರವಾಗಿ ತೆಗೆದುಕೊಂಡು ನಾಟಕ ನಿರ್ದೇಶಿಸಿ ಅದರಲ್ಲಿ ಗೆದ್ದಿದ್ದರು.

## ೭. ಬೆಂಗಳೂರಿನ ಹೊರಗಿನ ತಂಡಗಳು ಮತ್ತು ಸಿ. ಜಿ. ಕೆ.

ಬೆಂಗಳೂರು ಸಿ. ಜಿ. ಕೆ. ಯ ಕಾರ್ಯಕ್ಷೇತ್ರದ ಕೇಂದ್ರ ಸ್ಥಳ. ಆಗೊಮ್ಮೆ ಈಗೊಮ್ಮೆ ಅವರು ಹೊರಗಿನ ಸ್ಥಳಗಳಿಗೆ ಹೋಗಿ ನಾಟಕಗಳನ್ನು ನಿರ್ದೇಶಿಸಿದ್ದೂ ಉಂಟು. ಸಿ. ಜಿ. ಕೆ. ಗೆ ಕರ್ನಾಟಕದಾದ್ಯಂತ ಗೆಳೆಯರ, ಅಭಿಮಾನಿಗಳ ಬಳಗ ಇದೆ. ಅವರ ಒತ್ತಾಯಕ್ಕೆ ಮಣಿದು ಅವರು ತಮ್ಮ ಬಿಡುವಿಲ್ಲದ ಕೆಲಸಗಳ ಮಧ್ಯೆಯೂ ಹೊರಗೆ ಹೋಗಿ ಅನೇಕ ನಾಟಕಗಳನ್ನು ನಿರ್ದೇಶಿಸಿದ್ದಾರೆ.

ಕೆ. ಜಿ. ಎಫ್. ನ ಬಿ. ಇ.ಎಂ. ಎಲ್. , ಫ್ಯಾಕ್ಟರಿಯ ಕಲಾವಿದರಿಗೆ ಗಿರೀಶ್ ಕಾರ್ನಾಡರ ತುಘಲಕ್, ಶೇಕ್ಸ್‌ಪಿಯರನ ಒಥೆಲೊ, ಕಿ. ರಂ. ನಾಗರಾಜ ಅವರ 'ನೀಗಿಕೊಂಡ ಸಂಸ' ನಾಟಕಗಳನ್ನು ನಿರ್ದೇಶಿಸಿದರು.

ತನ್ನ ಹುಟ್ಟೂರಾದ ಮಂಡ್ಯಾದ 'ಗೆಳೆಯರ ಬಳಗಕ್ಕೆ' 'ತಬರನ ಕಥೆ' ನಿರ್ದೇಶಿಸಿದರು. ಮಂಡ್ಯಾದಲ್ಲಿ ಜಯಪ್ರಕಾಶ್‌ಗೌಡ, ಸಚ್ಚಿದಾನಂದ, ಮೋಹನ್‌ರಾಜ್ ಅಂಥವರು ರಂಗಭೂಮಿಯನ್ನು ಕ್ರಿಯಾಶೀಲವಾಗಿ ಉಳಿಸಿಕೊಂಡು ಬಂದಿದ್ದರು. ಏಳು ದಿನಗಳಷ್ಟು ಕಡಿಮೆ ಅವಧಿಯಲ್ಲಿ ಸಿ. ಜಿ. ಕೆ. ನಾಟಕ ನಿರ್ದೇಶಿಸಿದ್ದರು. ದಿವಂಗತ ಕೆ. ವಿ. ಶಂಕರೇಗೌಡರು ಆಸಕ್ತಿಯಿಂದ ಬಂದು ನಾಟಕ ವೀಕ್ಷಿಸಿದ್ದರು. ಮುಂದೆ ಸಿ. ಜಿ. ಕೆ. ಗೆ ಶಂಕರೇಗೌಡ ಪ್ರಶಸ್ತಿಯೂ ದೊರಕಿತು. ಹುಟ್ಟೂರಿನಲ್ಲಿ ಅವರಿಗೆ ಅಲ್ಲಿಯ ಗೆಳೆಯರು ಸನ್ಮಾನ ಮಾಡಿದ್ದರು.

ಕಾಸರಗೋಡಿನ 'ಯವನಿಕಾ' ತಂಡಕ್ಕೆ 'ಮತ್ತೆ ಮೊಹೆಂಜದಾರೋ' ಎಂಬ ನಾಟಕ ನಿರ್ದೇಶಿದರು. ಪಾಲ್ ಸುದರ್ಶನ್ ರಚನಾಕಾರರು.

ಮೈಸೂರಿನ ಸಮುದಾಯಕ್ಕೆ ಸಿ. ಜಿ. ಕೆ. ಎರಡು ನಾಟಕಗಳನ್ನು ನಿರ್ದೇಶಿಸಿದರು. ಮೊದಲಿಗೆ ಅವರು ನಿರ್ದೇಶಿಸಿದ್ದು ಸ್ಟ್ರಿಂಡ್ ಬರ್ಗ್‌ನ 'ಫಾದರ್' ನಾಟಕವನ್ನು . ಅದನ್ನು ಕನ್ನಡಕ್ಕೆ ಸಿ. ನಾಗಣ್ಣ ಅನುವಾದಿಸಿದ್ದರು. ಧ್ವನ್ಯಾಲೋಕದ ಬಯಲು ರಂಗಮಂದಿರದಲ್ಲಿ ಪ್ರೇಕ್ಷಕರು ಕುಳಿತುಕೊಳ್ಳುವ ಜಾಗವನ್ನು ರಂಗಮಂದಿರವನ್ನಾಗಿಸಿ, ರಂಗಮಂದಿರವನ್ನು ಪ್ರೇಕ್ಷಾಗೃಹವನ್ನಾಗಿ ಈ ನಾಟಕವನ್ನು ನಿರ್ದೇಶಿಸಿದ್ದರು. ಕೆಲವು ವರ್ಷಗಳ ನಂತರ ಮತ್ತೆ ಬಟೋಲ್ಟ್ ಬ್ರೆಕ್ಟ್‌ನ 'ಮದರ್ ಕರೇಜ್' ನಾಟಕವನ್ನು ಮೈಸೂರು ಸಮುದಾಯಕ್ಕಾಗಿ ನಿರ್ದೇಶಿಸಿದರು.

ಇದನ್ನು ಲಿಂಗದೇವರು ಹಳೆಮನೆ ಕನ್ನಡಕ್ಕೆ ಅನುವಾದಿಸಿದ್ದರು. ಬ್ರೆಕ್ಟ್‌ನ ಎಪಿಕ್ ತಂತ್ರಗಳನ್ನೆಲ್ಲಾ ಗಣನೆಗೆ ತೆಗೆದುಕೊಳ್ಳದೆ ಭಾರತೀಯ ತಾಯಿಯೊಬ್ಬಳು ತನ್ನ ಸಂಸಾರ ನಿರ್ವಹಣೆಯಲ್ಲಿ ಹೆಣಗಾಡುವ ಪರಿಯನ್ನು ಭಾವನಾತ್ಮಕವಾಗಿ ಹಿಡಿದಿಡುವ ಪ್ರಯತ್ನ ಮಾಡಿದ್ದರು. ನಾಟಕ ತುಂಬಾ ಯಶಸ್ವಿಯಾಯಿತು. ನಾಟಕವನ್ನು ನೋಡಿದ ಕವಿ, ನಾಟಕಕಾರ ಎಚ್. ಎಸ್. ಶಿವಪ್ರಕಾಶ್, 'ಸಿ. ಜಿ. ಕೆ. ಮುಖೇನ ಬ್ರೆಕ್ಟ್' ಎಂಬ ಲೇಖನವನ್ನೇ ಬರೆದರು.

ಮೈಸೂರಿನಲ್ಲಿ ರಂಗಾಯಣದ ರೆಪರ್ಟರಿಗೆ ಅವರು ಕೆ. ಎಸ್. ಭಗವಾನ್ ಅನುವಾದಿಸಿದ ಶೇಕ್ಸ್‌ಪಿಯರನ 'ಒಥೆಲೊ'ನಾಟಕ ನಿರ್ದೇಶಿಸಿದರು. ರಂಗಾಯಣದ ಪ್ರಾರಂಭದಿಂದಲೂ ಅದರ ಬಗ್ಗೆ ಒಂದು ರೀತಿಯ ತಾತ್ಸಾರ ಮತ್ತು ಕಟು ಅಭಿಪ್ರಾಯ ಹೊಂದಿದ್ದ ಸಿ. ಜಿ. ಕೆ. ಕಡೆಗೂ ತಮ್ಮ ಅಭಿಪ್ರಾಯವನ್ನು ಬದಲಾಯಿಸಿಕೊಂಡು ನಾಟಕ ನಿರ್ದೇಶಿಸಲು ಒಪ್ಪಿದ್ದರು.

## ೮. ಬೆಂಗಳೂರಿನ ಇತರ ತಂಡಗಳು ಮತ್ತು ಸಿ. ಜಿ. ಕೆ.

### ೮.೧ ಹಂದರ ಮತ್ತು ಸಿ. ಜಿ. ಕೆ.

'ಹಂದರ'ಎಂಬ ಹೆಸರಿನ ರಂಗತಂಡವೊಂದು ಅಲ್ಲಲ್ಲಿ ಆಗಾಗ್ಗೆ ನಾಟಕ ಪ್ರದರ್ಶನಗಳನ್ನು ನೀಡುತ್ತಿತ್ತು. ಆ ತಂಡದ ಪ್ರಮುಖ ಕಾರ್ಯಕರ್ತರಾದ ಸದಾನಂದ ಭಟ್ ಬ್ಯಾಂಕ್ ಉದ್ಯೋಗಿ. ದಕ್ಷಿಣ ಕನ್ನಡದವರಾದ ಅವರಿಗೆ ಯಕ್ಷಗಾನದ ಗೀಳು. 'ಯಕ್ಷ ದೇಗುಲ'ದಲ್ಲಿ ಯಕ್ಷಗಾನದ ಪಟುವಾಗಿ ಅಭಿನಯಿಸುತ್ತಿದ್ದರು. ಅವರ ಜೊತೆಗೆ ರಾಧಾಕೃಷ್ಣ ಉರಾಳ, ಯಕ್ಷ ದೇಗುಲದ ಮೋಹನ್, ಸತ್ಯನಾರಾಯಣ ಮುಂತಾದವರು ಇದ್ದರು. 'ಹಂದರ'ತಂಡ ಸಿ. ಜಿ. ಕೆ. ಯವರಿಂದ ಒಂದು ನಾಟಕ ನಿರ್ದೇಶಿಸಿಬೇಕೆಂದು ಮುಂದೆ ಬಂತು. ಸಿ. ಜಿ. ಕೆ. 'ಹಂದರ'ಕ್ಕೆ ಆರಿಸಿಕೊಂಡ ನಾಟಕ'ವೈಶಂಪಾಯನ ತೀರ'. ಇದು ಕವಿ ಮಹಾಬಲಮೂರ್ತಿ ಕೊಡ್ಲೆಕೆರೆ ಅವರ ಕಥೆಯನ್ನು ಆಧರಿಸಿದ್ದು. ಕಥೆಯನ್ನು ನಾಟಕ ರೂಪಕ್ಕೆ ಅಳವಡಿಸಿದವರು ಇನ್ನೊಬ್ಬ ಕವಿ ಎಲ್. ಎನ್. ಮುಕುಂದರಾಜ್ ಅವರು. ನಾಟಕದ ವಸ್ತು ಯಕ್ಷಗಾನದ ಹಿನ್ನೆಲೆಯನ್ನು ಹೊಂದಿರುವಂಥದೇ . ಗೀತಾ ಸುರತ್ಕಲ್, ಸದಾನಂದ ಭಟ್, ಮಂಜುನಾಥ ಕುಂದಾಪುರ ಮುಂತಾದವರು ಪಾತ್ರ ಮಾಡಿದ್ದರು. ಇದನ್ನೊಂದು ಅದ್ದೂರಿಯ ಪ್ರೊಡಕ್ಷನ್ ಆಗಿ ಸಿ. ಜಿ. ಕೆ. ರೂಪಿಸಿದ್ದರು. ನಾಟಕದ ತಯಾರಿಗೆ ಸುಮಾರು ಎಂಬತ್ತು ಸಾವಿರ ಖರ್ಚಾಗಿತ್ತು. ಅದು ಸಿ. ಜಿ. ಕೆ.

ಶೈಲಿ. ತನಗೆ ಅನಿಸಿದ ಹಾಗೆ ನಾಟಕ ರೂಪುಗೊಳ್ಳಬೇಕು. ಯಾವ ಹಂತದಲ್ಲೂ ರಾಜಿ ಮಾಡಿಕೊಳ್ಳಲು ಅವರು ತಯಾರಿಲ್ಲ. ಈ ನಾಟಕ ಕರ್ನಾಟಕದ ಹೊರಗೂ ಪ್ರದರ್ಶನಗೊಂಡಿತು.

'ಹಂದರ'ಮತ್ತು ಸಿ. ಜಿ.ಕೆ. ಒಡನಾಟ ಆಪ್ತವಾಗುತ್ತಾ ಹೋಯಿತು. 'ಹಂದರ'ತಂಡ ತನ್ನ 16 ನೇ ವರ್ಷದ ಹಬ್ಬವನ್ನು ಆಚರಿಸುವುದರ ಜೊತೆಗೆ 'ಸಿ. ಜಿ. ಕೆ. 46'(1996) ಎಂಬ ಒಂದು ಅಭಿನಂದನಾ ಗ್ರಂಥವನ್ನೂ ಅವರ ಗೌರವಾರ್ಥ ಹೊರತಂದಿತು. ಸಿ. ಜಿ. ಕೆ. ಯವರ ಆಪ್ತಮಿತ್ರರು ಅವರ ವ್ಯಕ್ತಿತ್ವ, ಸ್ವಭಾವ, ನಿರ್ದೇಶನ ಮತ್ತು ಸಂಘಟನೆಯ ಬಗ್ಗೆ ಬರೆದ ಲೇಖನಗಳು ಹಾಗೂ ಅವರ ನಾಟಕಗಳ ಬಗ್ಗೆ ಬಂದ ಅಭಿಪ್ರಾಯಗಳು ಈ ಗ್ರಂಥದಲ್ಲಿ ಇವೆ. ಸಿ. ಜಿ. ಕೆ. ವ್ಯಕ್ತಿತ್ವ ಮತ್ತ ಸಾಧನೆಯ ಬಗ್ಗೆ ಪ್ರಕಟವಾದ ಪ್ರಥಮ ಅಧಿಕೃತ ದಾಖಲೆ ಇದು. ಇದಕ್ಕಾಗಿ 'ಹಂದರ'ತಂಡವನ್ನು ಅಭಿನಂದಿಸಬೇಕು. ಈ ಕೃತಿಯ ಸಂಪಾದಕರು. ಕೆ. ಎಂ. ಮುನಿಕೃಷ್ಣಪ್ಪ ಮತ್ತು ಎಲ್. ಹನುಮಂತಯ್ಯ.

## ೮.೨ ಸಂಚಯ ಮತ್ತು ಸಿ. ಜಿ. ಕೆ.

'ಸಂಚಯ'ತಂಡ ಬೆಂಗಳೂರಿನ ಜಯನಗರದ ಆಸುಪಾಸಿನಲ್ಲಿ ನಾಟಕ ಮಾಡುತ್ತಿತ್ತು. ಈ ತಂಡದ ಆಧಾರವಾಗಿದ್ದವರು ಜಿ. ಎಸ್. ರಾಮರಾಯರು. ಎಂ. ಇ. ಎಸ್. ಹೈಸ್ಕೂಲಿನ ಅಧ್ಯಾಪಕರಾಗಿದ್ದ ಅವರು ತಮ್ಮ ವಿದ್ಯಾರ್ಥಿಗಳನ್ನೇ ಸತತವಾಗಿ ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸುತ್ತಾ ಬಂದವರು. ಸಿ. ಜಿ. ಕೆ. ಉದ್ದಕ್ಕೂ ಕಲ್ಚರಲ್ ಸಿಂಥಿಸಿಸ್ ಮಾತನಾಡುತ್ತಾ ಬಂದವರು. ಸಾಂಸ್ಕೃತಿಕ ಕ್ಷೇತ್ರವನ್ನು ಮೇಲ್ಜಾತಿಯವರ ಹಿಡಿತದಿಂದ ಬಿಡಿಸಬೇಕು ಎಂದು ಶೂದ್ರ ರಂಗ ಕಲಾವಿದರ ಸಂಘಟನೆಗೆ ತೊಡಗಿದವರು. ಹಾಗೆಂದು ಸಿ. ಜಿ. ಕೆ. ಎಂದೂ ಯಾವ ಜಾತಿಯನ್ನೇ ಆಗಲಿ ದ್ವೇಷಿಸಿದವರಲ್ಲ. ಅವರಿಗೆ ಎಲ್ಲರ ಜೊತೆ ಒಡನಾಟ ಇದ್ದೇ ಇದೆ. 'ಸಂಚಯ' ತಂಡದ ತುಂಬಾ ಇದ್ದವರು ಮೇಲ್ಜಾತಿ ನಟನಟಿಯರೇ. ಎ. ಎನ್. ರಮೇಶ್, ಕೆ. ಜಿ. ವಿಶ್ವನಾಥ್, ಎಸ್. ಕೆ. ಮಾಧವರಾವ್ ಇವರ ಮೂಲಕ ಸಿ.ಜಿ.ಕೆ. ಸಂಚಯ ತಂಡಕ್ಕೆ ಹತ್ತಿರವಾದರು. ಅವರಿಗಾಗಿ ಅವರು ನಿರ್ದೇಶಿಸಲು ಆರಿಸಿಕೊಂಡ ನಾಟಕ 'ಅಂಕೆ ತಪ್ಪಿದ ಶಂಕರ್ ಲಾಲ್'. ಇದು ಬ್ರೆಕ್ಟ್‌ನ 'ಇರ್‌ರೆಸಿಸ್ಟಬಲ್ ರೈಸ್ ಆಫ್ ಆರ್ಥ್ರೋ ಊಯಿ' ಯ ಕನ್ನಡ ಅನುವಾದ. ಅನುವಾದ ಮಾಡಿದ್ದವರು ಡಾ. ಕೆ. ವಿ. ನಾರಾಯಣ. ಇಂದು ನಾವು ಮಾತನಾಡುತ್ತಿರುವ ಜಾಗತೀಕರಣ,

ಖಾಸಗೀಕರಣ, ರಾಜಕೀಯದಲ್ಲಿ ಗೂಂಡಾಗಿರಿ ಇತ್ಯಾದಿ ಅಂಶಗಳನ್ನು ಒಳಗೊಂಡಿರುವ ನಾಟಕ. ಈ ನಾಟಕ ಸಿ. ಜಿ. ಕೆ. ಯವರ ಬೇರೆ ನಾಟಕಗಳಷ್ಟು ಪರಿಣಾಮಕಾರಿಯಾಗಿ ಮೂಡಿ ಬರಲಿಲ್ಲ.

### ೮.೩ ಸಮುದಾಯ ಮತ್ತು ಸಿ. ಜಿ. ಕೆ.

'ಸಮುದಾಯ' ಸಂಘಟನೆಯಿಂದ ಸಿ. ಜಿ. ಕೆ. ಹಿಂದೆಯೇ ಹೊರಬಂದಿದ್ದರೂ ಸಮುದಾಯದ ಜೊತೆಗಿನ ಸಂಪರ್ಕದ ತಂತು ಪೂರಾ ಕಡಿದುಹೋಗಿರಲಿಲ್ಲ. ಸಮುದಾಯದ ಚಟುವಟಿಕೆಗಳು ಮಧ್ಯೆ ಕೆಲವು ವರ್ಷಗಳ ಕಾಲ ಕ್ಷೀಣಿಸಿದ್ದು ನಿಜ. ಅಷ್ಟರಲ್ಲಿ ಸಮುದಾಯದ ಪ್ರಮುಖರನೇಕರು ಸಂಘಟನೆಯಿಂದ ಹೊರನಡೆದಿದ್ದರು. ಸಿ. ಕೆ. ಗುಂಡಣ್ಣ, ವೆಂಕಟೇಶ್, ಶಶಿಧರ ಬಾರೀಘಾಟ್, ಲಕ್ಷ್ಮೀ ಚಂದ್ರಶೇಖರ್, ಮೋಹನ್‌ಕುಮಾರ್ ಮುಂತಾದವರು ಸಮುದಾಯದ ಚಟುವಟಿಕೆಗಳನ್ನು ಸಕ್ರಿಯಗೊಳಿಸಲು ಪ್ರಯತ್ನಿಸುತ್ತಿದ್ದರು. ಇವರೆಲ್ಲಾ ಸೇರಿ ತಮ್ಮ ಹಳೆಯ ಕಾಮ್ರೇಡ್ ಸಿ. ಜಿ. ಕೆ. ಯವರನ್ನು ಸಮುದಾಯಕ್ಕೆ ನಾಟಕ ನಿರ್ದೇಶಿಸಲು ಒಪ್ಪಿಸಿದರು.

ಸಮುದಾಯಕ್ಕೆ ನಿರ್ದೇಶಿಸಲು ಸಿ. ಜಿ. ಕೆ. ಆರಿಸಿಕೊಂಡ ನಾಟಕ ಪಶ್ಚಿಮ ಬಂಗಾಳದ ಪ್ರಸಿದ್ಧ ಲೇಖಕಿ ಮಹಾಶ್ವೇತಾದೇವಿಯವರು ಬರೆದ ಕಥೆಗಳನ್ನಾಧರಿಸಿದ 'ರುಡಾಲಿ'. ಇದು ಮೂರು ಕಥೆಗಳನ್ನು ಆಧರಿಸಿದ ನಾಟಕ. 'ಸನಿಚರಿ', 'ದ್ರೋಪ್ತಿ', ಮತ್ತು 'ಸ್ತನದಾಯಿನಿ'. ಇವೇ ಆ ಮೂರು ಕಥೆಗಳು. ಈ ಮೂರು ಕಥೆಗಳೂ ಮೂರು ಹೆಣ್ಣಿನ ರೂಪಗಳನ್ನು ಅತ್ಯಂತ ಶಕ್ತಿಯುತವಾಗಿ ಚಿತ್ರಿಸಿರುವ ಕಥೆಗಳು. ಈ ಕಥೆಗಳನ್ನು ನಾಟಕ ರೂಪಕ್ಕಿಳಿಸಿದವರು ಶ್ರೀಮತಿ ದೀಪಾ ಗಣೇಶ್. ಈ ಮೂರು ಕಥೆಗಳು ರಂಗದ ಮೇಲೆ ಯಶಸ್ವಿಯಾಗಬೇಕಾದರೆ, ಅವುಗಳನ್ನು ಅಭಿನಯಿಸುವವರು ಅತ್ಯಂತ ಶಕ್ತರಾಗಿರಬೇಕು. ಸಿ. ಜಿ. ಕೆ. ಸದಾ ತನ್ನ ನಟರ ಆಯ್ಕೆಯಲ್ಲಿ ತೋರುವ ಜಾಣ್ಮೆ ಮೆಚ್ಚಬೇಕಾದ್ದು. ಇಲ್ಲಿ ಮೂರು ಪ್ರಧಾನ ಪಾತ್ರಗಳಿಗೆ, ಆಯ್ಕೆಯಾದವರು ವಸುಧಾ ಬಾರಿಘಾಟ್, ರಶ್ಮಿ, ವಂದಿತ. ಜೊತೆಗೆ ಪ್ರಸಿದ್ಧ ನಟ ದತ್ತಾತ್ರೇಯ. ಒಂದು ರೀತಿಯಲ್ಲಿ ಸಿ. ಜಿ. ಕೆ. ಈ ನಾಟಕದ ಮೂಲಕ ಸಮುದಾಯದ ಮೂರನೇ ಪೀಳಿಗೆಯ ಕಲಾವಿದರು, ತಂತ್ರಜ್ಞರನ್ನು ಬೆಳಕಿಗೆ ತಂದರು. ಈ ನಾಟಕ ಬೆಂಗಳೂರಿನ ಹೊರಗೆ ಕಲ್ಕತ್ತಾ, ಮೈಸೂರು ಮುಂತಾದ ಕಡೆ ಪ್ರದರ್ಶನಗೊಂಡು ಮೆಚ್ಚುಗೆ ಗಳಿಸಿತು.

ಸಮುದಾಯಕ್ಕೆ ಮಾಡಿಸಿದ ಮುಂದಿನ ನಾಟಕ 'ಅಂಬೇಡ್ಕರ್' ಈ ನಾಟಕವನ್ನು ರಚಿಸಿದವರು ಈಗ ಎಂ. ಎಲ್. ಸಿ. ಆಗಿರುವ ಕವಿ, ಚಿಂತಕ ಎಲ್. ಹನುಮಂತಯ್ಯ ನವರು. ಬಾಬಾ ಸಾಹೇಬ್ ಅಂಬೇಡ್ಕರ್ ಬಗ್ಗೆ ಪೂರ್ಣ ಪ್ರಮಾಣದ ನಾಟಕ ಕನ್ನಡ

ರಂಗಭೂಮಿಯ ಮೇಲೆ ಬಂದಿರಲಿಲ್ಲ. ಎಲ್. ಹನುಮಂತಯ್ಯ ಮತ್ತು ಸಿ. ಜಿ. ಕೆ. ಒಟ್ಟಿಗೆ ಕೂತು ಅಂಬೇಡ್ಕರ್ ಜೀವನದ ಯಾವ ಮುಖಗಳನ್ನು ರಂಗಕ್ಕೆ ಅಳವಡಿಸಬೇಕೆಂದು ಯೋಚಿಸತೊಡಗಿದರು. ಅಂಬೇಡ್ಕರ್ ಅವರನ್ನು ಬೌದ್ಧ ಧರ್ಮದ ಹಾಗೂ ಅಸ್ಪೃಶ್ಯತಾ ಆಚರಣೆಯ ವಿರುದ್ಧದ ಹೋರಾಟಗಳ ನೆಲೆಯಲ್ಲಿ ಪ್ರಧಾನವಾಗಿ ಚಿತ್ರಿಸಲಾಗಿತ್ತು. ಸಿ. ಜಿ. ಕೆ. ಯ ಹಳೆಯ ಗೆಳೆಯ ರಾಯಚೂರಿನ ಶ್ರೀಕಾಂತ ಕಕ್ಕೇರಿ ಅಂಬೇಡ್ಕರ್ ಪಾತ್ರ ಮಾಡಲು ಆಯ್ಕೆಯಾದರು. ಈ ನಾಟಕದ ಮೂಲಕ ಎಲ್ಲಾ ದಲಿತ ಸಂಘಟನೆಗಳನ್ನೂ ಒಂದೇ ವೇದಿಕೆ ಮೇಲೆ ತರುವ ಪ್ರಯತ್ನಗಳೂ ಆದವು. ಆದರೆ ಆ ಪ್ರಯತ್ನ ಪೂರ್ಣ ಪ್ರಮಾಣದಲ್ಲಿ ಯಶಸ್ವಿಯಾಗಲಿಲ್ಲ. ಈ ನಾಟಕದ ಮೂಲಕ ಕೃಷ್ಣರಾಯಚೂರು ಎಂಬ ಯುವಕ ರಂಗವಿನ್ಯಾಸಕಾರನಾಗಿ ರೂಪುಗೊಂಡಿದ್ದ. ಅಂಬೇಡ್ಕರ್ ಸಿ. ಜಿ. ಕೆ. ಯ ಅತ್ಯಂತ ಮಹತ್ವಾಕಾಂಕ್ಷೀ ನಾಟಕವಾಗಿತ್ತು. ಆದರೆ ನಿರೀಕ್ಷಿತ ಯಶಸ್ಸನ್ನು ಅದು ಕೊಡಲಿಲ್ಲ. ಅಲ್ಲದೆ ಹೆಚ್ಚಿನ ಪ್ರದರ್ಶನಗಳೂ ಆಗಲಿಲ್ಲ. ಆದರೆ ಈ ನಾಟಕದ ಮೂಲಕ ಸಿ. ಜಿ. ಕೆ. ಪ್ರತಿಭಾವಂತರಾದ ಕೆಲವು ಕಲಾವಿದರು ಹಾಗೂ ತಂತ್ರಜ್ಞರನ್ನು ರಂಗಭೂಮಿಗೆ ಪರಿಚಯಿಸಿದ್ದರು.

'ದಂಡೆ' ಕಾ. ತ. ಚಿಕ್ಕಣ್ಣನವರ ಕಾದಂಬರಿ. ಸ್ವಾತಂತ್ರ್ಯ ಸಂಗ್ರಾಮದ ಚಳುವಳಿ ಆಗಿನ ಕಾಲದ ಮುಗ್ಧ ಹಳ್ಳಿಗರ ಮೇಲೆ ಎಂಥಾ ಪ್ರಭಾವ ಬೀರಿತ್ತು .ಎಂಬುದನ್ನು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸುವ ಕಾದಂಬರಿ ಇದು. ಇದನ್ನು ಸಮುದಾಯಕ್ಕೆ ನಿರ್ದೇಶಿಸಲು ಸಿ. ಜಿ. ಕೆ. ಕೈಗೆತ್ತಿಕೊಂಡರು. ಕಾದಂಬರಿಯನ್ನು ನಾಟಕ ರೂಪಕ್ಕೆ ಅಳವಡಿಸಲು ಖ್ಯಾತ ಕವಿ ಎಸ್. ಜಿ. ಸಿದ್ಧರಾಮಯ್ಯನವರನ್ನು ಒಪ್ಪಿಸಿದರು. ನಮ್ಮ ಜನಪದ ಪ್ರದರ್ಶಕ ಕಲೆಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು, ಅಂದಿನ ಗ್ರಾಮೀಣ ಸಮಾಜ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಪಂದಿಸಿದ ರೀತಿಯನ್ನು, ಅದರ ಪರಿಣಾಮದಿಂದ ಆದ ಏರುಪೇರುಗಳನ್ನು ದೃಶ್ಯ ಮಾಧ್ಯಮದ ಮೂಲಕ ಚೆನ್ನಾಗಿಯೇ ಸಂಯೋಜಿಸಿದ್ದರು. ಆದರೆ ನಾಟಕದ ಕೊನೆಯಲ್ಲಿ ಬರುವ ರಾಜಕೀಯ ನಿಲುವುಗಳ ಬಗೆಗಿನ ಸಿ. ಜಿ. ಕೆ. ಅವರ ವಿಶ್ಲೇಷಣೆ ಅಷ್ಟೊಂದು ಸ್ಪಷ್ಟವಾಗಿರಲಿಲ್ಲ. ಸಿ. ಜಿ. ಕೆ. ಯ ಸಮಸ್ಯೆ ಅಂದರೆ ತಾವು ಪ್ರತಿಪಾದಿಸಲು ಹೋಗುವ ಯಾವುದೇ ಸಿದ್ಧಾಂತದ ಬಗ್ಗೆ ಸ್ಪಷ್ಟ ನಿಲುವುಗಳನ್ನು ತಾಳದೇ ಇರುವುದು. ವಿವರಣಾತ್ಮಕ ದೃಶ್ಯಗಳಲ್ಲಿ ಸಾಧಿಸುವ ದಿಗ್ವಿಜಯವನ್ನು ವಿಶ್ಲೇಷಣಾತ್ಮಕ ದೃಶ್ಯಗಳಲ್ಲಿ ಅವರು ಇನ್ನೂ ಸಾಧಿಸಲಾಗಿಲ್ಲ ಎಂಬುದು ನನ್ನ ನಂಬಿಕೆ.

ಈ ಮೂರು ನಾಟಕಗಳನ್ನು ಸಮುದಾಯಕ್ಕೆ ನಿರ್ದೇಶಿಸುವ ಮೂಲಕ ಮತ್ತೆ ಸಮುದಾಯದ ಜೊತೆ ಸಿ. ಜಿ. ಕೆ. ತಮ್ಮ ಸಂಬಂಧವನ್ನು ಮುಂದುವರೆಸಿದರು. ಈಗಲೂ ಆಗಿಂದಾಗ ಸಮುದಾಯದ ಬೆಳವಣಿಗೆಗೆ ಬೇಕಾದ ಮಾರ್ಗದರ್ಶನ ನೀಡುತ್ತಾ ಬರುತ್ತಿದ್ದಾರೆ.

## ೮.೪. ಸಾಣೆಹಳ್ಳಿಯ ಶಿವಸಂಚಾರ ಮತ್ತು ಸಿ. ಜಿ. ಕೆ.

'ತರಳಬಾಳು' ಮಠ ವೀರಶೈವ ಮಠಗಳಲ್ಲೇ ಪ್ರಗತಿಪರವಾದ ಮಠವೆಂದು ಹೆಸರುಗಳಿಸಿದೆ. ಅದು ಇರುವುದು ಸಿರಿಗೆರೆಯಲ್ಲಿ. ಆ ಮಠದ ಅನೇಕ ಶಾಖೆಗಳು ಬೇರೆ ಬೇರೆ ಸ್ಥಳಗಳಲ್ಲಿವೆ. ಅಂಥ ಶಾಖೆಗಳಲ್ಲಿ ಸಾಣೆಹಳ್ಳಿಮ ಮಠವೂ ಒಂದು. ಸಾಣೆಹಳ್ಳಿಯ ಶ್ರೀ ಪಂಡಿತಾರಾಧ್ಯ ಸ್ವಾಮೀಜಿಯವರು ತಮ್ಮ ಹೊಸ ರೀತಿಯ ಆಲೋಚನೆಗಳಿಂದ, ಮಠಮಾನ್ಯಗಳಿಗಿಂತ ಭಿನ್ನವಾದ ಮಾತುಗಳಿಂದ ಆಗಲೇ ಸಾರ್ವಜನಿಕ ಜೀವನದಲ್ಲಿ ಅನೇಕರ ಗಮನ ಸೆಳೆದಿದ್ದರು. ಅವರು 'ಶಿವಕುಮಾರ ಹವ್ಯಾಸಿ ಕಲಾ ಸಂಘ'ವೊಂದನ್ನು ಸ್ಥಾಪಿಸಿ ಖ್ಯಾತ ನಿರ್ದೇಶಕರಾದ ಅಶೋಕ ಬಾದರದಿನ್ನಿ, ಶ್ರೀಮತಿ ಬಸವಲಿಂಗಯ್ಯ ಹಿರೇಮಠ್, ಮಂಜುಳ, ವೈ. ಡಿ. ಬಾದಾಮಿ ಮುಂತಾದವರನ್ನು ಕರೆಸಿ ರಂಗಕಾರ್ಯಾಗಾರಗಳನ್ನು ಏರ್ಪಡಿಸಿದ್ದರು. ನಾಟಕಗಳನ್ನು ತಯಾರು ಮಾಡಿದ್ದರು. ಸಾಧ್ಯವಾದರೆ ನಿರಂತರವಾಗಿ ನಾಟಕವಾಡುವ ಒಂದು ತಂಡವನ್ನೇ ರೂಪಿಸಬೇಕೆಂಬ ಆಲೋಚನೆ ಕೂಡ ಅವರಿಗಿತ್ತು. ತಮಗೆ ಸೂಕ್ತ ಮಾರ್ಗದರ್ಶನ ಮಾಡುವ ವ್ಯಕ್ತಿಗಾಗಿ ಅವರು ಕಣ್ಣಾಡಿಸುತ್ತಿದ್ದರು.

ಸಿ. ಜಿ. ಕೆ. ಮತ್ತು ಪಂಡಿತಾರಾಧ್ಯ ಸ್ವಾಮೀಜಿಯವರ ಭೇಟಿಯಾದದ್ದು, ಆಕಸ್ಮಿಕ. ನಾಟಕ ಅಕಾಡೆಮಿಯ ಅಧ್ಯಕ್ಷರಾಗಿದ್ದ ಡಾ. ಕೆ. ಮರುಳಸಿದ್ದಪ್ಪನವರು ಹೊಸದುರ್ಗ ತಾಲ್ಲೂಕಿನ ಸಾಣೆ ಹಳ್ಳಿಗೆ ಕಾರ್ಯಕ್ರಮವೊಂದಕ್ಕೆ ಅತಿಥಿಯಾಗಿ ಹೋಗಬೇಕೆಂದು ಸಿ. ಜಿ. ಕೆ. ಯವರನ್ನು ಕೇಳಿದರು. ಅಲ್ಲಿಯವರೆಗೆ ಮಠದ ಆವರಣಕ್ಕೆ ಕಾಲಿಡಲು ನಿರಾಕರಿಸುತ್ತಿದ್ದ ಸಿ. ಜಿ. ಕೆ. ತನ್ನ ಎದುರಿಗೇ ಕ್ರಾಂತಿಕಾರಕ ಸಂಘಟನೆಗಳು ಛಿದ್ರವಾಗಿದ್ದನ್ನು ಕಂಡಿದ್ದರು. ಹಾಗಾಗಿ ಮಠದ ಆವರಣದೊಳಕ್ಕೆ ಕಾಲಿಟ್ಟರೆ ತಪ್ಪೇನು ಎಂದು ಸಮಾರಂಭಕ್ಕೆ ಹೋದರು. ಅವರು ಹೋದದ್ದು ನಾಟಕ ಅಕಾಡೆಮಿ ಹಮ್ಮಿಕೊಂಡಿದ್ದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ರಂಗಶಿಬಿರದ ಸಮಾರೋಪ ಸಮಾರಂಭಕ್ಕೆ. ಹಾಗೆ ಅವರು ಪಂಡಿತಾರಾಧ್ಯ ಸ್ವಾಮೀಜಿಯವರನ್ನು ಭೇಟಿಯಾದ್ದು. ಸಮಾರೋಪದ ಮಾತನಾಡುವಾಗ "ಶ್ರೀ ಶ್ರೀಯವರು ನಿರಂತರವಾಗಿ ನಾಟಕವಾಡುವ ತಂಡವೊಂದನ್ನು ರೂಪಿಸಬೇಕು. ಹಾಗೆಯೇ ಬಸವಣ್ಣನವರ ಕಾಯಕ ತತ್ವವನ್ನು

ಸಮಷ್ಟಿಯ ತತ್ತ್ವವನ್ನಾಗಿಸಬೇಕು'' ಎಂದು ಭಾಷಣ ಸಹ ಬಿಗಿದಿದ್ದರು. ಶ್ರೀ ಪಂಡಿತಾರಾಧ್ಯ ಸ್ವಾಮೀಜಿಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ''ಸಿ. ಜಿ. ಕೆ. ಯವರು ಇದರ ನೇತೃತ್ವ ವಹಿಸುವುದಾದರೆ ನಾನು ಸಂಘಟನೆಗೆ ಸಿದ್ಧ '' ಎಂದು ಹೇಳಿದರು. ಹೀಗೆ ಸಿ. ಜಿ. ಕೆ. ಯ ಹಾಗೂ ಸಾಣೆಹಳ್ಳಿಯ ಮಠದ ಸಂಬಂಧ ಬೆಳೆಯತೊಡಗಿತು.

ಸಿ. ಜಿ. ಕೆ. ಯೇನೋ ತಾವು ಆಡಿದ ಮಾತು ಮರೆತು ಸಾಣೆಹಳ್ಳಿಯಿಂದ ಬೆಂಗಳೂರಿಗೆ ಬಂದಿದ್ದರು. ಆದರೆ ಸ್ವಾಮೀಜಿ ಮರೆತಿರಲಿಲ್ಲ. ಕೆಲವೇ ದಿನಗಳಲ್ಲಿ ಸ್ವಾಮೀಜಿ ಸಿ. ಜಿ. ಕೆ. ಅವರನ್ನು ಸಂಪರ್ಕಿಸಿ ನಿರಂತರ ಚಟುವಟಿಕೆಗೆ ವಿಶೇಷ ಯೋಜನೆಯೊಂದನ್ನು ರೂಪಿಸಿಕೊಡುವಂತೆ ಕೋರಿಕೆ ಮಂಡಿಸಿದರು. ಈಗಾಗಲೇ ಹೆಗ್ಗೋಡಿನ ನೀನಾಸಂ ತಿರುಗಾಟ, ಮೈಸೂರಿನ ರಂಗಾಯಣ, ರೆಪರ್ಟರಿಗಳು ಸಕ್ರಿಯವಾಗಿ ಕೆಲಸಮಾಡುತ್ತಿದ್ದು ಅವುಗಳ ಜೊತೆಗೆ ಮೂರನೆಯ ರೆಪರ್ಟರಿಯೊಂದನ್ನು ರೂಪಿಸಲು ಸಿ. ಜಿ. ಕೆ. ಮುಂದಾದರು. ಆ ರೆಪರ್ಟರಿಗೆ ''ಶಿವ ಸಂಚಾರ''ಎಂದು ನಾಮಕರಣ ಮಾಡಿದರು. ಇಡೀ 'ಶಿವ ಸಂಚಾರ'ದ ಯೋಜನೆಯನ್ನು ಸ್ವಾಮೀಜಿಯವರ ಮುಂದಿಟ್ಟಾಗ ಅವರೂ ಒಪ್ಪಿಕೊಂಡರು. ಅಲ್ಲಿ ನಾಟಕ ಆಡಿಸುವುದರ ಜೊತೆಗೆ ಪ್ರಚಲಿತ ಸಮಸ್ಯೆಗಳನ್ನು ಕುರಿತಾದ ವಿಚಾರ ಸಂಕಿರಣಗಳನ್ನು ಏರ್ಪಡಿಸಲು ಮುಂದಾದರು. ಅಷ್ಟೇ ಅಲ್ಲ ಕರ್ನಾಟಕದ ಪ್ರಮುಖ ರಂಗಕರ್ಮಿಗಳನ್ನು ಸಾಣೇಹಳ್ಳಿಗೆ ಕರೆದೊಯ್ದರು. ಸಿ. ಜಿ. ಕೆ. ಇದ್ದ ಕಡೆ ಅವರ ಶಿಷ್ಯರ ತಂಡ ಇದ್ದೇ ಇರುತ್ತದೆ. ಅದು ಸಿ. ಜಿ. ಕೆ. ವೈಶಿಷ್ಟ್ಯ.

ಸಿ. ಜಿ. ಕೆ. ಸಾಣೆಹಳ್ಳಿಯ ಶಿವಸಂಚಾರಕ್ಕೆ ಶ್ರೀರಂಗರ 'ಶೋಕಚಕ್ರ' ನಾಟಕ ನಿರ್ದೇಶಿಸಿದರು. ಈ ಮೊದಲು ಅವರು ಸಿರಿಗೆರೆಯಲ್ಲಿ ತರಳಬಾಳು ಸಂಸ್ಥೆಯವರಿಗೇ ಎಚ್. ಎಸ್. ಶಿವಪ್ರಕಾಶ ಅವರ 'ಸುಲ್ತಾನ್ ಟಿಪ್ಪು' ನಾಟಕವನ್ನು ನಿರ್ದೇಶಿಸಿದ್ದರು, ಅದೂ ಪಂಡಿತಾರಾಧ್ಯ ಸ್ವಾಮೀಜಿಯವರ ಅಪೇಕ್ಷೆಯ ಮೇರೆಗೆ. ಟೀಪು ತನ್ನ ರಾಜ್ಯದಲ್ಲಿ ಮಧ್ಯಪಾನ ನಿಷೇಧಿಸಿದ್ದು ಅವರಿಗೆ ತುಂಬಾ ಇಷ್ಟವಾಗಿತ್ತು. ಯಾಕೆಂದರೆ ಅವರು ಮದ್ಯಪಾನದ ವಿರುದ್ಧ ಅರಿವು ಮೂಡಿಸುವ ಕಾರ್ಯಕ್ರಮವನ್ನು ವ್ಯಾಪಕವಾಗಿ ಹಾಕಿಕೊಂಡಿದ್ದರು. ಅವರ ಆಶಯವನ್ನು ಪ್ರತಿಬಿಂಬಿಸುವ ಆ ನಾಟಕವನ್ನು ಸಿ. ಜಿ. ಕೆ. ಅವರಿಗಾಗಿ ನಿರ್ದೇಶಿಸಿದ್ದರು.

ಅನಂತರ ಅವರು'ಸೋರುತಿಹದು ಮನೆಯ ಮಾಳಿಗಿ'ಎಂಬ ಶಿಶುನಾಳ ಶರೀಫರ ಜೀವನವನ್ನು ಆಧರಿಸಿದ ನಾಟಕವನ್ನು 'ಶಿವಸಂಚಾರ' ರೆಪರ್ಟರಿಗೆ ನಿರ್ದೇಶಿಸಿದರು. ಮಂಜುನಾಥ ಬೆಳಕೆರೆ ಅವರ 'ಶರೀಫ್'ನಾಟಕವನ್ನು ಆಧರಿಸಿದ ನಾಟಕ ಇದು.

ಸಾಣೆಹಳ್ಳಿಯ 'ಶಿವಸಂಚಾರ'ದ ಮಾರ್ಗದರ್ಶಕರಾಗಿ ಸಿ. ಜಿ. ಕೆ. ಸಲಹೆ ಸೂಚನೆಗಳನ್ನು ಕೊಡುತ್ತಲೇ ಇದ್ದಾರೆ. ಅದರ ಹಿಂದಿನ ಚೈತನ್ಯ ಶಕ್ತಿಯಾಗಿ ಪಂಡಿತಾರಾಧ್ಯಾ ಸ್ವಾಮೀಜಿಯವರ ಜೊತೆ ಕೈ ಜೋಡಿಸಿದ್ದಾರೆ. "ಬೇರೆ ಸಂಘಟನೆಗಳಿಗಿಂತ ಇಂದು ಶಿವಸಂಚಾರ ಹೆಚ್ಚು ಅರ್ಥಪೂರ್ಣವಾದ ಸಂಘಟನೆಯಾಗಿದೆ. ಅದಕ್ಕೆ ಎನ್‌ಕ್ಯಾಷ್ ಮಾಡಿಕೊಳ್ಳೋಕೆ ಯಾವುದೇ ಮಾತಿನ ಸೌಧ ಬೇಕಿಲ್ಲ, ಸ್ಲೋಗನ್ ಬೇಕಿಲ್ಲ" ಎನ್ನುತ್ತಾರೆ ಸಿ. ಜಿ.ಕೆ. ಅಲ್ಲಿ ಒಂದು ರಂಗ ಚಟುವಟಿಕೆಯ ಸಂಕೀರ್ಣವನ್ನೇ ಸೃಷ್ಟಿಸಬೇಕೆಂಬ ಯೋಜನೆಯನ್ನು ರೂಪಿಸಿದ್ದಾರೆ. ಯೋಜನೆಗಳನ್ನು ಕಾರ್ಯರೂಪಕ್ಕೆ ತರುವವರಿದ್ದರೆ, ಸಿ. ಜಿ. ಕೆ. ಯ ಬಳಿ ಯೋಜನೆಗಳಿಗೆ ಕೊರತೆ ಇಲ್ಲ.

## ೯. ಕರ್ನಾಟಕ ನಾಟಕ ಅಕೆಡಮಿ ಅಧ್ಯಕ್ಷರಾಗಿ ಸಿ. ಜಿ. ಕೆ.

ಕರ್ನಾಟಕದ ಪ್ರತಿಯೊಬ್ಬ ರಂಗಕರ್ಮಿಗೂ ಇರುವ ಕನಿಷ್ಠ ಎರಡು ಆಸೆಗಳೆಂದರೆ, ಮೊದಲಿಗೆ ಕರ್ನಾಟಕ ನಾಟಕ ಅಕೆಡಮಿ ಸದಸ್ಯರಾಗುವುದು, ಅನಂತರ ಅದರ ಅಧ್ಯಕ್ಷರಾಗುವುದು. ಸಿ. ಜಿ. ಕೆ. ೧೯೯೮ರಲ್ಲಿ ನಾಟಕ ಅಕಾಡೆಮಿ ಅಧ್ಯಕ್ಷರಾಗಿ ನೇಮಕವಾದರು. ನಾಟಕ ಅಕಾಡೆಮಿ ಅಂದರೆ ಇರುವ ಅಕಾಡೆಮಿಗಳೆಲ್ಲಾ ಕೊಂಚ ಪುಂಡ ಅಕಾಡೆಮಿ ಅಂತಲೇ ಹೆಸರುಗಳಿಸಿದೆ. ಅಲ್ಲಿಯ ಸದಸ್ಯರು ಹೊರಗೆ ಸಂಸ್ಕೃತಿ ಮಾತನಾಡುತ್ತಾರೆ, ಒಳಗೆ ಬಂದಾಗಲೆಲ್ಲಾ ಅದನ್ನು ಮರೆತುಬಿಡುತ್ತಾರೆ ಎಂಬುದು ಪ್ರಚಲಿತ ಅಭಿಪ್ರಾಯ. ಸಿ. ಜಿ. ಕೆ. ಯವರ ಅಧ್ಯಕ್ಷಾವಧಿಯಲ್ಲಿ ಈ ಜನಪ್ರಿಯ ಪ್ರಚಲಿತ ಅಭಿಪ್ರಾಯವನ್ನು ಸಮರ್ಥಿಸಿಕೊಳ್ಳುವಂತಹ ಯಾವ ಘಟನೆಗಳೂ ನಡೆಯಲಿಲ್ಲ ಎಂಬುದು ಸಮಾಧಾನಕರ ಸಂಗತಿ. ಅದನ್ನು ಸಿ. ಜಿ. ಕೆ. ಯವರೇ ಹೀಗೆ ದಾಖಲಿಸುತ್ತಾರೆ. "ಒಮ್ಮತ ಮೂಡಿಸಲಿಕ್ಕಾಗಿ ಈ ಹಿಂದೆ ನಿಗದಿತ ಅವಧಿಗಿಂತ ಹೆಚ್ಚು ಕಾಲ ಅಕಾಡೆಮಿಯ ಸಭೆ ನಡೆದ ಉದಾಹರಣೆಗಳ ಬಗ್ಗೆ ಕೇಳಿದ್ದೆ. ಆದರೆ ನಮ್ಮ ಅವಧಿಯಲ್ಲಿ ಅಕಾಡೆಮಿಯಲ್ಲಿ ಒಮ್ಮೆಯೂ ಇಂತಹ ಸಮಸ್ಯೆಗಳೇ ಇಲ್ಲದೆ ಎಲ್ಲರೂ ಕೈ ಕೈ ಹಿಡಿದು ಕೆಲಸ ಮುಗಿಸಿದ್ದೆವು. ನನಗನ್ನಿಸಿದ್ದು ಇದು ನನ್ನ ಸಾಹಸವಲ್ಲ, ಒಟ್ಟಾರೆ ಅಕಾಡೆಮಿ ಸಮೂಹದ ಸಾಹಸ ಎಂದೇ ತಿಳಿಯಬಹುದು."

ಸಿ. ಜಿ. ಕೆ. ತಮ್ಮ ಅಧ್ಯಕ್ಷಾವಧಿಯಲ್ಲಿ ಬೇರೆ ಬೇರೆ ಕಡೆ ನಾಟಕೋತ್ಸವಗಳನ್ನು ಏರ್ಪಡಿಸುವಾಗ ಸ್ಥಳೀಯ ರಂಗಭೂಮಿ ಪೋಷಕರನ್ನು ಸಂಪರ್ಕಿಸಿ ಅವರನ್ನು ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಮಾಡುತ್ತಿದ್ದರು. ಸರ್ಕಾರ ಅಕಾಡೆಮಿಗೆ

ಕಾರ್ಯಕ್ರಮಕ್ಕೆಂದು ಕೊಡಮಾಡುತ್ತಿದ್ದ ಹಣ ಬರೀ 6,30,000 ರೂಪಾಯಿಗಳು ಮಾತ್ರ. ಒಂದು ವರ್ಷದಲ್ಲಿ ಕರ್ನಾಟಕದಾದ್ಯಂತ ಆರು ಲಕ್ಷ ಅರವತ್ತುಮೂರು ಸಾವಿರ ರೂಪಾಯಿಗಳಲ್ಲಿ ಎದ್ದು ಕಾಣುವಂತಹ, ಹೇಳಿಕೊಳ್ಳುವಂತಹ ಯಾವ ಕಾರ್ಯಕ್ರಮ ತಾನೇ ಮಾಡಲಾದೀತು? ಹಣಕಾಸಿನ ಈ ರೀತಿಯ ಬಿಕ್ಕಟ್ಟನ್ನು ನಿವಾರಿಸಿಕೊಳ್ಳಲು ಸಿ. ಜಿ. ಕೆ. ರಾಜ್ಯದ ಬೇರೆ ಬೇರೆ ಕಡೆ ನಾಟಕೋತ್ಸವಗಳನ್ನು ಏರ್ಪಡಿಸುವಾಗ ಸ್ಥಳೀಯ ಪೋಷಕರ ಸಹಾಯ ಪಡೆಯುವಲ್ಲಿ ಯಶಸ್ವಿಯಾಗಿದ್ದರು. ಇದರಿಂದ ಆರ್ಥಿಕ ಬೆಂಬಲವೂ ದೊರಕಿ ಸೀಮಿತ ಅವಧಿಗಿಂತ ಹೆಚ್ಚು ದಿನ ನಾಟಕೋತ್ಸವ ನಡೆಸಲು ಸಾಧ್ಯವಾಯಿತು. ನಾಟಕ ಅಕಾಡೆಮಿಯ ಪ್ರಶಸ್ತಿ ಪ್ರದಾನ ಸಮಾರಂಭಗಳಂತೂ ನೆನಪಿನಿಂದಾರದ ಸಂಭ್ರಮದ ಉತ್ಸವಗಳಾಗಿದ್ದವು. ಬಳ್ಳಾರಿ, ಬಿಜಾಪುರ ಮತ್ತು ಹೂವಿನ ಹಡಗಲಿಯಲ್ಲಿ ನಡೆದ ಈ ಪ್ರಶಸ್ತಿ ಸಮಾರಂಭಗಳು ಬರೀ ಪ್ರಶಸ್ತಿ ವಿತರಣಾ ಸಮಾರಂಭಗಳಾಗದೆ, ಇಡೀ ಕನ್ನಡ ರಂಗಭೂಮಿಯ ಭೂತ, ವರ್ತಮಾನ ಮತ್ತು ಭವಿಷ್ಯಗಳನ್ನು ಕುರಿತು ಚಿಂತಿಸುವ ಚಿಂತನಾ ವೇದಿಕೆಗಳಾಗಿಯೂ ಪರಿವರ್ತಿತವಾಗಿದ್ದವು. ಬಿಜಾಪುರದಲ್ಲಿ ನಡೆದ ಪ್ರಶಸ್ತಿ ಸಮಾರಂಭವನ್ನು 'ಶತಮಾನದ ರಂಗ ಸಂಭ್ರಮ' ಎಂದೇ ಕರೆಯಲಾಗಿತ್ತು.

ಸಿ. ಜಿ. ಕೆ. ತಮ್ಮ ಅವಧಿಯಲ್ಲಿ 'ಪದ್ದಣ್ಣ ಪ್ರಶಸ್ತಿ' ಎಂಬ ವಿಶೇಷ ಪ್ರಶಸ್ತಿಯನ್ನು ದಿವಂಗತ ಪದ್ದಣ್ಣ ಅವರ ಹೆಸರಿನಲ್ಲಿ ಸ್ಥಾಪಿಸಿದರು. ಪದ್ದಣ್ಣ ಬೆಂಗಳೂರು ರಂಗಭೂಮಿಯ ಅತ್ಯಂತ ಕ್ರಿಯಾಶೀಲ ವ್ಯಕ್ತಿಯಾಗಿದ್ದವರು. ತೆರೆಯ ಹಿಂದೆ ಸದ್ದಿಲ್ಲದೆ ಕೆಲಸ ಮಾಡಿ ಹಾಗೆಯೇ ಸುದ್ದಿಗೆ ಬಾರದೆ ಹೋಗಿಬಿಡುತ್ತಿದ್ದರು. ಎಂಥ ಕಿರಿಯವರೊಂದಿಗೂ ಅಷ್ಟೇ ಆತ್ಮೀಯತೆಯಿಂದ ಬೆರೆಯುತ್ತಿದ್ದರು. ಅಂಥ ಪದ್ದಣ್ಣ ಸಿ. ಜಿ. ಕೆ. ಯ ಆತಂಕದ ಗಳಿಗೆಗಳಲ್ಲಿ ಪಕ್ಕ ನಿಂತು ಭುಜತಟ್ಟುತ್ತಿದ್ದರು. ಸಿ. ಜಿ. ಕೆ. 'ಪದ್ದಣ್ಣ ಪ್ರಶಸ್ತಿ'ಯನ್ನು ಪ್ರಾರಂಭಿಸಿದ್ದು ರಂಗತಂತ್ರಜ್ಞರನ್ನು ಗಮನದಲ್ಲಿಟ್ಟುಕೊಂಡು. ನಮ್ಮಲ್ಲಿ ಅನೇಕ ಜನ ಬ್ಯಾಕ್‌ಸ್ಟೇಜ್ ಕೆಲಸಗಾರರು, ಬೆಳಕಿನ ವಿನ್ಯಾಸಕಾರರು ಇದ್ದಾರೆ. ಎಷ್ಟೋ ಬಾರಿ ನಿರ್ದೇಶಕರು, ಕಲಾವಿದರು, ನಾಟಕಕಾರರ ಮಧ್ಯೆ ಅವರ ಹೆಸರುಗಳು ಗಣನೆಗೆ ಬರುವುದಿಲ್ಲ. ಆದ್ದರಿಂದ ಅಂಥವರನ್ನು ಮಾತ್ರ ಗುರುತಿಸಿ 'ಪದ್ದಣ್ಣ ಪ್ರಶಸ್ತಿ' ನೀಡಲು ಮುಂದಾದರು. ಸಿ. ಜಿ. ಕೆ. ಯವರ ಆಶಯವೇನೋ ಪ್ರಶಂಸಾರ್ಹವಾದದ್ದೇ . ಆದರೆ ಅನೇಕರಿಗೆ ಇದು ಇಷ್ಟವಾಗಲಿಲ್ಲ. ಯಾಕೆಂದರೆ, ಅವರು ಪ್ರಶಸ್ತಿಯನ್ನು ಕರ್ನಾಟಕ ನಾಟಕ ಅಕಾಡೆಮಿಯ ಹೆಸರಿನಲ್ಲಿ ಪಡೆಯಲು ಇಷ್ಟಪಟ್ಟಿದ್ದರೇ ಹೊರತು ಪದ್ದಣ್ಣನವರ ಹೆಸರಿನಲ್ಲಲ್ಲ. ಕೆಲವರು ಗೊಣಗಿಕೊಂಡೇ ಪ್ರಶಸ್ತಿ ಸ್ವೀಕರಿಸಿದರು. ಸಿ. ಜಿ. ಕೆ. ಅವಧಿ ಮುಗಿದ ಮೇಲೆ ಈ ಪ್ರಶಸ್ತಿಯೂ ನಿಂತು ಹೋಯಿತು.

ಕೆಳವರ್ಗದ ವಚನಕಾರರ ಬಗೆಗೆ ನಾಟಕ ರಚನಾ ಶಿಬಿರವನ್ನು ಮೈಸೂರು ಜಿಲ್ಲೆಯ ಸುತ್ತೂರಿನಲ್ಲಿ ಏರ್ಪಡಿಸಿದ್ದರು. ಖ್ಯಾತ ಲೇಖಕರನ್ನು ಶಿಬಿರಕ್ಕೆ ಆಮಂತ್ರಿಸಿ ಅನೇಕ ಶೂದ್ರ ವಚನಕಾರರ ಹಿನ್ನೆಲೆಯಲ್ಲಿ ನಾಟಕಗಳು ರಚನೆಯಾಗಲು ಕಾರಣಕರ್ತರಾದರು.

ಸಿ. ಜಿ. ಕೆ. ಯವರ ಅವಧಿಯಲ್ಲಿ ಪ್ರಾರಂಭವಾದ ಮತ್ತೊಂದು ಮಹತ್ವದ ಕೆಲಸವೆಂದರೆ, ಕನ್ನಡ ರಂಗಭೂಮಿಗೆ ಮಹತ್ವದ ಕಾಣಿಕೆ ನೀಡಿದ ಸಮಕಾಲೀನ ವ್ಯಕ್ತಿಗಳ ಬಗ್ಗೆ ಕಿರುಹೊತ್ತಿಗೆಗಳನ್ನು ಬರೆದು ಪ್ರಕಟಿಸುವ ಯೋಜನೆ. ಇದೊಂದು ಮಹತ್ವದ ಯೋಜನೆಯಾಗಿ ರೂಪುಗೊಳ್ಳುತ್ತಿದೆ. ರಂಗಭೂಮಿಯ ಕೊಡುಗೆಯನ್ನೇ ಫೋಕಸ್ ಮಾಡಿ ಬರೆಯುವುದರಿಂದ ಆಯಾ ವ್ಯಕ್ತಿಗಳ ಪ್ರಮುಖ ಹಾಗೂ ಮಹತ್ತರ ಕೊಡುಗೆಗಳನ್ನು ದುರ್ಬೀನು ಹಾಕಿ ಪರಿಶೀಲಿಸಿದಂತಾಗುತ್ತದೆ. ಅದೇ ಮಾಲಿಕೆಯಲ್ಲಿ ಈಗ ಸಿ. ಜಿ. ಕೆ. ಯವರ ಬಗೆಗೂ ಕಿರುಕೃತಿ ಹೊರಬರುತ್ತಿದೆ.

'ರಂಗಕಲಾವಿದರು' ಭಾಗ – ೨ ಮತ್ತು ೩ ಸಹ ಇವರ ಅವಧಿಯಲ್ಲೇ ಹೊರಬಂದವು. ಬಹಳ ವರ್ಷಗಳ ಹಿಂದೆ ಚಂದ್ರಶೇಖರ ಕಂಬಾರರು ಅಧ್ಯಕ್ಷರಾಗಿದ್ದಾಗ 'ರಂಗ ಕಲಾವಿದರು' ಎಂಬ ಪುಸ್ತಕವೊಂದನ್ನು ಹೊರತಂದಿದ್ದರು. ಆ ಪುಸ್ತಕ ಹೊರಬಂದ ನಂತರದ ಅವಧಿಯಲ್ಲಿ ಅನೇಕ ಜನ ಕಲಾವಿದರು, ನಿರ್ದೇಶಕರು, ತಂತ್ರಜ್ಞರು, ನಾಟಕಕಾರರು ರಂಗಭೂಮಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಅಂಥವರ ಪರಿಚಯದ ಪುಸ್ತಕಗಳೇ 'ರಂಗಕಲಾವಿದ'ರ ಮುಂದುವರೆದ ಭಾಗಗಳು.

ಕನ್ನಡದ ಕೆಲವು ಆಯ್ದ ನಾಟಕಗಳನ್ನು ಹಿಂದಿ ಭಾಷೆಗೆ ಅನುವಾದ ಮಾಡಿಸಿ ಅವುಗಳನ್ನು ಪ್ರಕಟಿಸುವ ಕೆಲಸವನ್ನು ಮಾಡಿದರು. ನನ್ನ ದೃಷ್ಟಿಯಲ್ಲಿ ಇದೊಂದು ಅತ್ಯಂತ ಪ್ರಯೋಜನಕಾರೀ ಯೋಜನೆ. ಇಂಥ ಯೋಜನೆಗಳು ತಟಕ್ಕನೆ ನಿಂತು ಹೋಗಬಾರದು, ಮುಂದುವರೆಯಬೇಕು. ಅವರು ಹಿಂದಿಗೆ ಅನುವಾದ ಮಾಡಿಸಿದ ನಾಟಕಗಳೆಂದರೆ :

1) ಒಡಲಾಳ – ಸಿ. ಜಿ. ಕೃಷ್ಣಸ್ವಾಮಿ
2) ಸಂಕ್ರಾಂತಿ – ಪಿ. ಲಂಕೇಶ್
3) ಸುಲ್ತಾನ್ ಟೀಪು – ಎಚ್. ಎಸ್. ಶಿವಪ್ರಕಾಶ್
4) ಅರಗಿನ ಬೆಟ್ಟ – ಹೂಲಿಶೇಖರ್

ಸಿ. ಜಿ. ಕೆ. ತಮ್ಮ ನಾಟಕ ಅಕಾಡೆಮಿಯ ಅವಧಿಯ ಬಗ್ಗೆ ಪ್ರತಿಕ್ರಿಯಿಸಿರುವುದು ಹೀಗೆ. "ಬಹುಶಃ ಇನ್ನೊಮ್ಮೆ ನನ್ನನ್ನೇ ಅಕಾಡೆಮಿ ಅಧ್ಯಕ್ಷನನ್ನಾಗಿ ಮಾಡಿದರೂ ಇಂತಹ ಸಾಧನೆಗಳನ್ನು ನಾನೇ ಸಾಧಿಸಲು ಸಾಧ್ಯವಿಲ್ಲ."

# ಅಧ್ಯಾಯ – ೩

## ಉತ್ತರ ರಂಗ

ಬಿಡುವಿಲ್ಲದ ದುಡಿತ, ಬಿಡುವ ಕೊಡದ ಕುಡಿತ, ಅಕಾಡೆಮಿಯ ಅಧ್ಯಕ್ಷನಾಗಿ ಅಲೆದಾಟ ಇವೆಲ್ಲವೂ ಸಿ. ಜಿ. ಕೆ. ಯ ದೇಹವನ್ನು ಜರ್ಝರಗೊಳಿಸಿದ್ದವು. ಅವರ ಐವತ್ತನೇ ಹುಟ್ಟುಹಬ್ಬವನ್ನು ಅವರ ಗೆಳೆಯರು ಹೊಸಪೇಟೆಯ ಬಳಿ ಜೂನ್ 27, 2000 ದಂದು ಆಚರಿಸಿದ ಸಂದರ್ಭದಲ್ಲಿ ಸಿಗರೇಟ್ ಸೇದುವುದನ್ನು ಬಿಟ್ಟುಬಿಟ್ಟಿದ್ದರು. ಸಿ. ಜಿ. ಕೆ. ಸಿಗರೇಟ್ ಸೇದುವುದನ್ನು ಬಿಟ್ಟಿದ್ದೇ ರಂಗಭೂಮಿ ವಲಯಗಳಲ್ಲಿ ಭಾರಿ ಸುದ್ದಿಯಾಗಿತ್ತು. ಸಿ. ಜಿ. ಕೆ. ಯೇ ತಮಾಷೆಗಾಗಿ 'ಸಿಗರೇಟ್ ಸೇದುವುದನ್ನು ಬಿಟ್ಟಿದ್ದೇನೆ. ಇನ್ನು ಹಾರ್ಟ್ ಅಟ್ಯಾಕ್ ಆಗುವುದೊಂದು ಬಾಕಿ' ಎಂದು ಹೇಳುತ್ತಿದ್ದರು. ಆದರೆ ಕುಡಿಯುವುದನ್ನು ಮಾತ್ರ ಬಿಟ್ಟಿರಲಿಲ್ಲ.

ಕುಡಿತಕ್ಕೂ ರಂಗಭೂಮಿಗೂ ಭಾರಿ ನಂಟು. ಅದರಲ್ಲೂ ರಂ ಇದೆಯಲ್ಲಾ ಅದರ ಸಹವಾಸ ಮಾಡದವರು ರಂ-ಗ ಭೂಮಿಯಲ್ಲಿ ಏನಾದರೂ ಇದ್ದರೆ ಪಾಪ, ಅವರನ್ನು ಪಟುಗಳಂತೆ ಕಾಣುತ್ತಾರೆ. ಅಂಥವರು ಇಲ್ಲವೆಂದಲ್ಲ; ಆದರೆ ಅಂಥವರು ಕೈಬೆರಳಿಕೆಯಷ್ಟು ಮಾತ್ರ. ರಂ ಮತ್ತು ರಂಗಭೂಮಿ ಇವೆರಡನ್ನೇ ತೀರ್ಥ ಮತ್ತು ಕ್ಷೇತ್ರಗಳನ್ನಾಗಿ ಮಾಡಿಕೊಂಡ ರಂ-ಗ ಚೇತನಗಳು ನಮ್ಮಲ್ಲಿ ಬೇಕಾದಷ್ಟಿವೆ. ಸಿ. ಜಿ. ಕೆ. ಸಹ ಆ ಕೆಟಗರಿಗೆ ಸೇರಿದವರೆ. ತಮ್ಮ ಹೊಸ ನಾಟಕದ ಪ್ರೊಡಕ್ಷನ್‌ನಲ್ಲಿ ತಲ್ಲೀನರಾದರೆಂದರೆ ಮುಗಿಯಿತು. ಮನೆ, ಮಡದಿ, ಮಕ್ಕಳ ಮುಖ ನೋಡಿ ಎಷ್ಟೋ ದಿನಗಳಾಗಿರುತ್ತಿದ್ದವು. ಇನ್ನು ಸಿ. ಜಿ. ಕೆ. ಕುಡಿತವೋ, ಅದಕ್ಕೆ ಅದರದೇ ಆದ ವೈಶಿಷ್ಟ್ಯ ಇದೆ. ರಮ್ಮೋ, ವಿಸ್ಕಿನೋ ಕುಡಿಯುವ ಮೊದಲು ಬಾಯಿ ಮುಕ್ಕಳಿಸಲು ಬಿಯರ್, ಅನಂತರ ರಮ್ಮು, ವಿಸ್ಕಿ ಕುಡಿದಾದ ಮೇಲೆ ಬಾಯಿ ಮುಕ್ಕಳಿಸಲು ಬಿಯರ್. ಇದಕ್ಕೆ ಸಿ. ಜಿ. ಕೆ. ಇಟ್ಟಿದ್ದ ಹೆಸರು 'ಮೌತ್ ವಾಷಿಂಗ್'. ಸಿ. ಜಿ. ಕೆ. ಗೆ ಸಾಯಂಕಾಲವೇ ಕುಡಿಯಬೇಕೆಂದಿರಲಿಲ್ಲ, ಸಮಯ ಸಿಕ್ಕಾಗ ಕುಡಿಯ ಬೇಕು ಎಂಬುದು ಅವರ ನೀತಿ. ಅವರ ಈ ವಿಲಕ್ಷಣ ನೀತಿಯಿಂದಾಗಿ ಅವರ ಜೊತೆ ಇಂಥದೇ ಒಂದು ಹಿಂಬಾಲಕರ

ವಿಲಕ್ಷಣ ಗುಂಪಿರುತ್ತಿತ್ತು. ಅಂಥವರಿಗೆ ಸಿ. ಜಿ. ಕೆ. ಅಂದರೆ ಗುಂಡು ಹಾಕಿಸಬೇಕು ಅಥವಾ ಅವರ ಜೊತೆ ಕೂತು ಕುಡಿಯಬೇಕು ಎಂಬ ಆಸೆ. ಎಷ್ಟೋ ಬಾರಿ ಅಂಥವರಿಗೆ ಸಿ. ಜಿ. ಕೆ. ಯ ಚಿಂತನೆಯ ಬಗ್ಗೆಯಾಗಲಿ, ಅವರ ರಂಗಭೂಮಿಯ ಸಾಧನೆಯ ಬಗ್ಗೆಯಾಗಲಿ ಗೌರವವೇ ಇರುತ್ತಿರಲಿಲ್ಲ. ಹಿಂದೆ ಕುಹಕದಿಂದ ಮಾತನಾಡುತ್ತಿದ್ದರು. ಸಿ. ಜಿ. ಕೆ. ಗೆ ಅದು ಗೊತ್ತಿತ್ತು. ಆದರೆ ಅವರು ಹಿಂಬಾಲಕರಿರುವುದನ್ನು ಇಷ್ಟಪಡುತ್ತಿದ್ದರು. ತಮ್ಮ ಸ್ವಂತ ಖರ್ಚಿನಲ್ಲಿ ಅವರಿಗೆ ಗುಂಡು ಹಾಕಿಸುತ್ತಿದ್ದರು. ದುಡ್ಡು ಇಲ್ಲದೆ ಇದ್ದರೆ ಸಾಲ ಮಾಡಿಯಾದರೂ ಗುಂಡು ಹಾಕಿಸುತ್ತಿದ್ದರು. ಅಷ್ಟು ವಿಶಾಲವಾದ ಹೃದಯ ಅವರದು.

ಕಡೆಗೆ ಅಂಥ ಹೃದಯಕ್ಕೆ ಕುತ್ತು ಬಂದಿತ್ತು. ಈ ಎಲ್ಲಾ ಒತ್ತಡಗಳನ್ನೂ ಸಿ. ಜಿ. ಕೆ.ಯ ಪುಟ್ಟ ಹೃದಯ ಎಷ್ಟು ದಿನ ಅಂತ ತಡೆಯಬಹುದು? ಆರೋಗ್ಯದಲ್ಲಿ ಏನೋ ಏರುಪೇರಾಗುತ್ತಿದ್ದುದನ್ನು ಗಮನಿಸಿದ ಸಿ. ಜಿ. ಕೆ. ವಿಕ್ಟೋರಿಯ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ ರಂಗಭೂಮಿ ಗೆಳೆಯ ತೋ. ನಂಜುಂಡಸ್ವಾಮಿ ಹತ್ತಿರ ತಮಗಾಗುತ್ತಿದ್ದ ತೊಂದರೆಗಳನ್ನು ಹೇಳಿಕೊಂಡರು. ನಂಜುಂಡಸ್ವಾಮಿ ಅವರನ್ನು ಡಾ. ಸುಭಾಷ್ ಎನ್ನುವವರ ಬಳಿ ಕರೆದುಕೊಂಡು ಹೋದರು. ಅವರು ಜಯದೇವ ಹೃದ್ರೋಗ ಆಸ್ಪತ್ರೆಗೆ ಹೋಗಿ ತೋರಿಸುವಂತೆ ಸೂಚಿಸಿದರು. ಅಲ್ಲಿ ಡಾ. ಮಂಜುನಾಥ್ ತಕ್ಷಣ ಇಂಟೆನ್ಸೀವ್ ಕೇರ್ ಯೂನಿಟ್‌ಗೆ ಸೇರಿಸಿ ತಾವೇ ಖುದ್ದಾಗಿ ಪರೀಕ್ಷೆ ಮಾಡಲು ನಿಂತರು. ಈ ಡಾ. ಮಂಜುನಾಥ್ ಮಾಜಿ ಪ್ರಧಾನಿ ದೇವೇಗೌಡರ ಅಳಿಯ ಮತ್ತು ಪ್ರಸಿದ್ಧ ಹೃದಯ ರೋಗ ತಜ್ಞ. ಅದು ಲಘು ಹೃದಯಾಘಾತವಾಗಿತ್ತು. ಟೆಂಪೊರರಿ ಪೇಸ್ ಮೇಕರ್ ಅನ್ನು ಜೋಡಿಸಿದ್ದರು. ಈ ಸುದ್ದಿ ಕೇಳಿ ರಂಗಭೂಮಿ ಗೆಳೆಯರು ಆಸ್ಪತ್ರೆಗೆ ಧಾವಿಸಿದ್ದರು. ಎರಡು ದಿನಗಳಲ್ಲಿ ಆಂಜಿಯೋಗ್ರಾಮ್ ಮಾಡಿ ಚಿಕಿತ್ಸೆ ನೀಡಿ ಮನೆಗೆ ಕಳಿಸಿಕೊಟ್ಟಿದ್ದರು ಡಾಕ್ಟರ್.

ಮೊದಲಿಗೆ 'ಮನೆಯ ವಿಶ್ರಾಂತಿ' ಎಂದರೆ ಏನು ಎಂಬುದು ಸಿ. ಜಿ. ಕೆ. ಯ ಅನುಭವಕ್ಕೆ ಬಂದಿತು. ಅಲ್ಲಿಯವರೆಗೆ ಬರೀ 'ಅತಿಥಿ ಗೃಹಗಳ' ವಿಶ್ರಾಂತಿ ಪಡೆದಿದ್ದ ಜೀವ ಅವರದು. ಮಡದಿ, ಮಕ್ಕಳ ಆರೈಕೆಯಲ್ಲಿ ಕೆಲ ದಿನಗಳ ವಿಶ್ರಾಂತಿ ಪಡೆದು ಮತ್ತೆ ಅಕಾಡೆಮಿಯ ಕೆಲಸಗಳಿಗೆ ಹಾಜರಾದರು. ಸಿ. ಜಿ. ಕೆ. ಗೆ ಕೆಲಸವಿಲ್ಲದೆ ಸುಮ್ಮನೆ ಕೂರಲು ಬಾರದು. ಹಾಗೆಯೇ ಪ್ರಯಾಣವಿಲ್ಲದೆ ಬಹಳ ದಿನ ಕೂರಲೂ ಆಗದು. ಚಿಕ್ಕಮಗಳೂರಿನ ಗೆಳೆಯರು ಯಾವುದೋ ಒಂದು ಕಾರ್ಯಕ್ರಮಕ್ಕೆ ಕರೆದರು. ಇವರೂ ಒಪ್ಪಿ ಹೋದರು. ಅಲ್ಲಿಗೆ ಹೋದ ಮೇಲೆ ಉಸಿರಾಟದ ತೊಂದರೆ ಇದೆ ಅನಿಸಿತು.

ಕಾರ್ಯಕ್ರಮಕ್ಕೆ ಹಾಜರಾಗದೆ ತಕ್ಷಣ ಬೆಂಗಳೂರಿಗೆ ವಾಪಸ್ ಬಂದರು. ತಕ್ಷಣ ಜಯದೇವ ಆಸ್ಪತ್ರೆಯ ICU ಗೆ ಅಡ್ಮಿಟ್ ಆದರು. ವೈದ್ಯರ ತಂಡ ಆಪರೇಷನ್ ಮಾಡಲು ಮುಂದಾಯಿತು. ಸಿ. ಜಿ. ಕೆ. ಗೆ ಮತ್ತೊಮ್ಮೆ ಹೃದಯಾಘಾತವಾಗಿತ್ತು. ಅದು ತೀವ್ರವಾದುದಾಗಿತ್ತು.

ಈಗ ಸಿ. ಜಿ. ಕೆ. ಮತ್ತೆ ಮಗುವಾಗಿ, ಮನುಷ್ಯನಾಗಿ ಸಾಧಾರಣ ಸ್ಥಿತಿಗೆ ಮರಳಿದ್ದು ಡಾ. ಮಂಜುನಾಥ್ ಮತ್ತು ಪತ್ನಿ ಜಯಲಕ್ಷ್ಮಿ ಅವರ ಕೃಪೆಯಿಂದಾಗಿ. ಚಿಕ್ಕಂದಿನಲ್ಲಿ ನಾನು ಡಾ. ಟೋವಿ ಮತ್ತು ತಾಯಿಯ ಆರೈಕೆಯಿಂದ ಬದುಕುಳಿದರೆ, ಈಗ ಡಾ. ಮಂಜುನಾಥ್ ಮತ್ತು ಪತ್ನಿಯ ದೆಸೆಯಿಂದ ಬದುಕುಳಿದೆ ಎಂದು ಅವರೇ ಹೇಳಿಕೊಂಡಿದ್ದಾರೆ. ಅಂತೂ ಆಪರೇಷನ್ ಯಶಸ್ವಿಯಾಗಿ 1. 1. 2001ರಂದು ಅವರು ಆಸ್ಪತ್ರೆಯಿಂದ ಬಿಡುಗಡೆಯಾಗಿ ಮನೆಗೆ ಬಂದರು. ಅಂದು ಹೊಸ ವರ್ಷದ ದಿನ. ಹಿಂದಿನ ವರ್ಷದ ಅಪಾಯಗಳು ಹಿಂದಿನ ದಿನಕ್ಕೇ ಮುಗಿದಿದ್ದವು. ಬರುವ ವರ್ಷದ ಒಳ್ಳೆಯ ದಿನಗಳು ಅಂದಿನಿಂದಲೇ ಶುರುವಾಗಲಿದ್ದವು. ಜೊತೆಗೆ ಅಸಂಖ್ಯಾತ ಸ್ನೇಹಿತರ, ರಂಗಭೂಮಿಯ ಒಡನಾಡಿಗಳ ಶುಭ ಹಾರೈಕೆಗಳು ಸಿ. ಜಿ. ಕೆ.ಯವರನ್ನು ಪುಲಕಗೊಳಿಸಿದ್ದವು. ಮೂಕವಿಸ್ಮಿತರನ್ನಾಗಿಸಿದ್ದವು. ಸಿ. ಜಿ. ಕೆ.ಗೆ ಬದುಕು ಮತ್ತೆ ಸುಂದರವಾಗಿ ಕಾಣತೊಡಗಿತ್ತು.

ಇನ್ನು ಮುಂದಿನ ಸಿ. ಜಿ. ಕೆ. ಯ ಜೀವನ ಶೈಲಿಯೇ ಬೇರೆ. ತಿಂಡಿ, ಊಟ, ನಿದ್ರೆ, ಪ್ರಯಾಣ, ಕೆಲಸ ಎಲ್ಲದರಲ್ಲೂ ಒಂದು ಕ್ಲುಪ್ತತೆ, ನಿಯತತೆ ಕಂಡು ಬರಲು ಪ್ರಾರಂಭಿಸಿತು. ಅದನ್ನು ನಿಯಂತ್ರಿಸತೊಡಗಿದವರು ಅವರ ಪತ್ನಿ, ಮಕ್ಕಳು. ಅವರ ಶರೀರದ ಮೇಲಾದ ಆರೋಗ್ಯದ ಏರುಪೇರಿನಿಂದ ಅವರ ರಂಗಚಟುವಟಿಕೆಗಳೇನೂ ನಿಲ್ಲಲಿಲ್ಲ. ಹೃದಯಾಘಾತದ ನಂತರ ಬೆಂಗಳೂರು ಸಮುದಾಯಕ್ಕೆ ಕಾ. ತ. ಚಿಕ್ಕಣ್ಣನವರ 'ದಂಡೆ' ನಾಟಕ ನಿರ್ದೇಶಿಸಿದರು. ಸಾಣೇಹಳ್ಳಿಯ ಶಿವಸಂಚಾರಕ್ಕೆ 'ಸೋರುತಿಹುದು ಮನೆಯ ಮಾಳಿಗಿ' ನಿರ್ದೇಶಿಸಿದರು. ರಂಗಭೂಮಿಗೆ ಸಂಬಂಧಿಸಿದ ಬೇರೆ ಬೇರೆ ಸಮಿತಿಗಳಲ್ಲಿ ಅಧ್ಯಕ್ಷರಾಗಿ, ಸದಸ್ಯರಾಗಿ ಕೆಲಸ ನಿರ್ವಹಿಸುತ್ತಾ ಬಂದಿದ್ದಾರೆ. ಹಿಂದೆ ಇದ್ದ ಉದ್ದೇಶ ರಹಿತ ಅಲೆದಾಟಗಳಿಗೆ ಈಗ ಕಡಿವಾಣ ಬಿದ್ದಿದೆ. 'ಊರ ದನ ಕಾದು ದೊಡ್ಡ ಬೋರೇಗೌಡ ಅನ್ನಿಸಿಕೊಂಡಿದ್ದೂ ಸಾಕೆನಿಸಿದೆ. ಅದರಿಂದಾಗಿ ಈಗ ತಾವು ಬೋಧಿಸುತ್ತಿರುವ ಬೆಂಗಳೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಕಡೆ ಹೆಚ್ಚು ಗಮನ ಕೊಡಲು ಆರಂಭಿಸಿದ್ದಾರೆ. ಅಲ್ಲದೆ ವಿಶ್ವವಿದ್ಯಾಲಯದಲ್ಲಿರುವ ಗಾಂಧಿ ಭವನದ ನಿರ್ದೇಶಕರಾಗಿ ಅಲ್ಲಿಯೂ ರಂಗಭೂಮಿಯ ಚಟುವಟಿಕೆಯನ್ನು ಆರಂಭಿಸಿದ್ದಾರೆ.

ಇತ್ತೀಚೆಗೆ ಪಂಪನನ್ನು ಕುರಿತಾದ ನಾಟಕ ರಚನಾ ಶಿಬಿರವೊಂದನ್ನು ಗಾಂಧಿ ಭವನದ ಆಶ್ರಯದಲ್ಲಿ ಏರ್ಪಡಿಸಿ, ಕೆಲವು ಹೊಸ ನಾಟಕಗಳು ಬರಲು ಪ್ರೇರಕ ಶಕ್ತಿಯಾದರು. ಅದು ಸಿ. ಜಿ. ಕೆ. ಇಂಗ್ಲೀಷಿನಲ್ಲಿ ಒಂದು ಮಾತಿದೆ 'He is not a theatre person; He is theatre' ಅಂತ. ಅದು ಸಿ. ಜಿ. ಕೆ. ಗೆ ಅನ್ವಯವಾಗುವಂಥದು. ಅದು ಕೆಟ್ಟದಿರಲಿ, ಒಳ್ಳೆಯದಿರಲಿ ಅವರು ಸದಾ ರಂಗಾಸಕ್ತರು.

ಹೃದಯಾಘಾತವಾದ ಮೇಲೆ ಸಿ. ಜಿ. ಕೆ. ತಮ್ಮ ಆತ್ಮಕಥನ 'ಕತ್ತಾಲೆ ಬೆಳದಿಂಗಳೊಳಗೆ'(೨೦೦೨) ಬರೆದರು. ಬರೆದರು ಅನ್ನುವುದಕ್ಕಿಂತ ಡಿಕ್ಟೇಟ್ ಮಾಡಿದರು ಅನ್ನುವುದು ಸೂಕ್ತ. ಸರಿಸುಮಾರು ಆರು ನೂರಾ ಐವತ್ತು ಪುಟಗಳಷ್ಟು ದೀರ್ಘವಿರುವ ಆತ್ಮಕಥಾನಕ ಇದು. ಸುಮಾರು ನೂರೈವತ್ತರಷ್ಟು ಅಪರೂಪದ ಫೋಟೋಗಳೂ ಇದರಲ್ಲಿವೆ. ನಮಗೆ ಗೊತ್ತಿರುವ ಹಾಗೆ ಕನ್ನಡದ ರಂಗಕರ್ಮಿಯೊಬ್ಬ ಇಷ್ಟೊಂದು ಬೃಹತ್ ಗಾತ್ರದ ಆತ್ಮಕಥನ ಬರೆದದ್ದಿಲ್ಲ. ಸಿ. ಜಿ. ಕೆ. ಅವರ ಮನೋಚಿತ್ತವೇ ಹಾಗೆ. ಅವರಿಗೆ ಪ್ರತಿಯೊಂದು ಅಭಿವ್ಯಕ್ತಿಯೂ ಸಂಭ್ರಮದ ಅಭಿವ್ಯಕ್ತಿಯಾಗಬೇಕು. ವಿವರಗಳ ಅಭಿವ್ಯಕ್ತಿಯಾಗಬೇಕು. ರಂಗಭೂಮಿಯಲ್ಲಿ ವಿವರಗಳು ಎದ್ದು ಕಾಣುವಂತಿರಬೇಕು ಎಂಬುದು ಅವರ ಆಶಯ. ಅದೇ ಆಶಯ ಅವರ ಆತ್ಮಕಥೆಯಲ್ಲಿಯೂ ಎದ್ದು ಕಾಣುತ್ತದೆ. ಈ ಆತ್ಮಕಥನ ಬರೀ ಸಿ. ಜಿ. ಕೆ. ಅವರ ಕಥನವಲ್ಲ. ಎಪ್ಪತ್ತರ ದಶಕದಿಂದೀಚಿನ ಕನ್ನಡ ರಂಗಭೂಮಿಯ ಕಥನವೂ ಹೌದು. ಹಾಗೆಯೇ ಅವರ ಒಡನಾಟಕ್ಕೆ ಬಂದ ಬೇರೆ ರಂಗಕರ್ಮಿಗಳ ಆತ್ಮಕಥನವೂ ಹೌದು. ಈ ದೃಷ್ಟಿಯಿಂದ ಈ ಆತ್ಮಕಥನಕ್ಕೆ ಏಕಕಾಲದಲ್ಲಿ ವೈಯಕ್ತಿಕತೆಯೂ, ಸಾರ್ವತ್ರಿಕತೆಯೂ ಲಭ್ಯವಾಗಿದೆ.

ಈ ಕೃತಿಗೆ ಮೂಡಬಿದಿರೆ ಶಿವರಾಮಕಾರಂತರ ಪ್ರತಿಷ್ಠಾನ ಕೊಡುವ ಶಿವರಾಮಕಾರಂತ ಪ್ರಶಸ್ತಿ ದೊರೆತಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅತ್ಯುತ್ತಮ ಕೃತಿ ಪ್ರಶಸ್ತಿಯೂ ದೊರೆತಿದೆ. ಸಿ. ಜಿ. ಕೆ. ಯ ವೈಶಿಷ್ಟ್ಯ ಎಂದರೆ ತಾನು ಕೈಹಾಕಿದ ಯಾವುದೇ ಕೆಲಸವಾದರೂ ಸರಿಯೆ, ಅದರಲ್ಲಿ ವಿಶಿಷ್ಟವಾದ ಏನನ್ನಾದರೂ ಸಾಧಿಸಬೇಕೆಂಬ ಮಹತ್ವಾಕಾಂಕ್ಷೆಯನ್ನು ಇಟ್ಟುಕೊಂಡಿರುವುದು. ಒಂದು ಕಾಲಕ್ಕೆ ಬರವಣಿಗೆಯ ಬಗ್ಗೆಯೇ ಲೇವಡಿ ಮಾಡುತ್ತಿದ್ದ ಸಿ. ಜಿ. ಕೆ. ಇಂದು ಬರವಣಿಗೆಯನ್ನು ಗಂಭೀರವಾಗಿ ತೆಗೆದುಕೊಂಡಿದ್ದಾರೆ. ಅವರು ಬರೆದ ಆತ್ಮಕಥೆಗೆ ಪ್ರಶಂಸೆ ಮತ್ತು ಪ್ರಶಸ್ತಿಗಳು ದೊರೆತಿವೆ.

# ಅಧ್ಯಾಯ — ೪

## ಉತ್ತರೋತ್ತರ ಸಂಗತಿಗಳು

ಸಿ. ಜಿ. ಕೆ. ಆಧುನಿಕ ಕನ್ನಡ ರಂಗಭೂಮಿಯ ವಿಸ್ಮಯ ಮತ್ತು ಸಾಹಸ. ಯಾವುದೇ ಆದ ಅಕೆಡಮಿಕ್ ತರಬೇತಿ ಇಲ್ಲದೆ ಸ್ವಂತ ಪರಿಶ್ರಮ ಮತ್ತು ಆಸಕ್ತಿಯಿಂದ ಅಪರೂಪದ ನಿರ್ದೇಶಕನಾಗಿ ಬೆಳೆದು ನಿಂತವರು. ಕಳೆದ ಶತಮಾನದ ಎಪ್ಪತ್ತರ ದಶಕದಲ್ಲಿ ಕುಂಟಿಕೊಂಡು ತಪ್ಪು ಹೆಜ್ಜೆ ಇಡುತ್ತಾ ಕಷ್ಟಪಟ್ಟುಕೊಂಡು ರಂಗವೇದಿಕೆ ಏರಿದವರು. ಅಂದು ರಂಗವೇದಿಕೆ ಏರಿದವರು ಮತ್ತೆ ಕೆಳಗಿಳಿದಿದ್ದೇ ಇಲ್ಲ. ಅಲ್ಲೇ ಹೆಮ್ಮರವಾಗಿ ನಿಂತುಬಿಟ್ಟಿದ್ದಾರೆ. ವೃತ್ತಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕಗಿರಿ. ಸಾಧನೆಯೆಲ್ಲವೂ ರಂಗವೇದಿಕೆಗಳಲ್ಲಿ. ಸಮಕಾಲೀನ ಕನ್ನಡ ರಂಗಭೂಮಿಗೆ ಪ್ರಯೋಗಶೀಲತೆ, ವಿಲಕ್ಷಣತೆ ಮತ್ತು ಸಾಹಸಮಯತೆಗಳನ್ನು ತಂದುಕೊಟ್ಟವರು. ಅನೇಕ ಹೊಸ ರಂಗಪ್ರತಿಭೆಗಳನ್ನು ಹುಡುಕಿ, ತೆಗೆದು, ಉಜ್ಜಿ, ತೊಳೆದು ರಂಗದ ಮುಂದೆ ಮತ್ತು ಹಿಂದೆ ಆಡಲು ಬಿಟ್ಟವರು. ಉಢಾಪೆಗೆ ಹೆಸರಾದಂತೆ ಕ್ರಿಯಾಶೀಲತೆಗೂ ಹೆಸರಾದವರು.

ಸಿ. ಜಿ. ಕೆ. ನಾಟಕ ಕ್ಷೇತ್ರಕ್ಕೆ ಪ್ರವೇಶಿಸಿದ್ದು ಆಕಸ್ಮಿಕ. ಕಾಲೇಜು ಶಿಕ್ಷಣಕ್ಕೆಂದು ಮಂಡ್ಯಾದಿಂದ ಬೆಂಗಳೂರಿಗೆ ಬಂದ ಮೇಲೆ ಅವರ ಮುಂದೆ ಅನೇಕ ಸಾಧ್ಯತೆಗಳು ತೆರೆದು ನಿಂತಿದ್ದವು. ಸಾಮಾನ್ಯವಾಗಿ ಚಿಕ್ಕ ಚಿಕ್ಕ ಊರುಗಳಿಂದ ದೊಡ್ಡ ಪಟ್ಟಣಕ್ಕೆ ಬರುವ ಯುವಕರ ಮುಂದೆ ಅನೇಕ ಆಕರ್ಷಣೆಗಳು ತೆರೆದುಕೊಳ್ಳುತ್ತವೆ. ಸರಿಯಾದ ಆಕರ್ಷಣೆಗಳತ್ತ ಒಲಿದರೆ, ಅವು ಜೀವನದುದ್ದಕ್ಕೂ ನೆರವಿಗೆ ಬರುತ್ತವೆ. ಇನ್ನು ಕೆಲವು ಆಕರ್ಷಣೆಗಳು ಜೀವನವನ್ನು ಬಹುಬೇಗ ಮುರುಟಿಹಾಕುತ್ತವೆ. ಸಿ. ಜಿ. ಕೆ.ಗೆ ರಾಜಕೀಯ ಮುಂದಾಳಾಗುವ, ರೌಡಿಯಾಗುವ ಅವಕಾಶಗಳೂ ಇದ್ದವು. ಹಾಗೆಯೇ ಅಕೆಡೆಮಿಷಿಯನ್ ಆಗುವ ಅವಕಾಶಗಳೂ ಇದ್ದವು. ಆಗಿನ ಸಂದರ್ಭದಲ್ಲಿ ವ್ಯಾಪಕವಾಗಿ ಚರ್ಚಿತವಾಗುತ್ತಿದ್ದ ಸಾಮಾಜಿಕ ನ್ಯಾಯ, ವರ್ಗ ಸಮರ, ಜಾತಿ ವಿನಾಶ ಮುಂತಾದ ವಿಷಯಗಳು ಸಿ. ಜಿ. ಕೆ. ಯವರ ಗಮನ ಸೆಳೆದಿದ್ದವು. ತಾವೇ ಹಿಂದುಳಿದ ವರ್ಗದಿಂದ

ಬಂದಿದ್ದು ಕಷ್ಟ, ಸಂಕಟ, ನೋವು, ಅನುಮಾನಗಳನ್ನು ಅನುಭವಿಸಿದ್ದರು. ಬೆಂಗಳೂರಿನಲ್ಲಿ ಆಗಿನ ಕಾಲದಲ್ಲಿ ತಮ್ಮ ಚಿಂತನೆಗಳಿಗೆ ಹೆಸರಾದ ಅನೇಕ ವ್ಯಕ್ತಿಗಳ ಪರಿಚಯವಾಯಿತು. ಇವೆಲ್ಲದರ ಮೊತ್ತ ಸಿ. ಜಿ. ಕೆ. ರಂಗಭೂಮಿಯ ಕಡೆ ಒಲಿಯಲು ಅವಕಾಶ ಕಲ್ಪಿಸಿಕೊಟ್ಟಿತು. ಮುಂದೆ ಸಿಕ್ಕ ಒಂದೊಂದು ಅವಕಾಶಗಳನ್ನೂ ಅವರು ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಾ ಹೋದರು. ಬರ್ಟೋಲ್ಟ್ ಬ್ರೆಕ್ಟ್‌ನ 'ದಿ ರೆಸಿಸ್ಟಬಲ್ ರೈಸ್ ಆಫ್ ಆರ್ಥ್ರೋ ಊಯಿ' ನಾಟಕದಲ್ಲಿ ಊಯಿ ಹೇಳುವ ಒಂದು ಸಂಭಾಷಣೆ ಹೀಗಿದೆ. ''ಈ ಬಡ ಬೋರೇ ಗೌಡನ ಮಗ ಮೊದಲಿಗೆ ಈ ಪಟ್ಟಣಕ್ಕೆ ಕಾಲಿಟ್ಟಾಗ ಹಿಂದೆ ಮುಂದೆ ಯಾರೂ ಇರಲಿಲ್ಲ. ಈಗ ಮುಂದಷ್ಟು ದಂಡು, ಹಿಂದಷ್ಟು ದಂಡು ಸದಾ ಇರುತ್ತೆ.'' ಈ ಗೋವಿಂದ ನಾಯ್ಕರ ಮಗನೂ ಕೂಡ ಹಾಗೇ ಬೆಳೆದಿದ್ದಾರೆ. ಸಿ. ಜಿ. ಕೆ. ಕಲಾಕ್ಷೇತ್ರಕ್ಕೆ ಬಂದು ಸಂಸ ಬಯಲು ರಂಗಮಂದಿರದಲ್ಲಿ ಪೀಠಸ್ಥರಾದರೆಂದರೆ, ಅವರ ಸುತ್ತಾ ಒಂದು ರಂಗಕರ್ಮಿಗಳ ದಂಡೇ ನೆರೆಯುತ್ತದೆ. ಸಿ. ಜಿ. ಕೆ. ರಂಗಭೂಮಿಯ ಡಾನ್‌ನಂತೆ ಸಮಸ್ಯೆಗಳ ಪರಿಹಾರಕ್ಕೆ ತೊಡಗುತ್ತಾರೆ. ಹೊಸ ಯೋಜನೆಗಳಿಗೆ ತಲೆಕೆಡಿಸಿಕೊಳ್ಳುತ್ತಾರೆ. ಇನ್ಯಾರೋ ಹೊಸ ಪ್ರತಿಭೆಯನ್ನು ಗುರುತಿಸಿ ಅವರಿಗೆ ಕೆಲಸ ಹಚ್ಚುತ್ತಾರೆ. ಸಿ. ಜಿ. ಕೆ. ಯ ಬಗ್ಗೆ ನನಗಿರುವ ವಿಸ್ಮಯ ಮತ್ತು ವಿನಮ್ರ ಗೌರವವೆಂದರೆ, ನಾಟಕ ಚಟುವಟಿಕೆಗೆ ಅವರು ಹಣ ಕೂಡಿ ಹಾಕುವ ರೀತಿಗೆ. ಡಾ. ಜೀವರಾಜ ಆಳ್ವರಂಥ ರಾಜಕಾರಣಿ ಇರಬಹುದು, ಡಿ. ಕೆ. ಚೌಟರಂಥ ಉದ್ಯಮಿ ಇರಬಹುದು, ಪಂಡಿತಾರಾಧ್ಯ ಸ್ವಾಮೀಜಿಯವರಂಥ ಮಠಾಧಿಪತಿಗಳಿರಬಹುದು, ನಾಟಕದ ವಿಷಯಕ್ಕೆ ಬಂದಾಗ ಸಿ. ಜಿ. ಕೆ. ಗೆ ಅವರೆಲ್ಲಾ ಒಂದೇ. ಅವರ ಬೆಂಬಲ, ಪ್ರೋತ್ಸಾಹದಿಂದ ನಾಟಕ ಮತ್ತು ರಂಗಭೂಮಿಯ ಚಟುವಟಿಕೆ ನಡೆಯಬೇಕು. ಅದು ಅವರ ಆಶಯ.

ಸಿ. ಜಿ. ಕೆ. 'ಕಲೆಗಾಗಿ ಕಲೆ'ಎಂಬ ಭ್ರಮೆ ಇಟ್ಟುಕೊಂಡು ರಂಗಭೂಮಿಯ ಕೆಲಸ ಮಾಡಿದವರಲ್ಲ. ಅವರಿಗೆ ರಂಗಭೂಮಿ ತಮ್ಮ ಅಭಿವ್ಯಕ್ತಿಗಾಗಿ ಇರುವ ಸಶಕ್ತ ಮಾಧ್ಯಮ ಎನಿಸಿದೆ. ಆದ್ದರಿಂದಲೇ ಅವರು ತಮ್ಮ ನಿರ್ದೇಶನಕ್ಕೆ ಆರಿಸಿಕೊಳ್ಳುವ ಒಂದೊಂದು ನಾಟಕದ ವಸ್ತುವೂ ನಿರ್ಲಕ್ಷ್ಯಕ್ಕೆ, ತುಳಿತಕ್ಕೆ ಒಳಗಾದವರ ತುಡಿತಗಳನ್ನು ಬಿಚ್ಚಿಡುವಂಥದಾಗಿರುತ್ತದೆ. ಹಾಗೆಂದು ಸಿ. ಜಿ. ಕೆ. ತಮ್ಮ ನಾಟಕಗಳ ಮೂಲಕ ಯಾವುದೇ ಸಿದ್ಧಾಂತಗಳ ಪ್ರತಿಪಾದನೆಗೂ ನಿಖರವಾಗಿ ತೊಡಗುವುದಿಲ್ಲ. ಸಿದ್ಧಾಂತಗಳೆಂದರೆ ಮಹಾ ಬೋರು ಎನ್ನುವ ಮನಸ್ಥಿತಿ ಅವರದ್ದು. ಅದನ್ನು ಜಿ. ರಾಜಶೇಖರ್ ಹೀಗೆ ಗುರುತಿಸುತ್ತಾರೆ. ''ಸಿ. ಜಿ. ಕೆ. ಸಮಾಜವಾದದ ಸಿದ್ಧಾಂತ

ಎಷ್ಟು ಓದಿಕೊಂಡಿದ್ದಾರೋ ನನಗೆ ಗೊತ್ತಿಲ್ಲ. ನಾವು ಯಾವತ್ತೂ ಆ ಬಗ್ಗೆ ಮಾತಾಡಿದವರೇ ಅಲ್ಲ. ವಾದ, ಸಿದ್ಧಾಂತ ಎಲ್ಲಾ ಅವರಿಗೆ ಮಹಾ ಬೋರು ಎಂದು ನನ್ನ ಗುಮಾನಿ; ಅವರದು ಒಂದು ನಮೂನೆಯ ಹುಂಬ ಸಮಾಜವಾದ. 'ಎಲ್ಲರಿಗೂ ನ್ಯಾಯ ಸಿಗಬೇಕು', 'ಬಡವರ ಕಷ್ಟ ನೀಗಬೇಕು' - ಈ ಬಗೆಯದ್ದು.'' ಈ ಹುಂಬತನವೇ ಸಿ. ಜಿ. ಕೆ. ಅವರನ್ನು ನಮ್ಮ ಮಧ್ಯದ ವಿಶಿಷ್ಟ ರಂಗ ನಿರ್ದೇಶಕನನ್ನಾಗಿಸಿರುವುದು.

ಸಿ. ಜಿ. ಕೆ. ನಾಟಕವೊಂದನ್ನು ನಿರ್ದೇಶಿಸಲು ಪ್ರಾರಂಭಿಸಿದರೆ ಅವರ ಸಹಾಯಕರಿಗೆ ಓಡಾಟವೋ ಓಡಾಟ. ಆರಿಸಿಕೊಂಡ ವಸ್ತು ನಾಟಕದ ರೂಪದಲ್ಲೇ ಇರಬೇಕೆಂದೇನಿಲ್ಲ. ಅದು ಕಥೆ, ಕಾದಂಬರಿ ಅಥವಾ ಕಾವ್ಯ ಇರಬಹುದು. ಆದರೆ ಕಥಾ ಹಂದರದಲ್ಲಿ ಸತ್ವ ಇರಬೇಕು. ಆ ಕಥೆಗೆ ಸಂಬಂಧಪಟ್ಟ ಎಲ್ಲಾ ವಿವರಗಳನ್ನು ಸಂಗ್ರಹಿಸುವುದರಿಂದ ಅವರ ಕೆಲಸ ಪ್ರಾರಂಭವಾಗುತ್ತದೆ. ಕಥೆ, ಕಾದಂಬರಿಯಾದರೆ ಅದನ್ನು ನಾಟಕ ರೂಪಕ್ಕೆ ತರುವ, ನಾಟಕವಾದರೆ ತಿದ್ದುವ, ಕೆಲಸ ಪ್ರಾರಂಭವಾಗುತ್ತದೆ. ರಂಗಸಜ್ಜಿಕೆ, ಬೆಳಕಿನ ವಿನ್ಯಾಸ, ಉಡುಪಿನ ವಿನ್ಯಾಸ, ನಟರಿಗೆ ತಪಾಸಣೆ ಹೀಗೆ ಒಂದು ಬಿರುಸಿನ ಚಟುವಟಿಕೆ ಪ್ರಾರಂಭವಾಗುತ್ತದೆ. ಸಿ. ಜಿ. ಕೆ. ಹೊಸ ನಾಟಕ ತೆಗೆದುಕೊಂಡಿದ್ದಾರೆ ಎಂಬ ಸುದ್ದಿಯೇ ಎಸ್. ಎಂ. ಎಸ್. ರೀತಿ ಅವರ ಸಹಾಯಕರಿಗೆಲ್ಲಾ ರವಾನೆಯಾಗುತ್ತದೆ.

ಸಿ. ಜಿ. ಕೆ. ತಾನು ಆರಿಸಿಕೊಂಡ ನಾಟಕದ ವಸ್ತುವನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಿದರೂ ಅತ್ಯಂತ ಸ್ಕೀಮ್ಯಾಟಿಕ್ ಆದ ನಿರ್ದೇಶಕನಂತೆ ಟಿಪ್ಪಣಿಗಳನ್ನು ಮಾಡುತ್ತಾ ಕೂರುವುದಿಲ್ಲ. ನಟರುಗಳು ತಾಲೀಮು ಸ್ಥಳದಲ್ಲಿ ನಿಂತಾಗ ತಕ್ಷಣಕ್ಕೆ ಅವರಿಗೆ ಕೊಡಬೇಕಾದ ಸೂಚನೆಗಳಿಗಷ್ಟೇ ತಯಾರಾಗಿ ಬಂದಿರುತ್ತಾರೆ. ಅವರು ಪ್ರತೀ ದೃಶ್ಯಗಳನ್ನು ಬ್ಲಾಕ್ ಮಾಡುವಾಗಲೂ ಇಂಪ್ರೋವೈಸೇಷನ್‌ಗೆ ಮಹತ್ವ ಕೊಡುತ್ತಾರೆ. ರಿಹರ್ಸಲ್ ಸಂದರ್ಭದಲ್ಲಿಯೇ ಅವಕಾಶ ಮಾಡಿಕೊಳ್ಳುತ್ತಾ ಹೋಗುತ್ತಾರೆ. ಬಹುಶಃ ಸಿ. ಜಿ. ಕೆ. ಯವರ ರೀತಿಯ ನಿರ್ದೇಶನವನ್ನು ಗಮನಿಸಿಯೇ ಚಂದ್ರಶೇಖರ ಕಂಬಾರರು ಕೆಳಗಿನ ಮಾತುಗಳನ್ನು ಹೇಳಿದ್ದಿರಬೇಕು.

''ಯಾವುದೇ ಅಕಾಡೆಮಿಕ್ಕಾದ ರಂಗತರಬೇತಿಯಿಲ್ಲದೆ ಕೇವಲ ಹುಟ್ಟು ಗುಣವೊಂದರಿಂದಲೇ ನಿರ್ದೇಶಕರಾದ ಅಪರೂಪದ ನಿರ್ದೇಶಕ ಸಿ. ಜಿ. ಕೆ. . ರಂಗದ ಸ್ಪೇಸನ್ನು ದೃಶ್ಯಾತ್ಮಕವಾಗಿ, ಸೃಜನಾತ್ಮಕವಾಗಿ ತುಂಬಬಲ್ಲ ವಿಶಿಷ್ಟ ಪ್ರತಿಭೆಯಿದ್ದವರು. ಕಳೆದೆರಡು ದಶಕಗಳಿಂದ ಕರ್ನಾಟಕ ಸಾಂಸ್ಕೃತಿಕ ವಲಯದಲ್ಲಿ ಕ್ರಿಯಾಶೀಲವಾಗಿ ತೊಡಗಿಸಿಕೊಂಡಿದ್ದ ಸಿ. ಜಿ. ಕೆ. ಹಲವಾರು ಹಿರಿಯ ಕಿರಿಯರ ನಾಟಕಗಳನ್ನು ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ನಿರ್ದೇಶಿಸುತ್ತಾ ಬಂದಿದ್ದಾರೆ. ನಾಟಕಗಳ ಅಂತರಾಳವನ್ನು

ಸೂಕ್ಷ್ಮವಾಗಿ ಗ್ರಹಿಸಿ ವಾಸ್ತವವಾದ ಮತ್ತು ಅಭಿವ್ಯಕ್ತಿ ವಾದಗಳಿಂದ ಮಿಳಿತವಾದ ಒಂದು ಸ್ವತಂತ್ರ ರಂಗಶೈಲಿಯನ್ನೇ ರೂಢಿಸಿಕೊಂಡು ಕನ್ನಡ ರಂಗಭೂಮಿಗೆ ಕೊಡುಗೆ ನೀಡಿದವರು."

ಸಿ. ಜಿ. ಕೆ. ಗೆ ನಾಟಕದಲ್ಲಿ ಗುಂಪು ದೃಶ್ಯಗಳು, ಉತ್ಸವದ ದೃಶ್ಯಗಳು, ಎಂದರೆ ತುಂಬಾ ಆಸಕ್ತಿ. ಹಾಗೆಂದು ಬೇರೆ ದೃಶ್ಯಗಳಿಗೆ ಅವರು ಅಷ್ಟಾಗಿ ಗಮನ ಕೊಡುತ್ತಿರಲಿಲ್ಲವೆಂದಲ್ಲ. ಗುಂಪು ದೃಶ್ಯ ಹಾಗೂ ಉತ್ಸವದ ದೃಶ್ಯಗಳಲ್ಲಿ ಯಾವಾಗಲೂ ಹೊಸತನ ತರುವ ಪ್ರಯತ್ನ ಮಾಡುತ್ತಾರೆ. ಹಾಗೆಯೇ ಮನುಷ್ಯನ ಸ್ಥಾಯೀ ಭಾವಗಳನ್ನು ಪಾತ್ರಗಳ ಮೂಲಕ ಹೊರತರುವ ಸಂದರ್ಭಗಳೂ ಅಷ್ಟೇ ಪರಿಣಾಮಕಾರಿಯಾಗಿರುತ್ತವೆ. ಹವ್ಯಾಸಿ ರಂಗಭೂಮಿಯಲ್ಲಿ ಸಿ. ಜಿ. ಕೆ. ಯ ಪ್ರೊಡಕ್ಷನ್‌ಗಳು ಎಂದರೆ ಕೊಂಚ ದುಬಾರಿಯ ಪ್ರೊಡಕ್ಷನ್‌ಗಳು ಎಂಬ ಟೀಕೆಯೂ ಇದೆ. ಅತ್ಯಂತ ಬಡತನದ ದೃಶ್ಯವೂ ರಂಗಭೂಮಿಯ ದೃಷ್ಟಿಯಿಂದ ಅತ್ಯಂತ ಶ್ರೀಮಂತವಾಗಿರಬೇಕು ಎಂಬುದು ಸಿ. ಜಿ. ಕೆ. ಯ ಅಭಿಮತ. ರಂಗಸಜ್ಜಿಕೆ, ಬೆಳಕಿನ ವಿನ್ಯಾಸ, ಪ್ರಸಾದನ, ಅಭಿನಯ ಇವೆಲ್ಲವುಗಳ ಸಾವಯವ ಸಮಗ್ರೀಕರಣದಲ್ಲೇ ನಾಟಕದ ಸಾರ್ಥಕತೆ ಇದೆಯೆಂಬುದು ಅವರ ತಿಳುವಳಿಕೆ. ಆದ್ದರಿಂದಲೇ ಈ ಯಾವ ವಿಭಾಗದಲ್ಲೂ ಅವರು ಗುಣ ದೋಷ ಉಂಟಾಗದಂತೆ ನೋಡಿಕೊಳ್ಳುತ್ತಾರೆ. ತಮ್ಮ ಹೆಚ್ಚಿನ ನಾಟಕಗಳಲ್ಲಿ ಸಿ. ಜಿ. ಕೆ. ದೇಸೀ ಪ್ರದರ್ಶಕ ಕಲೆಗಳನ್ನು ಬಳಸಿಕೊಂಡಿದ್ದಾರೆ. ಭಾರತೀಯ ಅದರಲ್ಲೂ ಗ್ರಾಮೀಣ ಮತ್ತು ಜಾನಪದ ಪ್ರದರ್ಶಕ ಕಲೆಗಳ ಪ್ರಭಾವ ಅವರ ಮೇಲೆ ಹೆಚ್ಚಾದಂತೆ ಕಾಣುತ್ತದೆ. ಹಾಗಾಗಿ ಹೊರದೇಶಗಳ ನಾಟಕಗಳನ್ನು ನಿರ್ದೇಶಿಸುವಾಗಲೂ ಅವುಗಳನ್ನು ಭಾರತೀಯ ಸಂವೇದನೆಯ ನೆಲೆಯಲ್ಲೇ ಗ್ರಹಿಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ಇದೇ ರೀತಿಯ ರಂಗತಂತ್ರಗಳನ್ನು ಬಳಸಿಕೊಂಡು ಗ್ರಾಮೀಣ ರಂಗಭೂಮಿಯನನು ಅತ್ಯಂತ ಕ್ರೀಯಾಶೀಲವಾಗಿ ಇಟ್ಟಿರುವ ಹಿರಿಯ ರಂಗಕರ್ಮಿ ಹಬೀಬ್ ತನ್ವೀರ್ ಅವರು ಸಿ. ಜಿ. ಕೆ. ಗೆ ತುಂಬಾ ಇಷ್ಟವಾದ ವ್ಯಕ್ತಿ.

ಸಿ. ಜಿ. ಕೆ. ನಾಟಕದ ಕೊನೆಯ ದೃಶ್ಯವನ್ನು ಬ್ಲಾಕ್ ಮಾಡುವುದು ನಾಟಕದ ಪ್ರದರ್ಶನದ ಹಿಂದಿನ ದಿನ ಅಥವಾ ಅದೇ ದಿನ ಬೆಳಿಗ್ಗೆ. ಅಲ್ಲಿಯವರೆಗೆ ನಟರಿಗಾಗಲಿ, ಸ್ವತಃ ಸಿ. ಜಿ. ಕೆ. ಗಾಗಲೀ ನಾಟಕದ ಒಟ್ಟಾರೆ ಪರಿಣಾಮ ಯಾವ ರೀತಿಯ ಫಲಿತಾಂಶ ಕೊಡುತ್ತದೆಂಬ ಕಲ್ಪನೆಯೇ ಇರುವುದಿಲ್ಲ. ಅದೇನಿದ್ದರೂ ನಟರು ಮತ್ತು ನಿರ್ದೇಶಕ ಪ್ರೇಕ್ಷಕರ ಮೂಲಕವೇ ನಾಟಕದ ಬಗೆಗಿನ ಪ್ರತಿಕ್ರಿಯೆಯನ್ನು ಅರಿಯಬೇಕು. ಸಿ. ಜಿ. ಕೆ. ಯವರಂತೂ ಯಾವತ್ತೂ ತಮ್ಮ ನಿರ್ದೇಶನದ ಪ್ರಥಮ ಪ್ರದರ್ಶನವನ್ನು

ರಂಗಮಂದಿರದಲ್ಲಿ ಕುಳಿತು ನೋಡುವುದಿಲ್ಲ. ಒಮ್ಮೆ ನಾಟಕ ರಂಗವೇದಿಕೆಗೆ ಬಂತೆಂದರೆ, ಮುಂದೆ ಅದು ನಟರ ಮತ್ತು ಪ್ರೇಕ್ಷಕರ ಅನುಸಂಧಾನದಲ್ಲಿ ನಡೆಯುವ ಪ್ರದರ್ಶನ ಎಂಬ ನಿರ್ಲಿಪ್ತ ಭಾವ ಅವರದು.

ಒಂದಲ್ಲಾ ಒಂದು ಘಟ್ಟದಲ್ಲಿ ಸಿ. ಜಿ. ಕೆ. ಯ ವಲಯಕ್ಕೆ ಬಂದವರು ಅವರ ಬಗ್ಗೆ ಹೇಗೆ ಪ್ರತಿಕ್ರಿಯಿಸಿದ್ದಾರೆ ಎಂಬುದನ್ನು ಗಮನಿಸಿದರೆ, ಸಿ. ಜಿ. ಕೆ. ಯ ವ್ಯಕ್ತಿತ್ವದ ಬೇರೆ ಬೇರೆ ಮುಖಗಳ ಪರಿಚಯವಾದೀತು.

"ಅವನು ಯಾವ ರಂಗ ತರಬೇತಿಯನ್ನು ನಾಟಕ ಸಂಸ್ಥೆಗಳಲ್ಲಿ ಪಡೆದವನಲ್ಲ. ಅಕಾಡೆಮಿಕ್ ಆದ ಶಿಸ್ತೆಂದರೆ ನಕ್ಕು ಬಿಡುತ್ತಾನೆ. ಅವನ ಹತ್ತಿರ ಸಿದ್ಧವಾದ ಸಿದ್ಧಾಂತಗಳಿಲ್ಲ. ನಾಟಕ ಕೈಗೆತ್ತಿಕೊಂಡಾಗ ಏನು ಮಾಡಬೇಕೋ ಅವನಿಗೆ ಗೊತ್ತಿರುವುದಿಲ್ಲ. ಪೂರ್ವಗ್ರಹಿಕೆಯಿಂದ ಅಕಾಡೆಮಿಕ್ ಶಿಸ್ತಿನಿಂದ ಹೊರಡುವವರು ತಪ್ಪು ಮಾಡುವುದಿಲ್ಲ. ಆದರೆ ಅವರು ಜೀವ ತುಡಿಯುವ ಏನನ್ನೂ ಕೊಡಲಾರರು. ಕೃಷ್ಣಸ್ವಾಮಿ ಪೂರ್ತಿ, ತನ್ನ animal instinct ನಿಂದಲೇ ಕೆಲಸ ಮಾಡುವುದರಿಂದ ತನ್ನ ಒಡ್ಡೊಡ್ಡಾದ ರೀತಿಯಲ್ಲೇ ಜೀವಂತ ಪವಾಡ ತರುತ್ತಾನೆ. ಒಡಲಾಳದ ಕೊನೆದೃಶ್ಯ, ಮಹಾಚೈತ್ರದ ಬಸವಣ್ಣನ ಅವಸಾನದ ದೃಶ್ಯ, ಸಂಸ ನಾಟಕದ ಕೊನೆಯ ದೃಶ್ಯ, ಇವೆಲ್ಲಾ ಮಾದರಿಗಳೇ ಇಲ್ಲದ ರಂಗಕ್ಷಣಗಳು-ಅಂದರೆ ಪವಾಡಗಳು...........

ಬಹುಶಃ ಕೃಷ್ಣಸ್ವಾಮಿ ಆ ಚೀಣಾದ ಕಲಾವಿದನ ಪುನರಾವತಾರವಿರಬಹುದು. ತಾನು ಕಾಣದ, ಜಗತ್ತು ಕಾಣದ ಅನುಭವದ ಅರಸುವಿಕೆಯಲ್ಲಿ ಅವನಿದ್ದಾನೆ......ಅವನ ಜೀವಂತ ಪ್ರತಿಭೆಯ ವಿಕಾಸದ ಅಂತಿಮ ರೂಪವೇನು? ಯಾರಿಗೂ ಗೊತ್ತಿಲ್ಲ. ಅಥವಾ ಪ್ರತಿಭೆಗೆ ಅಂತಿಮ ರೂಪವೇ ಇಲ್ಲ.

– ಎಚ್. ಎಸ್. ಶಿವಪ್ರಕಾಶ್.

ಸಿ. ಜಿ. ಕೆ. ನೂರು ತಾರೆಗಳ ಜನಕ. ತನ್ನೊಟ್ಟಿಗೆ ಕೆಲಸ ಮಾಡುವ ಪ್ರತಿಯೊಬ್ಬನ ಕೋಟಲೆಗಳ ಬಗ್ಗೆ ಕಾಳಜಿ ತಾಳುವ ಈತ ಕುಳಿತಲ್ಲೇ ಗುಂಪು ಕಟ್ಟಬಲ್ಲ. ಕಟ್ಟಿದ ಗುಂಪಿನ ಕೇಂದ್ರ ಬಿಂದುವಾಗಬಲ್ಲ. ಸುತ್ತಲಿರುವ ಅನೇಕರಿಗೆ ಅಸಮಾಧಾನಗಳನ್ನು ಹುಟ್ಟಿಸಿದರೂ ತನ್ನ ಬಗ್ಗೆ ಅವರಿಟ್ಟಿರುವ ಪ್ರೀತಿ, ಅಭಿಮಾನಗಳನ್ನು ಕಡಿಮೆ ಮಾಡಿಕೊಳ್ಳದಂತೆ ನೋಡಿಕೊಳ್ಳಬಲ್ಲ. ಕೆಲಸ ಮಾಡಲು ಆರಂಭಿಸಿದೊಡನೆಯೆ ಸುಮ್ಮನಿರುವವರನ್ನು ನಾಚಿಸಿ ಕೆಲಸ ಮಾಡಿಸಬಲ್ಲ. ಯಾರು ಏನನ್ನೇ ಕೇಳಿದರೂ ಉತ್ಸಾಹದಿಂದ ತನ್ನಲ್ಲಿ ಇಲ್ಲದ್ದನ್ನು ಕೊಡುವ-ಕೊಡಿಸುವ ಆಶ್ವಾಸನೆ ನೀಡಿ ಭರವಸೆ ಹುಟ್ಟಿಸಬಲ್ಲ.

– ಜೆ. ಲೋಕೇಶ್.

ಇಲ್ಲ, ಅನ್ನೋ ಪದ ಸಿ. ಜಿ. ಕೆ. ಡಿಕ್ಷನರಿಯಲ್ಲಿ ಇಲ್ಲ. ''ಆಕಾಶಕ್ಕೆ ಏಣಿ ಇರಿಸಬೇಕಲ್ಲ'' ಅಂದ್ರೆ, 'ಎಲ್ಲಿ? ಎಷ್ಟೊತ್ತಿಗೆ?' ಅಂತ ಕೇಳೇ ಬಿಡ್ತಾರೆ.

– ಕಾಸರಗೋಡು ಚಿನ್ನಾ.

ಕನ್ನಡ ರಂಗಭೂಮಿಯಲ್ಲಿ ನಿತ್ಯ ಮದುವಣಗಿತ್ತಿಯಂತೆ ಓಡಾಡುವ ಸಿ. ಜಿ. ಕೆ. ಯ ಆತ್ಮೀಯತೆಯೇ ಒಂದು ವಿಶಿಷ್ಟ ಅನುಭವ. ಇಂತಹ ಸಿ. ಜಿ. ಕೆ. ನಮ್ಮವರು ಎನ್ನುವದೇ ಹೆಮ್ಮೆ.

– ಮೊಗಳ್ಳಿ ಗಣೇಶ್.

ಪ್ರಯೋಗದಿಂದ ಪ್ರಯೋಗಕ್ಕೆ ಹೊಸ ಸಾಧ್ಯತೆಗಳನ್ನು ಕಂಡುಕೊಳ್ಳುತ್ತಿರುವ ಸಿ. ಜಿ. ಕೆ. ತನ್ನ ಪ್ರಯೋಗದಲ್ಲಿನ ವಸ್ತು ನಿಷ್ಠ ನಿಲುವು, ಸೋಗಲಾಡಿತನದಿಂದ ದೂರವಾದ ಸಾಮಾಜಿಕ ಕಳಕಳಿ, ಪ್ರಯೋಗದಲ್ಲಿನ ಶ್ರದ್ಧಾಪೂರ್ವಕ ಅಚ್ಚುಕಟ್ಟುತನ, ಹಾಗೂ ಅಸಾಧಾರಣ ಪ್ರತಿಭೆ ಇವನ ನಾಟಕಗಳನ್ನು ವಿಶಿಷ್ಟ ಗೊಳಿಸಿವೆ.

ಸಮಕಾಲೀನ ಸವಾಲಾಗಿರುವ ಸಿ. ಜಿ. ಕೆ. ಒಬ್ಬ ದೈತ್ಯ. ಪಟ್ಟು ಹಿಡಿದು ಸಾಧಿಸುವ ಹಠಗಾರ. ಇನ್ನು ಇವನ ಯಶಸ್ಸು ವಿಚಿತ್ರವಾದದ್ದು. ಆತ್ಮೀಯತೆ ಹಾಗೂ ಅಸೂಯೆಯನ್ನು ಆಹ್ವಾನಿಸುವಂಥದು.

–ಆರ್. ನಾಗೇಶ್.

ರಂಗಭೂಮಿಗೂ ಸಿ. ಜಿ. ಕೆ. ಗೂ ಅಂಟಿರುವ ನಂಟು ದೇಹಾತ್ಮ ಸಂಬಂಧದ ಬಗೆಯದು.

– ಎಸ್. ಜಿ. ಸಿದ್ಧರಾಮಯ್ಯ.

ಸಿ. ಜಿ. ಕೆ. ಒಬ್ಬ ಜೀವಂತ ತಲ್ಲಣ ಜೀವಿ. ಕಲೆ ಸುತ್ತಲ ಜಗತ್ತನ್ನು ಅದೆಷ್ಟು, ಹೇಗೆ ಅರ್ಥಪೂರ್ಣವೂ ನಿಜವನ್ನಾಗಿಯೂ ಮಾಡಬಹುದೆಂಬ ತೊಡಗುವಿಕೆಯಲ್ಲಿ ಅವರಿದ್ದಾರೆ.

– ಕಿ. ರಂ. ನಾಗರಾಜ.

ಈ ಅಭಿಪ್ರಾಯಗಳಲ್ಲಿ ವ್ಯಕ್ತವಾಗುವ ಅಂಶವೆಂದರೆ, ಸಿ. ಜಿ. ಕೆ. ಮಹತ್ವಾಕಾಂಕ್ಷಿ, ಛಲಗಾರ ಮತ್ತು ಸದಾ ಹೊಸದಕ್ಕೆ ತುಡಿಯುವ ವ್ಯಕ್ತಿ ಎಂಬುದು. ಬೇರೆಯವರು

ತುಳಿದ ಜಾಡಿಗಿಂತ ಭಿನ್ನವಾಗಿ ನಡೆಯಬೇಕೆನ್ನುವ ವ್ಯಕ್ತಿ ಅವರು. ಅವರು ತಮ್ಮ ರಂಗಜೀವನದ ದೀರ್ಘಯಾತ್ರೆಯಲ್ಲಿ ನಟರಾಗಬೇಕೆಂದು ಆಸೆ ಪಡಲಿಲ್ಲ. ನನಗೆ ಗೊತ್ತಿರುವ ಹಾಗೆ ಪ್ರಸನ್ನ ನಿರ್ದೇಶಿಸಿದ್ದ ಪೂರ್ಣಚಂದ್ರ ತೇಜಸ್ವಿಯವರ 'ಕುಬಿ ಮತ್ತು ಇಯಾಲ' ನಾಟಕದಲ್ಲಿ ಕೂಲಿಯವನ ಪಾತ್ರ ಮಾಡಿದ್ದನ್ನು ಬಿಟ್ಟರೆ ಅವರು ಬೇರೆ ಪಾತ್ರ ಮಾಡಿದ್ದಿಲ್ಲ. ಬೇರೆಯವರನ್ನು ನಟರನ್ನಾಗಿ ತಿದ್ದುವ ಕೆಲಸವನ್ನು ಮಾತ್ರ ಅವರು ಅತ್ಯಂತ ಯಶಸ್ವಿಯಾಗಿ ಮಾಡಿದರು. ಮಹತ್ವಾಕಾಂಕ್ಷೆ ಸಿ. ಜಿ. ಕೆ. ಯ ಇನ್ನೊಂದು ಗುಣ. ತನ್ನ ರಂಗಕೃತಿಗಳೆಲ್ಲಾ ಯಾವುದೇ ಅಂಗವಿಕಲತೆಗಳಿಲ್ಲದೆ ರಂಗದ ಮೇಲೆ ಮೂಡಿಬರಬೇಕೆಂದು ಅವರು ಆಸೆಪಡುತ್ತಿದ್ದರು.

ತಾನು ನಿರ್ದೇಶಿಸುವ ನಾಟಕಗಳಿಗೆ ಸಿದ್ಧ ರಂಗಭೂಮಿ ತಕ್ಕುದಲ್ಲವೆಂದಾದರೆ ಅದಕ್ಕೆ ಸೂಕ್ತವಾದ ರಂಗಭೂಮಿ ಹುಡುಕಿ ಹೊರಡುತ್ತಿದ್ದರು. ಅದು ಸಾಧ್ಯವಾಗದೇ ಹೋದರೆ ಇರುವ ರಂಗಭೂಮಿಯನ್ನೆ ತನ್ನ ಅವಶ್ಯಕತೆಗೆ ತಕ್ಕಂತೆ ಬದಲಾಯಿಸಿಕೊಳ್ಳುತ್ತಿದ್ದರು. ಅವರ ಈ ರೀತಿಯ ಚಿಂತನೆಯೇ ರವೀಂದ್ರ ಕಲಾಕ್ಷೇತ್ರದ ಆವರಣವನ್ನೇ ರಂಗವೇದಿಕೆಯನ್ನಾಗಿ ಪರಿವರ್ತಿಸಿದ್ದು. ಅವರು 'ದೇಶಪ್ರೇಮಿ ವೆಂಕಟಪ್ಪನಾಯಕ'ನನ್ನು ಸುರಪುರದ ಕೋಟೆಕೊತ್ತಲಗಳ ಹಿನ್ನೆಲೆಯಲ್ಲಿ ಪ್ರದರ್ಶಿಸಬೇಕೆಂದಿದ್ದರು. 'ದಂಡೆ' ನಾಟಕವನ್ನು ಕೆ. ಆರ್. ನಗರದ ಬಳಿ ಕಾವೇರಿ ನದಿಯ ದಂಡೆಯಲ್ಲಿ ಪ್ರದರ್ಶಿಸಬೇಕೆಂದಿದ್ದರು. ಇವೆಲ್ಲಕ್ಕಿಂತ ಹೆಚ್ಚಾಗಿ ತಾನ್‌ಸೇನನನ್ನು ಕುರಿತ ನಾಟಕವೊಂದನ್ನು ಗ್ವಾಲಿಯರ್‌ನ ಕೋಟೆಯ ಮುಂಭಾಗದಲ್ಲಿ ಪ್ರದರ್ಶಿಸಬೇಕೆಂಬ ಆಶಯ ಅವರದಾಗಿತ್ತು. ಆದರೆ ಎಷ್ಟೋ ಬಾರಿ ನಾವಂದುಕೊಂಡಂತೆ ಯಾವುದೂ ನಡೆಯುವುದಿಲ್ಲ. ರಂಗಭೂಮಿಯ ವಿಷಯದಲ್ಲಂತೂ ಇದು ಇನ್ನೂ ಹೆಚ್ಚಿನ ಸತ್ಯ.

ಸಿ. ಜಿ. ಕೆ. ಮಹಾನ್ ಕನಸುಗಾರ. ಆಕಾಶಕ್ಕೆ ಏಣಿ ಹಾಕುವ ಕೆಲಸವನ್ನು ಪದೇ ಪದೇ ಮಾಡುತ್ತಲೇ ಇರುತ್ತಾರೆ. ಆಕಾಶವನ್ನು ಮುಟ್ಟಲಾಗದಿದ್ದರೂ, ಒಂದಷ್ಟು ಎತ್ತರ ಏರಬಹುದೆಂಬ ಆಸೆ ಅವರದು. ಇಂಥ ಪ್ರಯತ್ನಗಳಿಂದಲೇ ಅವರು ಸಾಕಷ್ಟು ಎತ್ತರವನ್ನು ಏರಿದ್ದಾರೆ.

## ೪. ೧. ನಾಟಕ ಮತ್ತು ರಂಗಭೂಮಿಯ ಬಗೆಗಿನ ಸಿ. ಜಿ. ಕೆ. ಅನಿಸಿಕೆಗಳು.

''ಸಂಸ್ಕೃತಿಯನ್ನಾಗಲಿ, ಅದರ ಒಂದಂಗವೇ ಆದ ರಂಗಭೂಮಿಯನ್ನಾಗಲಿ ಯಾರೂ ಧನಕನಕಾದಿಗಳ ಸಹಾಯದಿಂದ ಪೋಷಿಸುವುದಕ್ಕಾಗುವುದಿಲ್ಲ. ನಾಟಕ ಉಳಿಯುವುದು, ಬೆಳೆಯವುದು ರಂಗಭೂಮಿಯಲ್ಲಿ ತೊಡಗಿಕೊಂಡಿರುವವರಿಂದ ಮಾತ್ರ . ನಾಟಕಗಳಿಗೆ ಯಾಕೆ ಜನ ಬರುತ್ತಾ ಇಲ್ಲ, ಅಂದ್ರೆ ಕಾರಣ ಸ್ಪಷ್ಟ. ಜನ ಹೌದು, ಹೌದು ಅನ್ನೋ ಹಾಗೆ ನಾವು ನಾಟಕ ಮಾಡ್ತಾ ಇಲ್ಲ. ದೂರದರ್ಶನವಾಗಲಿ, ಅಥವಾ ಯಾವುದೇ ವಿದ್ಯುನ್ಮಾನ ಮಾಧ್ಯಮವಾಗಲಿ ರಂಗಭೂಮಿಯನ್ನು ಸರಿಗಟ್ಟಕ್ಕಾಗಲ್ಲ. ರಂಗಭೂಮಿ ಇಂದು ಮೂಲೆ ಗುಂಪಾಗಿದ್ರೆ ಮುಕ್ಕಾಲು ಪಾಲು ಇದಕ್ಕೆ ಕಾರಣ ಇವತ್ತು ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಜನ. ಅರೆ ಮನಸ್ಸಿನಿಂದ ಕೆಲಸ ಮಾಡಿ ಪೂರ್ಣ ಯಾಶಸ್ಸನ್ನು ನಿರೀಕ್ಷಿಸುವಂಥಾ ಪರಿಪಾಠ ಒಳ್ಳೆಯದಲ್ಲ. ಈ ಮಾತಿಗೆ ನಾನೂ ಕೂಡ ಹೊರತಲ್ಲ.

ಸಿ. ನಾಗಣ್ಣ ಅವರ ಜೊತೆ ಸಂದರ್ಶನ-1994

''ನಾನು ಮೊದಲು ಕಲಿತ ಪಾಠವೆಂದರೆ, ರಂಗಭೂಮಿಯ ನಿರ್ದೇಶಕನಾಗಿ ನಟ ನಟಿಯರನ್ನು ಮಾನಸಿಕವಾಗಿ ಹೆಚ್ಚು ಅರಿಯಬೇಕು. ಹಾಗಯೇ ಅವರಲ್ಲಿರುವ ದೈಹಿಕ, ಮಾನಸಿಕ ತಳಮಳಗಳನ್ನು ತಿಳಿಯುಬೇಕು. ಅಂದರೆ ನಟ ನಟಿಯರ ಜೊತೆ ನಿರ್ದೇಶಕನೊಬ್ಬ ಇಟ್ಟುಕೊಳ್ಳಬೇಕಾದ ಅವಶ್ಯವಾದ ಸ್ನೇಹ, ಹಾಗೂ rapport. ಆದರೆ, ನಿರ್ದೇಶಕನಿಗೆ ಎಷ್ಟು ಜನ ನಟನಟಿಯರ ಜೊತೆ ಇಂತಹ ಸಂಬಂಧವನ್ನು ರೂಢಿಸಿಕೊಳ್ಳಬಹುದೆಂಬ ಪ್ರಶ್ನೆ ಸದಾಕಾಡುತ್ತದೆ. ಈ ಮಾತುಗಳನ್ನು ನಾನು ಮೇಲೆ ಹೇಳಿದಷ್ಟು ಸುಲಭವಾಗಿ ಜಾರಿಗೆ ತರಲು ಸಾಧ್ಯವಿಲ್ಲ.''

''ನಿರ್ದೇಶಕ ತನಗೆ ತಾನು ಕಾಣಬೇಕಾಗಿರುವ ಸತ್ಯವೆಂದರೆ, 'ನ್ಯಾಯ ರಂಗದ ಮೇಲೆ ಹುಟ್ಟಿಕೊಳ್ಳುತ್ತದೆ' ಎಂಬ ಮಾತನ್ನು . ಈ ಮಾತಿನ ಗಾಢ ಅರ್ಥ ನನಗೆ ತಿಳಿಯುತ್ತಾ ಹೋಯಿತು. ನಿಷ್ಕುರದ ಬದುಕನ್ನು ಸಾಗಿಸುವವರು ನಿಷ್ಕಾರಣವಾಗಿ ಬಲಿಯಾಗುತ್ತಾರೆ. ಆ ಬಲಿಯಾಗುವಿಕೆಗೆ ಕಾರಣಗಳು ನೂರಾರು. ಇವುಗಳೆಲ್ಲದಕ್ಕೂ ಧಿಕ್ಕಾರದ ದನಿಗೂಡಿಸಿದರೆ ರಂಗದ ಮೇಲೆ ಇವೆಲ್ಲದಕ್ಕೂ ನ್ಯಾಯ ಹುಟ್ಟುತ್ತದೆಯೋ ಎನ್ನುವುದೊಂದು ಪ್ರಶ್ನೆ . ಧಿಕ್ಕಾರ ಎನ್ನುವುದು ಕೇವಲ ಮಾತಿನ ಶಸ್ತ್ರವಾಗಬಾರದು. ಧಿಕ್ಕಾರದ ಮನಸ್ಸುಗಳನ್ನು ಸೃಷ್ಟಿಸುವ ಶಕ್ತಿಯನ್ನು ರಂಗದ ಮೇಲೆ ಹೊಮ್ಮಿಸಬೇಕು. ಧಿಕ್ಕಾರ ಹೇಳುವುದು ಪ್ರೇಕ್ಷಕರಿಗೆ ಬಿಟ್ಟ ವಿಷಯ. ಹೀಗೆ ಇಂತಹ ಧಿಕ್ಕಾರಗಳನ್ನು

ಹೇಳುವ ಪ್ರೇಕ್ಷಕರನ್ನು ಸೃಷ್ಟಿಸುವುದು ಸಾಧ್ಯ. ಹಾಗೆಯೇ ಅಂತಹ ನ್ಯಾಯವೊಂದನ್ನು ರಂಗದ ಮೇಲೆ ಬೆಳೆಸುವ ಒಂದು cultural synthesis ಅನ್ನು ಕಂಡುಕೊಳ್ಳಬೇಕು. ಇಂತಹ synthesis ಗಳು ಸಾಧ್ಯವಾಗದೇ ಹೋದರೆ ಬರೀ ಧಿಕ್ಕಾರ ಕೂಗಿ ಚಪ್ಪಾಳೆ ತಟ್ಟಿಸಿಕೊಳ್ಳಬೇಕಾಗುತ್ತದೆ.''

-ಆತ್ಮಕಥೆ 'ಕತ್ತಾಲೆ ಬೆಳದಿಂಗಳೊಳಗ' ಕೃತಿಯಿಂದ.

''ನನಗೆ ಬೇಸಿಕ್ ಆಗಿ ಸಬಾಲ್ಟ್ರನ್ ಕಲ್ಚರ್ ಬಗ್ಗೆ ಬಹಳ ಗೌರವ ಇತ್ತು. ನಮ್ಮ ಪೂರ್ವಿಕರು, ಜನಪದರು ಬಹಳ ದೊಡ್ಡ ಮನೋವೈಜ್ಞಾನಿಕರು. ಇದನ್ನು ನಾವು ಬಹಳ ಸಲ ಮರೀತೀವಿ. ನಮ್ಮ ತಾತ, ಮುತ್ತಾಂತಂದಿರು ಇಂಥ ದಿನವೇ ಮಳೆ ಬರುತ್ತೆ ಅಂತ ಹೇಳ್ತಾ ಇದ್ದರು. ಅವರು ಹಲ್ಲಿನ ರೋಗದ ಬಗ್ಗೆ, ಮಂಗನ ರೋಗದ ಬಗ್ಗೆ, ದನದ ರೋಗದ ಬಗ್ಗೆ ಎಲ್ಲಾ ಮಾತಾಡುತ್ತಿದ್ದರು. ನಾವು ಅವರನ್ನೆಲ್ಲಾ ಅವೈಜ್ಞಾನಿಕರು ಅಂತ ಟೋಟಲ್ ಆಗಿ ರಿಜೆಕ್ಟ್ ಮಾಡ್ತಾ ಇದ್ವಿ. ಅದು ತಪ್ಪು ಅಂತ ಈಗ ಗೊತ್ತಾಗಿದೆ. ನಮ್ಮ ಹಿಂದಿನ ಪ್ರಗತಿಶೀಲ ಚಳುವಳಿ, ನವೋದಯ ಚಳುವಳಿ, ಸಾಮಾಜಿಕ ಚಳುವಳಿಗಳು ಬೇರೆ ಕಡೆಯಿಂದ ಪಡೆದುಕೊಂಡ ಸಿದ್ಧಾಂತಗಳಿಂದ ಇಗ್ನೈಟ್ ಆದವುಗಳು. ಈ ಬಾರೋಡಾದ ಪೊಲಿಟಿಕಲ್ ಫಿಲಾಸಫಿ ಇದೆಯಲ್ಲಾ, ಇದು, ಬಹಳ ಸಡನ್ನಾಗಿ ವಿದ್ಯಾವಂತರು ಅನ್ನಿಸಿಕೊಂಡವರಿಗೆ ಹತ್ತಿರ ಆಗಿ ಬಿಡುತ್ತೆ. ಆಗ ಲೆನಿನ್, ಸ್ಟಾಲಿನ್, ಗಾರ್ಕಿ ಮುಂತಾದವರು ನಮ್ಮ ಮೇಲೆ ಪ್ರಭಾವ ಬೀರಿದರು ನಿಜ. ಆದರೆ ಅವರನ್ನು ಪೂರ್ಣ ಅನುಕರಿಸೋಕೆ ಹೊರಟಿದ್ದು ನನ್ನ ತಲೆಮಾರಿನ ಲೇಖಕರು ಮಾಡಿರುವ ದೊಡ್ಡ ತಪ್ಪು.''

''ನಾನು ಜಾನಪದ ಕಲೆಯ ಗ್ರ್ಯಾಂಡ್ ನ್ಯಾರೇಷನ್ ಬಳಸಿಕೊಳ್ತೀನಿ. ನೋಡಿ, ನನಗನ್ನಿಸುತ್ತೆ. ಒಬ್ಬ ಬುಡಬುಡಿಕೆಯವನು ಬಂದರೆ, ಅವನ ಬುಡಬುಡಿಕೇನೇ ಎಷ್ಟೊಂದು ಕಲರ್ ಫುಲ್ ಅಂತ. ಅದರ ಜೊತೆ ಕೋಲೆ ಬಸವ ಬಂದರೆ, ಅದು ಇನ್ನೂ ಕಲರ್‌ಫುಲ್. ಇದನ್ನೆಲ್ಲಾ ನಾನು ರಂಗಭೂಮಿಯಲ್ಲಿ ತರಬೇಕು. I belive in this kind of grand narration. ಬಹುರೂಪಿ ಚೌಡಯ್ಯ, ನಗೆಯ ಮಾರಿತಂದೆ. ಈ ಹೆಸರುಗಳೇ ನನ್ನನ್ನು ಎಷ್ಟು ಇನ್‌ಫ್ಲುಯನ್ಸ್ ಮಾಡ್ತಾವೆ ಅಂದ್ರೆ, ಅವರಿಬ್ಬರೂ ಅದ್ಭುತವಾದ performors ಆಗಿ ನನ್ನ ಮುಂದೆ ನಿಲ್ಲುತ್ತಾರೆ................ ಈ ರೀತಿಯ ಕ್ಯಾಮಾಫ್ಲಾಜ್ ಆಫ್ ಸೋಮೆನಿ ಕಾಂಬಿನೇಷನ್ಸ್ ನನ್ನ ತಲೆಯಲ್ಲಿ ಕೆಲಸ ಮಾಡ್ತಾ ಇರುತ್ತೆ.''

"ನನ್ನ ಪರ್ಸನಾಲಿಟಿ ಬಗ್ಗೆ ಹೇಳೋದಾದ್ರೆ ಮೊದಲಿನಿಂದಲೂ ನನಗೆ ಒಂದು ಕಾಂಪ್ಲೆಕ್ಸ್ ಇದೆ. Any where you keep me, I am a dominant person. ನಾನು ಮೊದಲಿಂದ ರೂಢಿಸಿಕೊಂಡು ಬಂದಿರೋ ವ್ಯಕ್ತಿಗತವಾದ ಶೈಲಿ ಇದು. ನನ್ನನ್ನು ನೀವು ಪಂಚಪೀಠದ ಪೀಠಾಧ್ಯಕ್ಷರು ಮಧ್ಯೆ ಕೂರಿಸಿ. ಆ ಪಂಚ ಪೀಠದ ಅಧ್ಯಕ್ಷರು ಕಿರೀಟ ತೆಗೆದಿಟ್ಟು ಮಾತಾಡೋ ಹಾಗೆ ಮಾಡೋ ಶಕ್ತಿ ಇದೆ."

ಲಿಂಗದೇವರು ಹಳೆಮನೆ ಅವರ ಜೊತೆಗಿನ ಸಂದರ್ಶನ -2003
ದಟ್ ಈಸ್ ಸಿ. ಜಿ. ಕೆ.

## ಸಿ. ಜಿ. ಕೆ ರಂಗಕೃತಿಯ ಬಗೆಗಿನ ಅಭಿಪ್ರಾಯಗಳು

### 'ಒಡಲಾಳ' ಪ್ರದರ್ಶನದ ಬಗ್ಗೆ

#### ಅನಿಸ್ತು

ಕೈಲಾಸಂ ರಂಗಮಂದಿರದ ಒಳಗೆ ಬೆಂಗಳೂರಿನ ಡಿಸೆಂಬರ್ ಚಳಿ.

'ಒಡಲಾಳ' ಎದ್ದು ಬರುತ್ತಿತ್ತು.

ಸಾಕವ್ವ ಸೈಡ್‌ವಿಂಗ್ಸ್ ಸೇರುತ್ತಿದ್ದಂತೆ ಮತ್ತೆ ಕೆಲವು ಸಂದರ್ಭಗಳಲ್ಲಿ ಚಪ್ಪಾಳೆ ಚಿಮ್ಮುತ್ತಿತ್ತು.

ತೆರೆ ಸರಿದು ಮತ್ತೆ ತೆರೆಯುವ ಮಧ್ಯೆ ಬೆಳಕು ಹೋದ ಕಾಲದಲ್ಲಿ ಮಾತ್ರ ಚಳಿ ಜ್ಞಾಪಕಕ್ಕೆ ಬರುತ್ತಿತ್ತು.

ರಂಗಭೂಮಿಯ ಮೇಲೆ ಬಾಳ ಬೆಳಕಿಗಾಗಿ ಬೆನ್ನು ಬಗ್ಗಿಸಿ, ಕೈ ಮಡಿಸಿ, ಕಾಲು ಕುಗ್ಗಿಸಿ ಎಂದಿನಿಂದಲೋ ಅಂದಿನಿಂದ ನಿತ್ಯ ಸತ್ತು, ನಿತ್ಯ ಬದುಕುತ್ತಿರುವವರ ಜೀವನ ನಾಟಕ ನಡೆಯುತ್ತಿತ್ತು.

ಊರ ಗಿರಣಿ ಬಿಟ್ಟು ಕಳ್ಳಮಾಲಿಗಾಗಿ ನಡುರಾತ್ರಿಯಲ್ಲಿ ದಾಳಿ. ಊರ ಮುದುಕಿ ಸಾಕವ್ವ (ಉಮಾಶ್ರೀ) ನ ``ಅರಮನೆ"ಯ ಮೇಲೆ ದಾಳಿ. ಸದಾ ಉರಿಯುವ ಬಾಳಿನ ಹೊಟ್ಟೆಗೆ ಹಸಿವಿನ ತುಪ್ಪ ಬೆಂಕಿ ಭುಗಿಲೆದ್ದರೂ ದಹನ ಸಹಿಸಿಕೊಂಡು ತಣ್ಣಗೆ ಮಲಗಿದ್ದ ಹೊಲಗೇರಿಯ ಪಾಳುಬಿದ್ದ ಗುಡಿಸಲು ಮೇಲೆ ದಾಳಿ.

ಭಾವಪರವಶವಾಗುತ್ತಿದೆ.

ಪೋಲೀಸ್ ಇನ್ಸ್‌ಪೆಕ್ಟರ್ ನೆಲುವಿನಲ್ಲಿದ್ದ ಮಡಕೆಗೆ ಲಾಠಿಯಿಂದ ಹೊಡೆದು ಚೂರು ಚೂರು ಮಾಡಿದಾಗ. ಈಗಾಗಲೇ ಚೂರಾಗಿದ್ದ ಸಾಕವ್ವ ಮೊಟ್ಟೆಯಿಟ್ಟಿದ್ದ ಮಡಕೆ ಮಣ್ಣಾದುದನ್ನು ಕಂಡು ಮತ್ತೆ ಚೂರಾದಾಗ ಎದ್ದುಹೋಗಿ ಆ ಇನ್ಸ್‌ಪೆಕ್ಟರ್ ಅವರನ್ನು ಒದೆಯೋಣವೆಂದು ಅನಿಸ್ತು.

ನಾನು ಚೇತರಿಸಿಕೊಳ್ಳುವ ಹೊತ್ತಿಗೆ ಹಿಂದಿನಿಂದ ಒಬ್ಬರು ಅಂದುಬಿಟ್ಟರು. ``ಹೊಡೀರ್‍ರ್ರೋ ಅವನ್ಗೆ" (ಪೋಲೀಸ್ ಇನ್ಸ್‌ಪೆಕ್ಟರ್)

ಹೃದಯ ಮೀಟಿದಂತಾಗಿತ್ತು.

ಮುಗಿಯಿತು. ಸ್ಕೂಟರ್ ಮೇಲೆ ಮನೆಗೆ ಹೋದೆ. ಸದ್ಯ ರಾತ್ರಿಯ ೧೦ ಗಂಟೆಯಾದ್ದರಿಂದ ಟ್ರಾಫಿಕ್ ಕಡಿಮೆ ಇತ್ತು.

ಊಟ ಮಾಡಿದೆ. ಮಲಗಿದೆ. ಮನಸಿಗೇನೋ ಕಸಿವಿಸಿ. ದೇವನೂರು ಮಹದೇವ, ಸಿ. ಜಿ. ಕೃಷ್ಣಸ್ವಾಮಿ, ರಂಗಸಂಪದ, ನಾನು ಎಲ್ಲರೂ ಈ ಚಿಕ್ಕ ತಲೆಯಲ್ಲಿ ಒಟ್ಟಿಗೆ ಓಡಾಡಿದರು. ಇವರ ಓಡಾಟ ಮತ್ತೆ ಪೋಲೀಸರ ದಾಳಿಯನ್ನು ಸ್ಮರಣೆಗೆ ತರುತ್ತಿತ್ತು.

ಚುಚ್ಚುತ್ತಿತ್ತು.

ಸೊಳ್ಳೆಯಲ್ಲ, ಕಾರಣ ಸೊಳ್ಳೆ ಪರದೆ ಇತ್ತು.

ತಿಗಣೆಯಲ್ಲ, ಕಾರಣ ಕೆಲವು ದಿನಗಳ ಹಿಂದೆ ಓಡಿಸಿದ್ದೆ.

ಮತ್ತೇನು?

ಅಂತೂ ಚುಚ್ಚುತ್ತಿತ್ತು.

ಹೃದಯವೋ? ಆತ್ಮವೋ? ನನಗೆ ವ್ಯತ್ಯಾಸ ತಿಳಿಯದು. ಅಂತೂ ಚುಚ್ಚುತ್ತಿತ್ತು.

ಕೆಲ ದಶಕಗಳಿಂದ ಈ ಚುಚ್ಚಾಟ ಅದಕ್ಕೆ ಆ ರಾತ್ರಿ ಕಾಯಕಲ್ಪ.

ಅಂದುಕೊಂಡೆ. ``ನಾನೇನು ಮಾಡಿರೋದು?"

ಇನ್ನುಳಿದಿರುವ ಕಾಲದಲ್ಲಿ ಬಾಳುವ ಪರಿಸರದಲ್ಲಾದರೂ ``ಒಡಲಾಳ" ಪ್ರೇರೇಪಿಸಿದಂತೆ ನಡೆದರೆ ಸಾಕು.

ಯಾರಿಗೆ ಸಾಕು? ನನಗೆ, ಕಾರಣ, ಅಷ್ಟೇ ನನ್ನ ಸಾಮರ್ಥ್ಯ.

ಅದೂ ಯಾವ ಗ್ಯಾರಂಟಿ?

*ಜಯಶೀಲ*

## Eve's trilogy by Rangasampada

It's a theatre crew from Bangalore. Crew is the right word. They operate with the recognizable approach of a team which knows what is about, what it wants to project and how it should be done. They have a concept of totality which is rare in many theatre groups which are willing to take on any play in any language and in any form. 'Rangasampada' was created in 1971 and since then has produced 40 plays which have been directed by B. V. Karanth, Prasanna and other directorial stars. In an effort however to stimulate the writing of original plays in Kannada which other groups would do well to emulate. 'Rangasampada' began organise a play competition every two years in Bangalore, the "Rangasampada Pursakar Yojana", which yielded a harvest of new writing in Kannada.

Except for participating with one play last year in a festival of plays. Rangasampada did not present itself in Delhi before with a composite programme that could have enabled people here to assess its potential. Recently, however, this group brought what it calls its "Eve's Triology, Women's fears, failures, humilations and above all, their enoromous sacrifices, are the stuff these plays are made of. " Three plays by different writers but chosen by director C. G. Krishnaswamy to show how the character of women emerges strongly in all three contents. One is the Girish Karnad's ``Yayati"the other in B. V. Vykunta Raju's "Sannivesha" and the third is Devanur Mahadeva's ``Odalala". There was obviously a pattern in the choice because each play epitomises either and era, a milieu of a class of society.

The first one ``Yayati" has the background of a historical myth and is visually a period piece. Operating on the many levels of political powers, clan rivalries and that obsessive pre-occupatin with youth which defines the character of Yayati in one's mind as sharply as a knife engraving it on wood, the play is dominated by dramatic performances by the women characters, Girija Lokesh as Sharmishta, Nagini Bharana as Devayani, Vyjanthi Kashi as Chitralekha and Umashree

as Swarnalathe. The stage had neither the bareness of Sanskrit theatre, nor the clutter of realistic sets. The design was delicate, suggestive, significant. It is worth noting that these were the characteristics that defined it for other two plays as well, done as it was jointly by Shashidhar Adapa and C. G. Krishnaswamy for "Yayati" by C. G. K. for "Sannivesha" and by Shashi Adappa for "Odalala".

The second play, "Sannivesha" has a modern plot set in a contemporary framework but it deals basically with the inner emotions rather than the outer situations of a journalist who married a prostitute to prove his progressivism but finds it impossible to match the boldness of his act with the values he is born with. The action centres round his dilemma but the awakening awareness, the probing search into and then facing reality and the ultimate courage of discarding falsity is all the woman's, Vyjanthi Kashi who gives a performance of sustained intensity as Baby, the prostitute. Rangaswamy as Jayant some times overlayed the dramatic.

It was "Odalala" the third play, which was the most overpowering one. Unlike "Yayati" which dealt with the royal milieu and "Sannivesha" which rests against a middle class background, ``Odalala" has a Harijan family, the starkness of poverty and their exploitation for the lines of its frame. The rest in all filled by one character, one woman. She is like a world unto herself... Sakavva, brilliantly portrayed as a tottering old piece of flesh but with the spirit of fire Umashree, who is real life only 25 years old. It was a performance which should get her award of the year theatre. The language is rumbustious and she utters it with a sharpness of tongue that has the audience gasping. The emotions are raw, the relationships sharp and brittle, the social condition cruel and unrelenting. Everything is held together by this woman with a bent back but a strong heart who is yet as vulnerable as could be Rangasampada's appearance in Delhi would be justified with this one performance alone.

*Uma Vasudev.*

*(On successful theatre festival of C. G. K.'s in Delhi)*

## ಒಡಲಾಳ

## ರಂಗದ ಮೇಲೆ 'ಒಡಲಾಳದ' ಅಂತರಂಗ

ಕನ್ನಡ ಕಾದಂಬರಿ ಕಥೆಗಳೆಷ್ಟೋ ರೂಪಾಂತರಗೊಂಡು ರಂಗದಲ್ಲಿ ರಾರಾಜಿಸಿ ಕೆಲವು ಮಾಯವಾಗಿದ್ದರೆ, ಮತ್ತೆ ಕೆಲವು ಗಟ್ಟಿಯಾಗಿ ಉಳಿದಿವೆ. ಇದಕ್ಕೆ ಹಲವು ಕಾರಣಗಳಿರಬಹುದು. ಸಮಕಾಲೀನತೆ, ರಾಜಕೀಯ, ಕೆಳವರ್ಗದವರ ಚಿತ್ರಣ ಹೀಗೆ ಒಂದೊಂದು ಬಾರಿ ಒಂದೊಂದು ವಸ್ತು ಕ್ಲಿಕ್ ಆಗುವುದುಂಟು.

ಎರಡು ತಿಂಗಳ ಹಿಂದೆ ಸಿ. ಜಿ. ಕೃಷ್ಣಸ್ವಾಮಿ 'ರಂಗಸಂಪದಕ್ಕೆ'ದೇವನೂರು ಮಹಾದೇವ ಅವರ 'ಒಡಲಾಳ' ರೂಪಾಂತರಿಸಿ, ನಿರ್ದೇಶಿಸುತ್ತಿದ್ದಾರೆ ಎಂದು ತಿಳಿದಾಗಲೂ ರೂಪಾಂತರಗಳ ಸಾಲಿಗೆ ಮತ್ತೊಂದು ನಾಟಕವೆನಿಸಿತು. ಆದರೆ ಕಥೆಯನ್ನು ಕನ್ನಡ ಸಾಹಿತ್ಯದಲ್ಲಿ ಗಂಭೀರವಾಗಿ ಪರಿಗಣಿಸಿದ್ದರಿಂದ, ಪಾತ್ರಗಳು ನಮ್ಮ ಗ್ರಾಮೀಣ ಪರಿಸರದ ಪರಸ್ಪರ ಪಾತ್ರಗಳಾಗಿದ್ದರಿಂದ ನಾಟಕ ಹೇಗೆ ಬರುತ್ತದೆ ಎಂಬ ಕುತೂಹಲವಂತೂ ಇದ್ದೇ ಇದ್ದಿತು. ಅಲ್ಲದೆ ರಂಗಭೂಮಿಯ ಉತ್ತಮ ನಟಿ ಉಮಾಶ್ರೀ ಸಾಕವ್ವನಿಗೆ ಜೀವ ತುಂಬಲಿದ್ದಾಳೆ ಎಂದು ತಿಳಿದಿದ್ದರಿಂದ ಮುದುಕಿಯಂತೆ ಹೇಗೆ ನಟಿಸುತ್ತಾಳೆ ಎಂಬ ಮತ್ತೊಂದು ಕುತೂಹಲವು ಜೊತೆಗೂಡಿತ್ತು.

ಈ ಎಲ್ಲಾ ಹಿನ್ನೆಲೆಯೊಂದಿಗೆ ನಾಟಕ ನೋಡಲು ಹೋದಾಗ ಭ್ರಮ ನಿರಸನಗೊಳಿಸದೆ ನಾಟಕ ಮೊದಲ ದೃಶ್ಯದಲ್ಲೇ ಪ್ರೇಕ್ಷಕರನ್ನು ಮೋಡಿಗೊಳಿಸಿಬಿಟ್ಟಿತು. ಬಯಲು ಸೀಮೆಯ ಹಳ್ಳಿಯೊಂದರ ದಿಟ್ಟ ಚಿತ್ರಣ, ಅವರ ಬಡತನ, ಶ್ರೀಮಂತಿಕೆಯ ಕಿರುಕುಳ ಈ ಮಧ್ಯದಲ್ಲೇ ತನ್ನ ಅಸ್ತಿತ್ವ, ಆಸೆ, ಆಕಾಂಕ್ಷೆಗಳನ್ನು ಹುಡುಕುವ ವ್ಯಕ್ತಿಗಳ ತುಮುಲ ಒಂದೊಂದು ಹಂದರ ಸುಂದರವಾಗಿ ಬಿಚ್ಚಿಕೊಳ್ಳುತ್ತಿದ್ದರೆ ಪ್ರೇಕ್ಷಕನಿಗೆ ತನ್ನಿರುವನ್ನು ಮರೆಸುವಷ್ಟು ಸಹಜವಾಗಿ ಮೂಡಿತ್ತು ನಾಟಕದ ದೃಶ್ಯಗಳು.

ಕಥೆ ಓದುವಾಗಲೇ ಸಾಕವ್ವ ಕಣ್ಣ ಮುಂದೆ ಕಟ್ಟಿ ನಿಲ್ಲುತ್ತಾಳೆ. ಅವಳ ಎರಡೆಕೆರೆ ಜಮೀನು, ರಾಜಹುಂಜ, ಇರುವ ಮುರುಕು ಜೋಪಡಿಯಲ್ಲೇ ಹಾಲು ಕೇಳುವ ಮಗ, ಭ್ರಷ್ಟ ವ್ಯವಸ್ಥೆಗೆ ಸಿಲುಕಿ ಅಸಹಾಯಕ ಪರಿಸ್ಥಿತಿಯಲ್ಲಿ ತೊಳಲಾಡುವ ವ್ಯಕ್ತಿಗಳು ಈ ಎಲ್ಲದರ ನಡುವೆ ಹೋರಾಡುವ ಸಾಕವ್ವ ಎಲ್ಲಿಯೂ ಕಾಣುವಂತಹಳು. ಇವುಗಳ ಮಧ್ಯೆ ಸಾಕವ್ವನ ಹುಂಜ ಮೋಜಿನ ಪಾರ್ಟಿಗೆ ಬಲಿಯಾದುದನ್ನು ತಿಳಿದ ಸಾಕವ್ವನ ದುಃಖ

ನಾಣಿಯವರಿಗೆ ಹಿಡಿಯುತ್ತಿತ್ತಂತೆ. ಶಶಿಧರ ಅಡಪ ಹಾಗೂ ಅವನ ಗೆಳೆಯರು ಶ್ರಮ ಬಡಮುದುಕಿ ಹಟ್ಟಿಯಲ್ಲಿ ಎದ್ದು ಕಾಣುತ್ತಿತ್ತು. ನನಗೆ ಬೆಸ್ಟ್ ಟೆಕ್ನಿಷಿಯನ್ಸ್ ಸಿಕ್ಕಿದ್ದರಿಂದ ನನ್ನ ಅರ್ಧ ಕೆಲಸ ಹಗುರವಾಯ್ತು. ಅವರಿಗೆ ಹೀಗೆ ಅಂತ ವಿವರಿಸುವ ಅಗತ್ಯ ವಿಲ್ಲದ್ದರಿಂದ, ನಾಟಕದ ಯಶಸ್ಸಿಗೆ ನಾಣಿ, ಕಪ್ಪಣ್ಣ, ಅಡಪ ಕೂಡ ಕಾರಣರಾಗಿದ್ದಾರೆ.

ನಾಟಕದುದ್ದಕ್ಕೂ ಪ್ರತಿ ಸಂಭಾಷಣೆಗೂ ಚಪ್ಪಾಳೆ ಪಡೆದುಕೊಂಡ ಉಮಾ ''ನಾನು ನಾಟಕದಲ್ಲಿ ನಟಿಸೇ ಇಲ್ಲ. ನಿರ್ದೇಶಕರು ಹೇಳಿದಂತೆ ನಟಿಸಿದ್ದೇನಷ್ಟೇ ಅಲ್ಲದೆ ಸಾಕವ್ವ ತರದೋರನ್ನ ಬಹಳ ಮಂದಿಯನ್ನು ಹತ್ತಿರದಿಂದ ನೋಡಿರುವುದರಿಂದ್ಲೇ ರವಿಕೆಯಿಲ್ದೇ, ಕೊಳಕಾಗಿ ನಟಿಸಲು ನಂಗೆ ಅಸಹ್ಯವೂ ಆಗ್ಲಿಲ್ಲ. ಬರೀ ಸಿನಿಮಾದಲ್ಲಿ ಮಾತ್ರವಲ್ಲ, ನಾಟಕದಲ್ಲೂ ಅವಶ್ಯವಾದ್ರೆ ಈ ರೀತಿ ನಟಿಸ್ತೀನಿ''ಎಂದು ಪಾತ್ರಕ್ಕೆ ಜೀವ ತುಂಬುವ ಛಲದ ನಟಿ ಉಮಾ ಹೇಳಿದಾಗ, ಅಬ್ಬ! ಎನಿಸಿತು.

ನಾಟಕದ ಯಶಸ್ಸಿಗೆ ನಿರ್ದೇಶಕ, ನಟಿ ಎಷ್ಟು ಮುಖ್ಯವಾಗುತ್ತಾನೋ ಅಷ್ಟೇ ಮುಖ್ಯವಾಗುತ್ತದೆ ತಂಡ ಕೂಡ. ಯಯಾತಿ, ಮಹಾಪ್ರಸ್ಥಾನ, ಸಂಗ್ಯಾ ಬಾಳ್ಯಾ, ಚೋಮ, ಸನ್ನಿವೇಶ, ಸಂದರ್ಭ ಮತ್ತಿತರ ಉತ್ತಮ ನಾಟಕಗಳನ್ನು ನೀಡಿರುವ ರಂಗಸಂಪದಕ್ಕೆ ಹತ್ತು ವರ್ಷಗಳು ದಾಟಿವೆ.

–ಶಮಂತ, ಮುಂಜಾನೆ

# 'ಮಹಾಚೈತ್ರ'

## ಒಂದು ಮಹಾ ಪ್ರಯೋಗ

ಕ್ರೋಧನ ಸಂವತ್ಸರದ ಯುಗಾದಿಯ ಮರುದಿನದಿಂದ ನಾಲ್ಕು ದಿನ ಪ್ರದರ್ಶನಗೊಂಡ 'ಮಹಾಚೈತ್ರ' ನಾಟಕ ಒಂದು ಪ್ರಯೋಗವೆನ್ನುವುದಕ್ಕಿಂತ ರಾಜಧಾನಿಯ ಹವ್ಯಾಸಿ ರಂಗಭೂಮಿಯ ಇತ್ತೀಚಿನ ದಿನಗಳ ಒಂದು ಮಹತ್ವದ ಘಟನೆಯೆಂದೇ ಹೇಳಬಹುದು. ಸಿ. ಜಿ. ಕೃಷ್ಣಸ್ವಾಮಿ ನಿರ್ದೇಶಿಸಿದ ಕವಿ ಎಚ್. ಎಸ್. ಶಿವಪ್ರಕಾಶರ ಈ ನಾಟಕ ರಂಗಸಂಪದ ತಂಡದ ಮಹತ್ವಾಕಾಂಕ್ಷಿ ಪ್ರಯೋಗ.

ಬಸವಣ್ಣನವರ ಕಲ್ಯಾಣದ ಚಳುವಳಿಯು ದೊರೆ ಬಿಜ್ಜಳನ ಕ್ರೌರ್ಯದಿಂದ ಭಗ್ನಗೊಳ್ಳುತ್ತದೆ. ಬಸವಣ್ಣನವರು ಕಲ್ಯಾಣವನ್ನು ತ್ಯಜಿಸುತ್ತಾರೆ. ಅವರು ಸ್ಥಾಪಿಸಿದ ಮಹಾಮನೆಯ ಸದಸ್ಯರು ಬೇರೆ ಬೇರೆ ದಾರಿ ಹಿಡಿಯುವ ಶಿಶಿರ ಸಮಯದಲ್ಲಿ ನಾಟಕದ ಪ್ರಾರಂಭ.

ಬಸವಣ್ಣನವರ ಅನುಯಾಯಿಗಳಲ್ಲಿ ಒಂದು ವರ್ಗ ಅಹಿಂಸಾ ಮಾರ್ಗವನ್ನು ಗುರುತಿಸಿಕೊಂಡು ಹೊರಟುಹೋದರೆ ಇನ್ನು ಹಲವರು ಬಿಜ್ಜಳನ ಕ್ರೌರ್ಯವನ್ನು ಶಸ್ತ್ರದಿಂದ ಎದುರಿಸಲು ಮುಂದಾಗುತ್ತಾರೆ. ಘರ್ಷಣೆ ಪ್ರಾರಂಭವಾಗುತ್ತದೆ. ವರ್ಣಾಂತರ ಪ್ರತಿಲೋಮ ವಿವಾಹದ ನೇತಾರರಾದ ಹರಳಯ್ಯ - ಮಧುವರಸರನ್ನು ಬಿಜ್ಜಳ ಮರಣ ದಂಡನೆಗೊಳಪಡಿಸುತ್ತಾನೆ. ಏತನ್ಮಧ್ಯೆ ಬಸವಣ್ಣನ ದೇಹಾವಸಾನವೂ ಆಗಿರುತ್ತದೆ.

ಬಿಜ್ಜಳನ ಕ್ರೌರ್ಯ ಹೆಪ್ಪುಗಟ್ಟುತ್ತಾ ಹೋದಂತೆ ಶರಣರ ಚಳವಳಿಯ ಮನ್ನೋಟ ಸ್ಪಷ್ಟವಾಗುತ್ತಾ ಬಂಡಾಯ ಬಲಗೊಳ್ಳುತ್ತದೆ. ಬಿಜ್ಜಳ ಬಲಿಯಾಗುತ್ತಾನೆ. ಧಾರ್ಮಿಕ ಸಾಮಾಜಿಕ, ರಾಜಕೀಯ ಸ್ಫೋಟದೊಂದಿಗೆ ಹೊಸ ಚೈತ್ರದ ಬೆಳಕಿನಲ್ಲಿ ನಾಟಕದ ಮುಕ್ತಾಯ.

ಇನ್ನೂ ಅಪ್ರಕಟಿತ ನಾಟಕವಾಗಿರುವ 'ಮಹಾಚೈತ್ರದ' ಈ ಪ್ರಯೋಗ ಕೊಟ್ಟ ಅನುಭವದಿಂದ ಹೇಳುವುದಾದರೆ ಕೃತಿಯ ಕಾವ್ಯಗುಣ ನಾಟಕಕ್ಕೆ ವಿಶಿಷ್ಟ ಲಯ ಮತ್ತು ಧ್ವನಿಶಕ್ತಿಯನ್ನು ಕೊಟ್ಟ ಹಾಗೆ ಅರ್ಥ ಸಂಕೀರ್ಣತೆಯ ಸಮಸ್ಯೆಯನ್ನು ಉಂಟುಮಾಡಿದಂತೆ ಅನಿಸಿತು.

ಬಹುಮಟ್ಟಿಗೆ ಚಾರಿತ್ರಿಕವೆನಿಸಿರುವ ಸಂಗತಿಗಳನ್ನು ಅವಲಂಬಿಸಿದ ಈ ನಾಟಕದಲ್ಲಿ ಪಾತ್ರ ಬೆಳವಣಿಗೆಗೆ ಬದಲು ಥಟ್ಟನೆ ಸನ್ನಿವೇಶಗಳು ಸೃಷ್ಟಿಯಾಗುತ್ತವೆ. ಆದರೆ ದುರಂತದಲ್ಲಿ ಕೊನೆಗಾಣುವ ಮಹಾ ದುಷ್ಟ ನಾಯಕನಾಗಿ (ರಾವಣ, ಕೌರವರಂತೆ) ಮೂಡಿಬಂದ ಬಿಜ್ಜಳ ಪಾತ್ರ ಮಾತ್ರ ಪ್ರತ್ಯೇಕ. ಘಟನೆಗಳು ಒಂದು ವಿಶೇಷ ಗ್ರಹಿಕೆಯ ಕ್ರಮದಲ್ಲಿ ನೇರ ವಾಸ್ತವಿಕತೆ, ಸ್ವಗತ ಸ್ಮರಣೆ, ಪರೋಕ್ಷ ನಿರೂಪಣೆ ಇತ್ಯಾದಿ ವಿಧಾನಗಳಲ್ಲಿ ಒಂದನ್ನೊಂದು ಹಿಡಿದಿಟ್ಟುಕೊಳ್ಳುತ್ತಾ ಸರಮಾಲೆಯಾಗುವ ಈ ನಾಟಕ ಶಿಲ್ಪದ ಬೀಸು ವಿಸ್ತಾರದ್ದು.

ನಾಟಕದ ಹೆಸರಿನಿಂದ ಹಿಡಿದು ರಂಗ ಸೃಷ್ಟಿಗೆ ಬಳಸಿದ ಶೈಲಿಗಳು, ವಿಧಿ ವಿಧಾನಗಳು, ಬಣ್ಣ - ಸಂಗೀತದ ಸಂಯೋಜನೆಯವರೆಗೆ ಎಲ್ಲವೂ ಅವುಗಳ ಅರ್ಥವ್ಯಾಖ್ಯಾನ ಮತ್ತು ಸಾಂಕೇತಿಕತೆಯ ಗ್ರಹಿಕೆಯನ್ನು ಪ್ರೇಕ್ಷಕನಲ್ಲಿ ನಿರೀಕ್ಷಿಸುತ್ತವೆ. ಆದರೂ ನಾಟಕದಲ್ಲಿ ಸಂಕೇತಗಳು ಇಲ್ಲ; ಯಾವುದೂ ಯಾವುದಕ್ಕೂ ಸಂಕೇತ ಅಲ್ಲ ಎಂದು ನಾಟಕಕಾರ ಶಿವಪ್ರಕಾಶಕರು ಒಂದು ಸಂದರ್ಶನದಲ್ಲಿ ಹೇಳಿದ್ದಾರೆ. ಈ ಹೇಳಿಕೆಯ ನೆಲೆ ಸ್ಪಷ್ಟವಾಗಿಲ್ಲ.

ಬಿಜ್ಜಳ ಮತ್ತು ಬಸವಣ್ಣನ ವ್ಯಕ್ತಿಗತ ಸಂಬಂಧಗಳಿಗೂ ರಾಜಕಾರಣದ ಒತ್ತಡಗಳಿಗೂ ಬಿಜ್ಜಳನ ಅಂತರಂಗದಲ್ಲಿ ನಡೆಯುವ ಹೊಯ್ದಾಟ ಎಷ್ಟು ಪರಿಣಾಮಕಾರಿಯಾಗಿ ಮೂಡಿಬಂತೋ, ಶರಣರು ಪರಿಸ್ಥಿತಿಯ ಸವಾಲುಗಳನ್ನು ಎದುರಿಸುವಲ್ಲಿ ಹಿಡಿದ ಮಾರ್ಗಗಳ ನಡುವಿನ ಹೊಯ್ದಾಟವಾಗಲಿ ಅವರ ನಿರ್ಧಾರಗಳ ಅಂತಸ್ಸತ್ವವಾಗಲಿ ಹಾಗೆ ಸಾಕ್ಷಾತ್ಕಾರಗೊಳ್ಳಲಿಲ್ಲ.

ಅಂದ ಹಾಗೇ, ಮಹಾಚೈತ್ರದಲ್ಲಿ ಬಸವಣ್ಣ ಒಂದು ಪಾತ್ರವಾಗಿ ಕಾಣಿಸಕೊಳ್ಳದಿದ್ದರೂ ಇಡೀ ನಾಟಕದ ಉದ್ದಕ್ಕೂ ಹರಡಿಕೊಂಡಿರುವ ಅವನ ವೃತ್ತಾಂತ ಬಹುಮಟ್ಟಿಗೆ ವೈಭವೀಕೃತವಾಗಿದೆ. ''ಅತ್ತಲಿತ್ತಲು ಹೋಗದಂತೆ ಹೆಳವನ ಮಾಡಯ್ಯ'' ಎಂದು ಲಿಂಗೈಕ್ಯನಾಗವ ಬಸವಣ್ಣ ಪಲಾಯನ ವಾದಿಯೆನಿಸಲಿಲ್ಲ. ಕಲ್ಯಾಣ ಕ್ರಾಂತಿಯಲ್ಲಿ ಅವನ ವೃತ್ತಾಂತ ಜನಜಾಗೃತಿಗೆ ಕೇವಲ ನಿಮಿತ್ತವಾಗಿತ್ತೆನ್ನುವುದು ಉದ್ದೇಶವಿರಬಹುದೆ?

'' ದಯಯೇ ಧರ್ಮದ ಮೂಲವಯ್ಯ'' ಎಂಬ ವಚನವನ್ನು ಅಣಕಿಸಿ ಅದರಿಂದ ಹೊಟ್ಟೆ ತುಂಬುವುದೇ ಎಂದು ಜಂಗಮರು ಪ್ರಶ್ನಿಸುವ ಸನ್ನಿವೇಶ ಶರಣರ ಬೋಧನೆಗಳನ್ನು ಗೊಡ್ಡು ತತ್ವಗಳೆಂದು ವಿಡಂಬಿಸಿದಂತೆನಿಸಿತು.

ಪ್ರತಿಯಾಗಿ ''ಕಾಯಕವೇ ಕೈಲಾಸ'' ವೆಂಬ ನಂಬಿಕೆ ಜೀವಂತ ಧರ್ಮವಾಗಿ ಆಚರಣೆಯಲ್ಲಿತ್ತೆಂಬ ಅನಿಸಿಕೆಯನ್ನು ನಾಟಕ ಸನ್ನಿವೇಶಗಳು ಮೂಡಿಸುವುದಿಲ್ಲ, ಜನರ

ಗುಂಪಿನ ಒಕ್ಕೊರಲಿನ ಮಾತು, ಅರಚಾಟಗಳು, ಚಲನೆಗಳು ಕುರಿ ಮಂದೆಯ ವರ್ತನೆಯಂತಿದ್ದುದು ಉದ್ದೇಶಪೂರ್ವಕವೇ? ಅಂಥ ಸನ್ನಿವೇಶಗಳು ನಾಟಕದಲ್ಲಿ ರಬೇಕೆಂದು ಇಲ್ಲಿನ ಅಪೇಕ್ಷೆಯಲ್ಲ.

"ದಯೆಯೆ ಧರ್ಮದ ಮೂಲವಯ್ಯ" ವಚನವನ್ನು ಜಂಗಮರು ಅಣಕಿಸುವ ದೃಶ್ಯಕ್ಕೆ ಇನ್ನೊಂದು ವ್ಯಾಖ್ಯಾನ ಸಾಧ್ಯ ಎಂದಿಟ್ಟುಕೊಳ್ಳೋಣ. ಬಸವಣ್ಣನವರು ಮಹಾಮನೆಯಲ್ಲಿ ನಡೆಯುತ್ತಿದ್ದ ತ್ರಿವಿಧ ದಾಸೋಹದಲ್ಲಿ ಹೊಟ್ಟೆಪಾಡಿಗಾಗಿ ಮಾತ್ರ ಸೇರುತ್ತಿದ್ದ ಜಂಗಮರ ಒಂದು ವರ್ಗವಿತ್ತೆಂದೂ, ಆ ಜಂಗಮರು ಬಸವಣ್ಣನವರ ನಿರ್ಗಮನಾನಂತರ ಆಶ್ರಯ ತಪ್ಪಿದಂತಾಗಿ ಅಸಹನೆಗೊಂಡರೆಂದು ಅರ್ಥೈಸಬಹುದು. ಅಂದರೆ ಯಾವುದೇ ಚಳವಳಿಯಲ್ಲಿ ಅದರ ಸೈದ್ಧಾಂತಿಕ ತಿರುಳನ್ನು ಅರ್ಥಮಾಡಿಕೊಳ್ಳದೆ ಇತರ ಕಾರಣಗಳಿಂದಲೂ ಜನ ಅದರಲ್ಲಿ ಬೆರೆತಿರುತ್ತಾರೆಂಬ ಕಟುಸತ್ಯವನ್ನು ಹೇಳುವುದೆ ಈ ದೃಶ್ಯದ ಉದ್ದೇಶವಿರಬಹುದೇ? ಅಥವಾ ಇದು ಕೇವಲ ಪ್ರೇಕ್ಷಕರನ್ನು ರಂಜಿಸುವುದಕ್ಕಾಗಿ ಸೇರಿಸಲ್ಪಟ್ಟ ದೃಶ್ಯವೇ?

ಬಿಜ್ಜಳ ತನ್ನ ಮತ್ತು ಬಸವಣ್ಣನ ಸಂಬಂಧದ ಹಿಂದಿನ ನೆನಪುಗಳ ಸುಳಿಯಲ್ಲಿ ಸುತ್ತಿ ಕುಸಿದ ಸನ್ನಿವೇಶ ಈ ನಾಟಕದ ಪ್ರಭಾವಿ ದೃಶ್ಯಗಳಲ್ಲೊಂದು.

ಬಿಜ್ಜಳ ಕೈಗೊಳ್ಳುವ ಯಜ್ಞದ ದೃಶ್ಯ ವೈದಿಕ ಧರ್ಮದ ಪುನರುತ್ಥಾನದ ಸಂಕೇತ. ಯಜ್ಞಕ್ಕೆ ಆಹುತಿ ಅರ್ಪಿಸುವ ಸ್ವಾಹಾ ಮಂತ್ರದೊಂದಿಗೆ ಋತ್ವಿಕರು ಅಗ್ನಿಗೆ ಏನನ್ನೂ ಅರ್ಪಿಸದೆ ಕೇವಲ ಪದೋಚ್ಚಾರಣೆಯಲ್ಲೆ ಮುಗಿಸುವುದರ ಸಂಕೇತಾರ್ಥವೇನು? ಯಜ್ಞದ ಪೂರ್ಣಾಹುತಿ ಕಾಲಕ್ಕೆ ಸರಿಯಾಗಿ ಅಲ್ಲೇ ಬಿಜ್ಜಳನ ಕೊಲೆಯಾಗುವ ಸನ್ನಿವೇಶ ಅತ್ಯಂತ ಅರ್ಥಪೂರ್ಣ. (ಕೊಲೆಯ ದೃಶ್ಯದಲ್ಲಿ ದಕ್ಷಬ್ರಹ್ಮನ ಯಜ್ಞವನ್ನು ನಾಶಪಡಿಸಿದ ರೌದ್ರ ಸ್ವರೂಪವನ್ನು ಪ್ರದರ್ಶಿಸಿದ ರೀತಿ ಥಟ್ಟನೆ ಮಂಗಳೂರಿನ ಭೂಮಿಕಾ ತಂಡದ "ಹುಡುಕಾಟ" ನಾಟಕದಲ್ಲಿ ಪ್ರತ್ಯಕ್ಷವಾಗುವ ಯಕ್ಷಗಾನ ರಾಕ್ಷಸ ಪಾತ್ರ "ವಿನಾಶಿ" ಯನ್ನು ನೆನಪಿಗೆ ತಂದಿತು).

ನಾಟಕದ ದೃಶ್ಯ ಶ್ರಾವ್ಯ ಬೆಡಗುಗಳ ವಿನ್ಯಾಸದ ದಟ್ಟನೆಯಲ್ಲಿ ರಂಗಕ್ರಿಯೆ ಮತ್ತು ಮಾತುಗಳ ಅನೇಕ ಕೊಂಡಿಗಳು ನುಸುಳಿಹೋದ ಸಂದರ್ಭಗಳೂ ಇಲ್ಲದಿಲ್ಲ.

ಒಟ್ಟಿನಲ್ಲಿ ಮಹಾಚೈತ್ರ ರಂಗಭೂಮಿಯ ಒಂದು ಮಹಾಕೃತಿಯಲ್ಲಿದಿದ್ದರೆ ಒಂದು ಮಹಾ ಪ್ರಯೋಗ, ಅಷ್ಟೇ ಮಹಾ ಸಾಧನೆ.

*ಜಯರಾಮ ಅಡಿಗ, ಕನ್ನಡ ಪ್ರಭ*

# 'ಯಯಾತಿ'

## ಹೊಸ ಅರ್ಥವಿವರಣೆಯ ಪ್ರಯತ್ನ

ರಂಗಸಂಪದ ಗುರುವಾರ ಸಂಜೆ ರವೀಂದ್ರ ಕಲಾಕ್ಷೇತ್ರದಲ್ಲಿ ಅಭಿನಯಿಸಿದ ಗಿರೀಶ್ ಕಾರ್ನಾಡರ ''ಯಯಾತಿ'' (ನಿರ್ದೇಶನ ಸಿ. ಜಿ. ಕೃಷ್ಣಸ್ವಾಮಿ) ಹಿಂದಿನ ಪ್ರಯೋಗಗಳಿಗಿಂತ ವಿಭಿನ್ನ ದೃಷ್ಟಿಕೋನದಲ್ಲಿ ನಿರೂಪಿಸುವ ಪ್ರಯತ್ನದಲ್ಲಿ ಹಾಗೂ ಉತ್ಕಟ ನಾಟಕೀಯತೆಯಲ್ಲಿ ಗಮನಾರ್ಹವೆನಿಸಿತು.

ಶುರುವಿಗೆ ದಾಸಿಯ ಮೂಲಕ ನಾಟಕದ ಪಾತ್ರಗಳನ್ನು ಪರಿಚಯಿಸುವುದರಲ್ಲಿ ಪುರಾಣ - ಇತಿಹಾಸಗಳನ್ನು ಬೇರೊಂದು ದೃಷ್ಟಿಕೋನದಿಂದ ನೋಡುವ ನಿರ್ದೇಶಕರ ಆಶಯ ಸ್ಪಷ್ಟವಾಯಿತು. ಪರಿಚಯದ ಹಂತ ದಾಟಿ ಪ್ರಯೋಗ ಮೂಲ ನಾಟಕಕ್ಕೆ ತೆರೆದುಕೊಂಡಾಗ ಹೊಸ ಅರ್ಥವಿವರಣೆ ಏನೂ ಸಾಧ್ಯವಾಗದೆ ಕೇವಲ ನಾವೀನ್ಯತೆಯಿಂದಾಗಿ ಇದು ಪ್ರಯೋಗದ ವೈಶಿಷ್ಟ್ಯವೆನಿಸಿತು. ಬೇರೊಂದು ದೃಷ್ಟಿಕೋನದಿಂದ ನೋಡುವ ಪ್ರಯತ್ನದಲ್ಲಿ ಹೊಸ ಅರ್ಥ ಹೊರಡಿಸಲು ನಿರ್ದೇಶಕರು ಆವುಟಗಳಿಗಿಳಿಯದೇ ಮೂಲದಾಕರ್ಷಣ ಕೇಂದ್ರದ ಗತಿಯಲ್ಲೇ ನಿರೂಪಿಸಿದ್ದು ಸಮಾಧಾನಕರ ಅಂಶ.

ಸರಳ ರಂಗಸಜ್ಜಿಕೆ (ರಂಗ ವಿನ್ಯಾಸ ಶಶಿಧರ್ ಅಡಪ ಮತ್ತು ಸಿ. ಜಿ. ಕೆ.) ಯಲ್ಲಿ ಕಾಮನೆ ಮತ್ತು ಜೀವನ ಸೌಂದರ್ಯಗಳನ್ನು ಸಂಕೇತಿಸುವ ಸಿಂಬಿಸುತ್ತಿದ್ದ ಸರ್ಪ ಮತ್ತು ನವಿಲುಗಳನ್ನು ವಸ್ತು ಪ್ರತಿರೂಪವಾಗಿ ಬಳಸಿಕೊಂಡು ನಾಟಕದ ಅರ್ಥವಂತಿಕೆಯನ್ನು ದೃಶ್ಯ ಮುಖೇನ ಹೆಚ್ಚಿಸಿದ ಪ್ರಯೋಗ ಯಯಾತಿಯ ಅಮರತ್ವದ ಆಕಾಂಕ್ಷೆ, ಶರ್ಮಿಷ್ಠೆಯ ಮನುಷ್ಯತ್ವದ ಹಂಬಲ, ವಂಶ ಭಾರದಿಂದ ನರಳುತ್ತ ಹೊಸ ವ್ಯಕ್ತಿತ್ವಕ್ಕಾಗಿ ಚಡಪಡಿಸುವ ಪುರುವಿನ ಅಸಹಾಯಕತೆ ಇವೆಲ್ಲದರಲ್ಲಿ ಸನ್ನಿವೇಶದಿಂದ ಸನ್ನಿವೇಶಕ್ಕೆ ದುರಂತ ಉತ್ಕಟವಾಗಿ ಹುರಿಗಟ್ಟಿಕೊಳ್ಳುತ್ತಾ ಪ್ರೇಕ್ಷಕರನ್ನು ಹಿಡಿದಿರಿಸಿತು. ಕೊನೆಯಲ್ಲಿ, "ಇವೆಲ್ಲದರ ಅರ್ಥವೇನು, ದೇವರೆ, ಅರ್ಥವೇನು'' ಎಂಬ ಮಾತು ದುರಂತದ ಆರ್ತಧ್ವನಿಯಾಗಿ ಬರದೆ ಅಸಹಾಯಕತೆಯ ಕೊರಗಿನಂತೆ ಕೇಳಿಸಿತು. ''ಮುಂದೇನು'' ಎಂಬುದು ಮೂಲದ ಮಾತಿಗಿಂತ ಹೆಚ್ಚು ಪರಿಣಾಮಕಾರಿಯಾದ ಅಭಿವ್ಯಕ್ತಿ ಎಂದು ನಿರ್ದೇಶಕರು ಭಾವಿಸಿದ್ದರೆ ಅದು ಪ್ರಯೋಗದಲ್ಲಿ ಹಾಗೆ ಕೇಳಿಸಲಿಲ್ಲ.

ಪಾತ್ರಗಳ ಆಯ್ಕೆ ಮಾತು ಬಂದಾಗ ಪುರು ಪಾತ್ರದ ಆಯ್ಕೆಯಲ್ಲಿ ನಿರ್ದೇಶಕರು ಎಡವಿದ್ದಾರೆ ಎನ್ನಬೇಕು. ಸುರ - ಅಸುರರ ರಕ್ತ ಹಂಚಿಕೊಂಡು ಹುಟ್ಟಿದ, ತಂದೆಗೆ ತನ್ನ ಯೌವನ ಧಾರೆ ಎರೆದುಕೊಡುವ ಪುರು ನಿತ್ರಾಣಿಯಾಗಿ, ಕೆಲವೊಮ್ಮೆಯಂತೂ ಮಾತು - ಅಭಿನಯಗಳಲ್ಲಿ ವಿದೂಷಕನಂತೆ ಕಂಡು ಪ್ರೇಕ್ಷಕರು ನಗುವಂತಾದದ್ದು ರಸಪೋಷಣೆಗೆ ಭಂಗವಾಯಿತು. ಅಭಿನಯದಲ್ಲಿ ಶರ್ಮಿಷ್ಠೆಯಾಗಿ ಗಿರಿಜಾ ಲೋಕೇಶ್‌ಗೆ ಮೊದಲ ಪ್ರಶಂಸೆ ಸಲ್ಲಬೇಕು. ಯಯಾತಿಯಾಗಿ ನಾಗೇಶ್ ಕಶ್ಯಪ್, ಚಿತ್ರಲೇಖೆಯಾಗಿ ವೈಜಯಂತಿ ವಿಜಯಕಾಶಿ ತಮ್ಮ ಪಾತ್ರಗಳನ್ನು ಸಮರ್ಥವಾಗಿ ನಿರ್ವಹಿಸಿದರು. ಬೆಳಕು (ಜೆ. ಲೋಕೇಶ್) ಮತ್ತು ಧ್ವನಿ (ಬಿ. ಎಸ್. ರಾಮಮೂರ್ತಿ ಮತ್ತು ನಾಗೇಶ್) ಪ್ರಯೋಗಕ್ಕೆ ಪೂರಕವಾಗಿದ್ದವು.

*ಪ್ರಜಾವಾಣಿ*

# ನೀಗಿಕೊಂಡ ಸಂಸ

## ಗಮನಾರ್ಹವಾದ 'ನೀಗಿಕೊಂಡ ಸಂಸ'

ರಂಗ ಸಂಪದ ತಂಡವು ರವೀಂದ್ರ ಕಲಾಕ್ಷೇತ್ರದಲ್ಲಿ ಅಭಿನಯಿಸಿದ ಕಿ. ರಂ. ನಾಗರಾಜರ 'ನೀಗಿಕೊಂಡ ಸಂಸ' ಇತ್ತೀಚಿನ ಗಮನಾರ್ಹವಾದ ಪ್ರಯೋಗಗಳಲ್ಲಿ ಒಂದು.

ಸ್ವಾತಂತ್ರ್ಯ ನಿಶ್ಶೃಂಖಲ ಬದುಕಿಗಾಗಿ ತುಡಿಯುತ್ತಾ ಬ್ರಿಟಿಷ್ ಗೂಢಚಾರರು ಹಾಗೂ ಪೋಲಿಸಿರು ತನ್ನ ಬೆನ್ನಿಗೆ ಬಿದ್ದಿದ್ದಾರೆ ಎಂಬ ಭೀತಿಯಲ್ಲೇ ಸದಾ ಬದುಕಿದ ನಿಗೂಢ ವ್ಯಕ್ತಿತ್ವದ ಸಂಸ ಕನ್ನಡದಲ್ಲಿ ಐತಿಹಾಸಿಕ ನಾಟಕಗಳ ಮಾತು ಬಂದಾಗ ಒಂದು ದೊಡ್ಡ ಹೆಸರು. ಕವಿಯ ಕೃತಿಗಳು ಹಾಗೂ ಜೀವನ ವೃತ್ತಾಂತದ ಮೂಲಕ ಸಂಸರ ನಿಗೂಢ ಮನಸ್ಸು ವ್ಯಕ್ತಿತ್ವಗಳ ಶೋಧ, ಅವರ ಸಂವೇದನಾಶೀಲ ಸ್ಥಳಗಳನ್ನು ಕಟ್ಟುವ ಪ್ರಯತ್ನ 'ನೀಗಿಕೊಂಡ ಸಂಸ'. ದೃಶ್ಯ ರೂಪಕವಾದ ನಿರೂಪಣೆಯಲ್ಲಿ 'ನೀಗಿಕೊಂಡ ಸಂಸ' ಪ್ರಸಂಗ ಹಂತದಲ್ಲಿ (ನಿರ್ದೇಶನ: ಸಿ. ಜಿ. ಕೃಷ್ಣಸ್ವಾಮಿ) ಪ್ರೇಕ್ಷಕರ ಆಸಕ್ತಿಯನ್ನು ಹಿಡಿದಿರಿಸಿತಾದರೂ ಕೃತಿ ಹಂತದಲ್ಲಿ ಕೆಲವೊಂದು ಅಂಶಗಳಲ್ಲಿ ಸಮಂಜಸ ಎನಿಸುವುದಿಲ್ಲ. ಅಂಚೆಯವರು ತೆಗೆದುಕೊಂಡು ಹೋದ ಕೃತಿ ಪ್ರಕಟವಾಗದೆ ಕಳೆದು ಹೋದದ್ದು, ಆಸ್ಥಾನ ಪಂಡಿತರ ಕಾಕದೃಷ್ಟಿ ಇವೆಲ್ಲ ನಾಟಕಕಾರರಾಗಿ ಸಂಸರ ಬೆಳವಣಿಗೆ ವ್ಯಕ್ತಿತ್ವ ಗಮನಿಸಲು ಸುಸಂಗತವಾಗುವಷ್ಟು ಎ. ಆರ್. ಕೃಷ್ಣ ಶಾಸ್ತ್ರಿಗಳು ಸಂಸರ ಅಣ್ಣನನ್ನು ವಂಚಿಸಿದರನ್ನೆಲಾದ ಮಾತು ಸುಸಂಗತವಾಗದು. ಇದೂ ನಾಟಕಕಾರರಿಗೆ ಸ್ಪಷ್ಟವಿದ್ದಂತೆ ತೋರುವುದಿಲ್ಲ. ನಾಟಕದಲ್ಲಿ ಸಂಶಯದ ಮಾತಾಗಿಯೇ ಬರುತ್ತದೆ. ಅಂತೆಯೇ ಒಬ್ಬ ಕವಿ ಅರಸರನ್ನು ಓಲೈಸಿದ ಎಂಬ ಕಾರಣಕ್ಕಾಗಿ ಆ ತಲೆಮಾರಿನ ಎಲ್ಲರನ್ನೂ ಗುಲಾಮಿ ಪಂಡಿತರೆಂದು ಕರೆಯುವುದು ಎಷ್ಟರ ಮಟ್ಟಿಗೆ ಸರಿ?

'ವಿಗಡ ವಿಕ್ರಮರಾಯ' ಮತ್ತು 'ಬಿರುದೆಂತೆಂಬರ ಗಂಡ' ನಾಟಕಗಳ ದೃಶ್ಯಗಳ ಮೂಲಕ ಸಂಸರ ನಿಗೂಢ ಮನಸ್ಸನ್ನು ಅವರ ತಳಮಳವನ್ನು ಬಯಲುಗೊಳಿಸುವ ಪ್ರಥಮಾರ್ಧಕ್ಕಿಂತಲೂ 'ಸಂಸನ' ಪಾತ್ರಧಾರಿಯೇ ನೇರಮಾತನಾಡುವ ದ್ವಿತೀಯಾರ್ಧ ಹೆಚ್ಚು ಪರಿಣಾಮಕಾರಿ ಆಗಿತ್ತು. ತನ್ನ ಸುತ್ತ ಮುತ್ತ ಭಾರಿ ಒಳಸಂಚು, ಬೇಹುಗಾರಿಕೆ ನಡೆದಿದೆ ಎಂದು ಭಾವಿಸಿದ್ದ ಸಂಸರ ಮನಸ್ಸಿನ ಒಳಗುದಿಯನ್ನು ತೋರಿಸಲೋ ಎಂಬಂತೆ

ತಂದ 'ವಿಗಡ ವಿಕ್ರಮರಾಯ'ದ ಪುಟ್ಟಸ್ವಾಮಿ ಕೊಲೆ ದೃಶ್ಯ ಮೂಲ ನಾಟಕದೊಂದಿಗೆ ಅರ್ಥಪೂರ್ಣವಾಗಿ ಬೆಸೆದುಕೊಳ್ಳದೆ ಪ್ರತ್ಯೇಕ ದೃಶ್ಯವಾಗಿಯೇ ನಿಂತಿತು.

ಗಾಳಿಗೊಡ್ಡಿದ್ದ ಸೊಡರಿನಂತೆ ಹೊಯ್ದಾಡುವ ಸಂಸರ ಮನದಾಳದಲ್ಲಿನ ಸ್ವಾತಂತ್ರ್ಯ ಪ್ರಿಯತೆ, ಭೀತಿ, ಸಾವಿನ ಸೆಳೆತ, ಆತಂಕಗಳ ನೆಲೆಗಳನ್ನೂ ಒಳಸುಳಿಗಳನ್ನೂ ಗುರುತಿಸುವುದರಲ್ಲಿ ದ್ವಿತೀಯಾರ್ಧ ತ್ವರಿತಗತಿಯಲ್ಲಿ ಸಾಗುತ್ತ ತೀವ್ರ ಪರಿಣಾಮವನ್ನು ಉಂಟುಮಾಡಿತು. ತನ್ನ ಪಾತ್ರ ನಿರ್ವಹಸಲಾಗದೆ ಆತ್ಮಹತ್ಯೆ ಮಾಡಿಕೊಳ್ಳುವ ಸಂಸನ ಅಂತ್ಯವನ್ನು ವಿಗಡ ವಿಕ್ರಮರಾಯ ನಾಟಕದ ಪುಟ್ಟಸ್ವಾಮಿಯ ಕೊಲೆಯೊಂದಿಗೆ ಸಮೀಕರಿಸಿದ್ದು ಸಂಸನ ಸಾವಿಗೆ ಮತ್ತೊಂದು ಅರ್ಥದ ಹೊಳಹು ಕೊಡುವಂಥ ಶೃಂಗ. ಮೈಸೂರಿನ ಬಗ್ಗೆ ಸಂಸರಿಗಿದ್ದ ಮೋಹ ಹಾಗೂ ಅಲ್ಲಿನ ಪರಿಸರದ ಭಯದಿಂದಾಗಿ ದೂರಹೋಗುವ ಆಶಯಗಳ ಸಂಕೇತವಾಗಿ ಬಂದ ಆಶ್ವಯುಜ ಶುದ್ಧ ಮಹಾನವಮಿ ನಾಡಪದದ ಸನ್ನಿವೇಶ, ನರರಾಕ್ಷಸರು ಪ್ರಜೆಗಳನ್ನು ಬಲಿಕೊಡುವ ಭ್ರಾಮಕ ದೃಶ್ಯ ಇಲ್ಲೆಲ್ಲ ಸಿ. ಜಿ. ಕೆ. ಅವರ ನಿರ್ದೇಶನದ ಕೈಚಳಕ ಸ್ಪಷ್ಟವಾಗಿ ಕಾಣುತ್ತಿತ್ತು. ವ್ಯಕ್ತಿಗಳನ್ನು ನಾಟಕದ ಪಾತ್ರಗಳಾಗಿ ಸಂಸರ ಅಂತರಂಗದ ದನಿಯಾಗಿ ಸಮರ್ಥವಾಗಿ ಬಳಸಿಕೊಳ್ಳಲಾಯಿತು.

ಅಭಿನಯದ ಮಾತು ಬಂದಾಗ ನಾಗಾಭರಣ ಸಂಸರ ಪಾತ್ರವನ್ನು ಒಪ್ಪವಾಗಿಯೇ ನಿರ್ವಹಿಸಿದರು ಎನ್ನಬೇಕು. ನಾಗಾಭರಣ ಪ್ರತಿಭಾವಂತ ನಟ ಎಂಬುದರಲ್ಲಿ ಎರಡು ಮಾತಿಲ್ಲವಾದರೂ ಈ ಪಾತ್ರಕ್ಕೆ ಪೀಚು ಎನ್ನಿಸಿತು. ಅರ್ಥ ಮತ್ತು ದೃಶ್ಯವಂತಿಕೆ ಎರಡರಲ್ಲೂ 'ಏರಿಳಿತ' ಗಳನ್ನು ಸಮರ್ಥವಾಗಿ ಸೂಚಿಸುವಂಥ ಬೆಸೆದ ಅಚ್ಚಿನ ರಂಗಸಜಿಕೆ(ರಂಗ ವಿನ್ಯಾಸ ಸಿ. ಜಿ. ಕೆ. ಶಶಿಧರ ಅಡಪ) ಆಕರ್ಷಣೀಯವಾಗಿತ್ತು. ಬೆಳಕು, ಸಂಗೀತ ಸಮರ್ಪಕ.

ಪ್ರಜಾವಾಣಿ

## ವೈಶಂಪಾಯನ ತೀರ

### ಸೀಮಿತಗೊಳ್ಳುವ ಅರ್ಥಗಳು

ಮೊದಲ ದೃಶ್ಯದಲ್ಲೇ ಜಕ್ಕಣಿಯ ಮುಖವಾಡ ತೊಟ್ಟ ಕಲ್ಯಾಣಿ ತನ್ನ ದುರಂತಕ್ಕೆ ನಿಮಿತ್ತವಾದ ಯಕ್ಷಗಾನ ಕುರಿತ ತನ್ನ ಆಕ್ರೋಶವನ್ನು ಕಾರಿಕೊಳ್ಳುತ್ತಾ 'ವೈಶಂಪಾಯನ ತೀರ' ನಾಟಕದ (ಕತೆ; ಮಹಾಬಲಮೂರ್ತಿ ಕೊಡ್ಲಕೆರೆ, ರೂಪಾಂತರ; ಎಲ್. ಎನ್. ಮುಕುಂದರಾಜ್, ನಿರ್ದೇಶನ ಸಿ. ಜಿ. ಕೆ., ಅಭಿನಯ; ಹಂದರ) ಕೇಂದ್ರ ವಸ್ತುವನ್ನು ಸೂಚಿಸುತ್ತಾಳೆ. ಕಲಾವಿದರ 'ರಂಗ ಭೂಮಿ ವ್ಯಕ್ತಿತ್ವ' ಹಾಗೂ ಖಾಸಗೀ ವ್ಯಕ್ತಿತ್ವಗಳ ಸಂಘರ್ಷ ಕುರಿತ ಈ ನಾಟಕ, ನಾಟಕಕಾರ-ನಿರ್ದೇಶಕರಿಬ್ಬರೂ ತಂತಮ್ಮ ಕ್ಷೇತ್ರಗಳನ್ನು ಹೆಚ್ಚು ಸೂಕ್ಷ್ಮವಾಗಿ ನಿರ್ವಹಿಸಿದ್ದರೆ ಆಕರ್ಷಕ ಪ್ರಯೋಗವಾಗಬಹುದಿತ್ತು.

ರಂಗದ ಮೇಲೆ ಸಾಮಾನ್ಯವಾಗಿ ವಿರೋಧಿ ಪೌರಾಣಿಕ ಪಾತ್ರಗಳನ್ನು ನಿರ್ವಹಿಸುವ ಕೃಷ್ಣಭಟ್ಟ ಹಾಗೂ ವೆಂಕಪ್ಪ ಹೆಗಡೆ ರಂಗದಾಚೆಯ ವಾಸ್ತವದಲ್ಲೂ ಮುಖಾಮುಖಿಯಾಗುವುದು ಕೃಷ್ಣಭಟ್ಟನ ಹೆಂಡತಿ ಕಲ್ಯಾಣಿಯನ್ನು ವೆಂಕಪ್ಪ ಒಲಿಸಿಕೊಂಡಾಗ. ಮುಕುಂದರಾಜರ ನಾಟಕ ಗ್ರಹಿಸಿರುವ ಒಂದು ಕುತೂಹಲಕರ ಅಂಶವೆಂದರೆ, ಭಾನುಮತಿಯ ಜೊತೆ ನೆತ್ತವನಾಡಿದ ಪ್ರಸಂಗದಲ್ಲಿ ಕರ್ಣನಾಗಿ ದುರ್ಯೋಧನನ ಉದಾತ್ತತೆಯಿಂದ ಏನನ್ನೂ ಕಲಿಯದ ವೆಂಕಪ್ಪ ರಾವಣನಿಂದ ಹೆಚ್ಚು ಕಲಿತಿರುವುದು! ಆಘಾತದಿಂದ ಊರು ಬಿಡುವ ಕೃಷ್ಣಭಟ್ಟ ಮರಳಿ ಬಂದಾಗ, ನಾಟಕದ ಅಂಬೆಯಂತೆ ಭೀಷ್ಮ ಹಾಗೂ ಸಾಲ್ವರಿಬ್ಬರಿಂದಲೂ ತ್ಯಜಿಸಲ್ಪಟ್ಟ ಕಲ್ಯಾಣಿ ಹುಚ್ಚಿಯಾಗಿದ್ದಾಳೆ. ಅವಳ ಒತ್ತಾಸೆಯಿಂದ ಮತ್ತೆ ಗೆಜ್ಜೆ ಕಟ್ಟುವ ಕೃಷ್ಣಭಟ್ಟ ದುರ್ಯೋಧನನ ಪಾತ್ರಧಾರಿ ವೆಂಕಪ್ಪನನ್ನು 'ಗದಾಯುದ್ಧ' ಪ್ರಸಂಗದಲ್ಲಿ ಕೊಂದೇ ಬಿಡುತ್ತಾನೆ. ಆದರೆ, ಈರ್ಷ್ಯೆ ತಂದ ದುರಂತವಿದು ಎಂದು ಘೋಷಿಸುವ ಮೇಳದಿಂದಾಗಿ ಈ ಸನ್ನಿವೇಶದ ಅರ್ಥಗಳೇ ಸೀಮಿತವಾಗುತ್ತವೆ.

ಯಕ್ಷಗಾನದ ಪ್ರಸಂಗಗಳೇನೋ ಸಿ. ಜಿ. ಕೆ. ಕಳೆಗಟ್ಟುವಂತೆ ನೋಡಿಕೊಳ್ಳುತ್ತಾರೆ. ಆದರೆ ಈ ಪ್ರಸಂಗಗಳ ಅರ್ಥಗಳನ್ನು ಪ್ರತಿಧ್ವನಿಸುವ ಸಮಾನಾಂತರ ದೃಶ್ಯಗಳತ್ತ ನಿರ್ದೇಶಕ ನಾಟಕಕಾರರಿಬ್ಬರಿಗೂ ಹೆಚ್ಚು ಗಮನವಿದ್ದಂತಿಲ್ಲ. ಭಾನುಮತಿ ಪ್ರಸಂಗದಲ್ಲಿ ಮಾತ್ರ ಅಂಥ ಪ್ರಯತ್ನವಿದೆ. ವಾಚಾಳಿತನ ಹಾಗೂ ದ್ವಂದ್ವಾರ್ಥಗಳಿಂದಾಗಿ ಹೋಟಲ್

ದೃಶ್ಯಗಳು ಕಾಲೇಜು ನಾಟಕದ ಮಟ್ಟಕ್ಕಿಳಿಯುತ್ತವೆ. ಆಡುಮಾತಂತೂ ಹವ್ಯಕ ಕನ್ನಡ ಹಾಗೂ ಮೈಸೂರು ಕನ್ನಡದ ವಿಚಿತ್ರ ಮಿಶ್ರಣವಾಗಿದೆ. ಆರಂಭದಲ್ಲಿ ಹಾಗೂ ವಿಚಾರಣೆಯ ದೃಶ್ಯದಲ್ಲಿ ಕೊಂಚ ಮಿನುಗುವ ಮುಕುಂದರಾಜರ ಕಾವ್ಯಕ್ಕೆ ಹೆಚ್ಚಿನ ಧ್ವನಿಶಕ್ತಿಯಿಲ್ಲ. ಮಂದ ಬೆಳಕಲ್ಲಿ ಹರಡಿಕೊಳ್ಳುವ ಕೆಂಪು ಸೀರೆಯ ಆಚೀಚೆ ನಿಂತ ಪ್ರಣಯಿಗಳ ದೃಶ್ಯ ಹಾಗೂ ಕಲ್ಯಾಣಿ ಮರಳಿ ಗಂಡನಿಗೆ ಗೆಜ್ಜೆ ತೊಡಿಸುವ ಭಾಗಗಳಲ್ಲಿ ಮಾತ್ರ ಸಿ. ಜಿ. ಕೆ. ವೈಶಿಷ್ಟ್ಯವಿದೆ. ನಟನೆಯಲ್ಲಿ ಮಂಜುನಾಥ್ ಕುಂದಾಪುರ್, ಸದಾನಂದ್ ಭಟ್, ಗೀತಾ ಸುರತ್ಕಲ್ ಗಮನ ಸೆಳೆದರು. ಮೇಳನಾಯಕನಿಗಿಂತ, ಚಂಡೆಯ ಗುಂಡ್ಮಿ ರಘುರಾಂ ಹಾಡಿದ ಯಕ್ಷಗಾನದ ಮಟ್ಟುಗಳು ಹೆಚ್ಚು ಶಾಸ್ತ್ರೀಯವಾಗಿದ್ದವು. ಜಿ. ವಿ. ಅತ್ರಿ ಸಂಗೀತದಲ್ಲಿ ಶಿವರಂಜನಿಯ ಅಬ್ಬರದ ಜೊತೆಗೆ, ಪಂಪನ 'ನೆತ್ತಮನಾಡಿ ಭಾನುಮತಿ ಸೋಲ್ತೊಡೆ' ಪದ್ಯದ ಮೊದಲ ಸಾಲು ರವಿಚಂದ್ರನ್ ಸಿನಿಮಾದ 'ಮೋಸಗಾರನ... ಹೃದಯ ಶೂನ್ಯನ...' ಎಂಬ ಹಾಡಿನ ಟ್ಯೂನ್‌ನ್ನು ನೆನಪಿಗೆ ತರುತ್ತಿತ್ತು.

*ನಟರಾಜ್ ಹುಳಿಯಾರ್, ಲಂಕೇಶ್ ಪತ್ರಿಕೆ 5.7.1995*

# ಯಯಾತಿ

## ಹೊಸ ಅರ್ಥ ವಿವರಣೆಯ ಪ್ರಯತ್ನ

'ರಂಗಸಂಪದ' ಗುರುವಾರ ಸಂಜೆ ರವೀಂದ್ರ ಕಲಾಕ್ಷೇತ್ರದಲ್ಲಿ ಅಭಿನಯಿಸಿದ ಗಿರೀಶ್ ಕಾರ್ನಾಡರ ''ಯಯಾತಿ'' (ನಿರ್ದೇಶನ ಸಿ. ಜಿ. ಕೃಷ್ಣಸ್ವಾಮಿ)ಹಿಂದಿನ ಪ್ರಯೋಗಗಳಿಗಿಂತ ವಿಭಿನ್ನ ದೃಷ್ಟಿಕೋನದಲ್ಲಿ ನಿರೂಪಿಸುವ ಪ್ರಯತ್ನದಲ್ಲಿ ಹಾಗೂ ಉತ್ಕಟ ನಾಟಕೀಯತೆಯಲ್ಲಿ ಗಮನಾರ್ಹವೆನಿಸಿತು.

ಶುರುವಿಗೆ ದಾಸಿಯ ಮೂಲಕ ನಾಟಕದ ಪಾತ್ರಗಳನ್ನು ಪರಿಚಯಿಸುವುದರಲ್ಲಿ ಪುರಾಣ-ಇತಿಹಾಸಗಳನ್ನು ಬೇರೊಂದು ದೃಷ್ಟಿಕೋನದಿಂದ ನೋಡುವ ನಿರ್ದೇಶಕರ ಆಶಯ ಸ್ಪಷ್ಟವಾಯಿತು. ಪರಿಚಯದ ಹಂತ ದಾಟಿ ಪ್ರಯೋಗ ಮೂಲ ನಾಟಕಕ್ಕೆ ತೆರೆದುಕೊಂಡಾಗ ಹೊಸ ಅರ್ಥವಿವರಣೆ ಏನೂ ಸಾಧ್ಯವಾಗದೆ ಕೇವಲ ನಾವೀನ್ಯತೆಯಿಂದಾಗಿ ಇದು ಪ್ರಯೋಗದ ವೈಶಿಷ್ಟ್ಯವೆನಿಸಿತು. ಬೇರೊಂದು ದೃಷ್ಟಿಕೋನದಿಂದ ನೋಡುವ ಪ್ರಯತ್ನದಲ್ಲಿ ಹೊಸ ಅರ್ಥ ಹೊರಡಿಸಲು ನಿರ್ದೇಶಕರು ಆವುಟಗಳಿಗಿಳಿಯದೇ ಮೂಲದಾಕರ್ಷಣ ಕೇಂದ್ರದ ಗತಿಯಲ್ಲೇ ನಿರೂಪಿಸಿದ್ದು ಸಮಾಧಾನಕರ ಅಂಶ.

ಸರಳ ರಂಗಸಜ್ಜಿಕೆ (ರಂಗವಿನ್ಯಾಸ ಶಶಿಧರ್ ಅಡಪ ಮತ್ತು ಸಿ. ಜಿ. ಕೆ.) ಯಲ್ಲಿ ಕಾಮನೆ ಮತ್ತು ಜೀವನ ಸೌಂದರ್ಯಗಳನ್ನು ಸಂಕೇತಿಸುವ ಸಿಂಬಿಸುತ್ತಿದ್ದ ಸರ್ಪ ಮತ್ತು ನವಿಲುಗಳನ್ನು ವಸ್ತು ಪ್ರತಿರೂಪವಾಗಿ ಬಳಸಿಕೊಂಡು ನಾಟಕದ ಅರ್ಥವಂತಿಕೆಯನ್ನು ದೃಶ್ಯ ಮುಖೇನ ಹೆಚ್ಚಿಸಿದ ಪ್ರಯೋಗ ಯಾಯಾತಿಯ ಅಮರತ್ವದ ಆಕಾಂಕ್ಷೆ, ಶರ್ಮಿಷ್ಠೆಯ ಮನುಷ್ಯತ್ವದ ಹಂಬಲ, ವಂಶ ಭಾರದಿಂದ ನರಳುತ್ತ ಹೊಸ ವ್ಯಕ್ತಿತ್ವಕ್ಕಾಗಿ ಚಡಪಡಿಸುವ ಪುರುವಿನ ಅಸಹಾಯಕತೆ ಇವೆಲ್ಲದರಲ್ಲಿ ಸನ್ನಿವೇಶದಿಂದ ಸನ್ನಿವೇಶಕ್ಕೆ ದುರಂತ ಉತ್ಕಟವಾಗಿ ಹುರಿಗಟ್ಟಿಕೊಳ್ಳುತ್ತಾ ಪ್ರೇಕ್ಷಕರನ್ನು ಹಿಡಿದಿರಿಸಿತು. ಕೊನೆಯಲ್ಲಿ, ''ಇದೆಲ್ಲದರ ಅರ್ಥವೇನು, ದೇವರೆ, ಅರ್ಥವೇನು'' ಎಂಬ ಮೂಲದ ಸಂಭಾಷಣೆಗೆ ಬದಲಾಗಿ ಬಂದ ಪುರುವಿನ ''ಮುಂದೇನು''ಎಂಬ ಮಾತು ದುರುಂತದ ಆರ್ತಧ್ವನಿಯಾಗಿ ಬರದೆ ಅಸಹಾಯಕತೆಯ ಕೊರಗಿನಂತೆ ಕೇಳಿಸಿತು. ''ಮುಂದೇನು''ಎಂಬುದು ಮೂಲದ ಮಾತಿಗಿಂತ ಹೆಚ್ಚು ಪರಿಣಾಮಕಾರಿಯಾದ ಅಭಿವ್ಯಕ್ತಿ ಎಂದು ನಿರ್ದೇಶಕರು ಭಾವಿಸಿದ್ದರೆ ಅದು ಪ್ರಯೋಗದಲ್ಲಿ ಹಾಗೆ ಕೇಳಿಸಲಿಲ್ಲ.

ಪಾತ್ರಗಳ ಆಯ್ಕೆ ಮಾತು ಬಂದಾಗ ಪುರು ಪಾತ್ರದ ಆಯ್ಕೆಯಲ್ಲಿ ನಿರ್ದೇಶಕರು ಎಡವಿದ್ದಾರೆ ಎನ್ನಬೇಕು. ಸುರ-ಅಸುರರ ರಕ್ತ ಹಂಚಿಕೊಂಡು ಹುಟ್ಟಿದ, ತಂದೆಗೆ ತನ್ನ ಯೌವನ ಧಾರೆ ಎರೆದುಕೊಡುವ ಪುರು ನಿತ್ರಾಣಿಯಾಗಿ, ಕೆಲವೊಮ್ಮೆಯಂತೂ ಮಾತು -ಅಭಿನಯಗಳಲ್ಲಿ ವಿದೂಷಕನಂತೆ ಕಂಡು ಪ್ರೇಕ್ಷಕರು ನಗುವಂತಾದದ್ದು ರಸಪೋಷಣೆಗೆ ಭಂಗವಾಯಿತು. ಅಭಿನಯದಲ್ಲಿ ಶರ್ಮಿಷ್ಠೆಯಾಗಿ ಗಿರಜಾ ಲೋಕೇಶ್‌ಗೆ ಮೊದಲ ಪ್ರಶಂಸೆ ಸಲ್ಲಬೇಕು. ಯಯಾತಿಯಾಗಿ ನಾಗೇಶ್‌ಕಶ್ಯಪ್, ಚಿತ್ರಲೇಖೆಯಾಗಿ ವೈಜಯಂತಿ ವಿಜಯಕಾಶಿ ತಮ್ಮ ಪಾತ್ರಗಳನ್ನು ಸಮರ್ಥವಾಗಿ ನಿರ್ವಹಿಸಿದ್ದರು. ಬೆಳಕು (ಜೆ. ಲೋಕೇಶ್) ಮತ್ತು ಧ್ವನಿ (ಬಿ. ಎಸ್. ರಾಮಮೂರ್ತಿ ಮತ್ತು ನಾಗೇಶ್) ಪ್ರಯೋಗಕ್ಕೆ ಪೂರಕವಾಗಿದ್ದವು.

ಪ್ರಜಾವಾಣಿ

## DESHAPREMI SURAPURA VENKATAPPA NAYAKA

### Backed by Technical Brillance

Venkatappa Nayaka of Surapura is one of the many unsung heroes who became Martyrs for the country's freedom. His name does not even find a mention in many text books on Karnataka history. Those which do mention him, sum up his heroic struggle against the British in a brief paragraph.

But Venkatappa receives the recognition long due to him in 'Deshapremi Surapura Nayaka' staged by Ranganiranthara at Ravindra Kalakshetra recently. The play was directed by C. G. Krishnaswamy for the participants of a theatre workshop conducted by the group. `Deshapremi...' marks poet, K. M. Munikrishnappa's debut as playwright.

conceived as folk narrative rendered by a couple of wandering bards - Kalajnanai and Sudugadu Sidda - who are believed to poses prophetic powers, the story of Venkatappa's brief and stormy life is pieced together through narration and flash-backs. Through frequent parallels drawn from Tippu's life, the narrations, present Venkatappa as Tippu's true heir in the freedom struggle.

The play - proper begins with the announcement of Venkatappa's birth and the prophecy that he will not outlive 24th year. This is followed by a fascinating ritual during which the child is placed on a bed of supposedly a thousand naked swords (which for obvious reasons had been reduced to half a dozen knives fixed to square stands) in order to prepare him for the wounds he is going to receive.

His father's early death leaves this fearless `Beda' prince in the care of the British political agent, Meadows Taylor, for whom he develops a deep attachment, much to the concern of his mother and the people of his community. Queen Ishawaramma, a fiercely independent woman, who refuses to take orders from the British, is cunningly got-rid of.

On coming of age, the Enlish-educated prince takes over the reins of the kingdom and surprises everyone by ordering his 'Appaji', Meadows Taylor, out of Surapura. Strategically placed between Hyderabad and Maratha provinces (Surapura is in Gulbarga District), Venkatappa tries to unite the Nizam, the Peshwas and the other Southern kings against the British. But he is treacherously betrayed by his own relatives and minister. He is cunningly imprisoned by the British and dies in captivity.

Though Venkatappa's death is recorded in the history Books as suicide, the narrators suggest that there must have been some foul play.

The most striking aspect of Ranganiranthara's production is the lovely suggestive set designed by Shashidhara Adapa and Jayadev. The grey columns and the arches ae majestic without being showy. Whenever the British are in control of the situation, the statue of Hanuman in the background is replaced by that of the British Queen. Though both the statues are equally lovely, one could not understand the use of Hanuman instead of Venugopala (Krishna), the diety frequently invoked by the royal family and the citizens of Surapura.

Another piece of great artistic beauty is the authentic looking `Veeragallu' (Stone edict erected in the memory of heroes) Venkatappa carves for himself. (But chisel?) The gauze curtain which separates the past from the present, and the narrators from the Characters, has beautiful charcoal drawings depicting the town ruins' (Art : Sudesh Mahan, Jayadev and Raghu).

The battle scene is projected through a slide and supplemented with the martial sounds of Kamsale. The play is thus an interesting mixture of the traditional arts and modern technology.

As far as acting is concerned `Deshapremi' has the achieveness of a workshop production full of novices. Manjunath has the looks and energy Venkatappa's characteristics, but sounds more like an angry young man rather than a clever strategist. His costumes ae far too elegent for a tribal prince. Shailaja, one of the more experienced among the cast, fares well as the courageous Queen, except for the

monotony of her costume. Marudaiah and Shivakumar, who play the two narrators Kaljnani and Sudugadu Sidda, manage the long narrative passages and the dance-steps quite competently. If their narration appears to intrude on the action, the fault is in the script which fails to integrate the two in a satisfactory manner.

Though powerful in places, the script has other weakness too. `The frequent reference to Tippu appear rather forced. Many of the exceptions roused remain unfulfilled. After all the fuss made about Venkatappa's horoscope, we only have very ineffective speech by Meadows about how he is going to use it. The audience cannot help feeling cheated by the tame concluding scene.

The flag dance at the beginning is colourful (Choreography : Krishnamurthy Kavattar). The musicians Satishchandra, Harish Govind Mysore, Poornanand and Premanath - make their powerful presence felt throughout the play. The music, though deafening at times, is an attractie mixture of vigourous folk rhythms and melodious humming of classical tunes. Ramesh and Vishwanath do a pretty good job with the lights.

On the whole, `Deshapremi...' has the technical brilliance, energy and loudness characteristic of typical CGK production.


*Smt. Laxmi Chandrashekar, The Hindu 9.2.1996*



ಕಣ್ಮಣಿಗಳಂತಿರುವ ಕರುಳಬಳ್ಳಿಗಳೊಂದಿಗೆ ಸಿಜಿಕೆ ದಂಪತಿಗಳು



ಕಾಲುಗಳ ಆಪರೇಷನ್ ನಂತರ
ಧರಿಸಿದ ಕಂಬಿ ಬೂಟುಗಳೊಂದಿಗೆ
ತಾಯಿಯೊಂದಿಗೆ ಸಿಜಿಕೆ



ಗಾಂಧಿಬಜಾರಿನ ರೂಮಿನ
ಮುಂದೆ ಸೆಂಟ್ರಲ್ ಕಾಲೇಜ್
ಹೋರಾಟಗಾರ ಸಿಜಿಕೆ




ಮೂರನೇ ರಂಗಭೂಮಿ ತಂತ್ರಗಳ ಮಾಂತ್ರಿಕ ಬಾದಲ್ ಸರ್ಕಾರ್ ಜತೆ ಸಿಜಿಕೆ



ಮಾಜಿ ಪ್ರಧಾನಮಂತ್ರಿ ಚಂದ್ರಶೇಖರ್ ಅವರೊಂದಿಗೆ ಸಿಜಿಕೆ ಮನವಿ, ಚರ್ಚೆ




ಸಿಜಿಕೆ ನಾಟಕ ಅಕಾಡೆಮಿ ಅಧ್ಯಕ್ಷರಾಗಿದ್ದಾಗ ಸಾಣೇಹಳ್ಳಿಯಲ್ಲಿ ನಡೆದ ಗುಬ್ಬಿವೀರಣ್ಣ ಪ್ರಶಸ್ತಿ ಪ್ರದಾನ ಸಮಾರಂಭದ ಒಂದು ದೃಶ್ಯ. ಗುಬ್ಬಿವೀರಣ್ಣ ಪ್ರಶಸ್ತಿ ವಿಜೇತರ ಸಮ್ಮಿಲನದ ರೂವಾರಿ ಶ್ರೀಶ್ರೀಶ್ರೀ ಪಂಡಿತಾರಾಧ್ಯ ಸ್ವಾಮೀಜಿಯವರು ಸಾಣೇಹಳ್ಳಿ



'ಸಮುದಾಯ'ದ 'ಬೆಲ್ಚಿ' ಬೀದಿ ನಾಟಕದ ಒಂದು ದೃಶ್ಯ, ಚಳ್ಳಕೆರೆ




'ರುಡಾಲಿ' ಟಿಕೇಟ್ ಬಿಡುಗಡೆ ಸಮಾರಂಭದಲ್ಲಿ ಸಿ. ಚಂದ್ರಶೇಖರ್, ಶಾಂತರಸ,
ಆರ್.ಎಂ. ಹಡಪದ್, ಚಿ.ಸು. ಕೃಷ್ಣಸೆಟ್ಟಿಯೊಂದಿಗೆ ಸಿಜಿಕೆ




ಹಂಪಿ ಕನ್ನಡ ವಿ.ವಿ.ಯಲ್ಲಿ ವಿಸಿಟಿಂಗ್ ಪ್ರೊಫೆಸರ್ ಆಗಿ ಸಿಜಿಕೆ, ಕುಲಪತಿ ಕಂಬಾರರೊಂದಿಗೆ




‘ಒಡಲಾಳ’ದ ಕಳ್ಳೇಕಾಯಿ ತಿನ್ನುವ ದೃಶ್ಯದಲ್ಲಿ ಉಮಾಶ್ರೀ ಅಭಿನಯಿಸಿದ್ದ ಸಾಕವ್ವನ ಪರಿವಾರ




ರಾಷ್ಟ್ರೀಯ ಪ್ರಶಸ್ತಿ ಪಡೆದ
ಶಿವರುದ್ರಯ್ಯನವರ ಪ್ರಥಮ
ಛಾಯಾಚಿತ್ರ. ಸಿಜಿಕೆ ನಿರ್ದೇಶನದ
ಎಚ್.ಎಸ್. ಶಿವಪ್ರಕಾಶರ
‘ಶೇಕ್ಸ್‌ಪಿಯರ್ ಸ್ವಪ್ನ ನೌಕೆ’ಯಲ್ಲಿ
ಶ್ರೀನಿವಾಸ ಮೇಷ್ಟ್ರು ಮತ್ತು ಕಲ್ಪನ



‘ರಂಗಸಂಪದ’ ಅಭಿನಯದ ‘ನೀಗಿಕೊಂಡ ಸಂಸ’ ನಾಟಕದಲ್ಲಿ ನಾಗಾಭರಣ, ಗಂಗಾಧರ್, ಲಿಂಗರಾಜು, ಅಪ್ಪಯ್ಯ, ಆ.ನ. ರಮೇಶ್. ನಿರ್ದೇಶನ : ಸಿಜಿಕೆ



‘ಮಹಾಚೈತ್ರ’ ನಾಟಕದಲ್ಲಿ ರಂಗಸ್ವಾಮಿ ಮತ್ತು ಇತರರು, ವಿ. : ಸಿಜಿಕೆ



ಸಿಜಿಕೆ ನಿರ್ದೇಶನದ 'ಒಡಲಾಳ' ನಾಟಕ. ರಂಗವಿನ್ಯಾಸ : ಶಶಿಧರ್ ಅಡಪ

# ಸಿ. ಜಿ. ಕೃಷ್ಣಸ್ವಾಮಿ
# ಜೀವನದ ಪ್ರಮುಖ ಮಾಹಿತಿಗಳು

**1. ವೈಯಕ್ತಿಕ ವಿವರಗಳು**

| | | | |
|---|---|---|---|
| 1.1 | ಹುಟ್ಟಿದ ಸ್ಥಳ ಮತ್ತು ದಿನಾಂಕ | : | ಮಂಡ್ಯ. 27. 06. 1950 |
| 1.2 | ತಂದೆ, ತಾಯಿಯ ಹೆಸರು | : | ಗೋವಿಂದ ನಾಯ್ಕ, ತಿಮ್ಮಾಜಮ್ಮ. |
| 1.3 | ಪೋಲಿಯೋ ಅಘಾತ | : | ಮೂರು ವರ್ಷದ ಮಗುವಾಗಿದ್ದಾಗ ಪೋಲಿಯೋಗೆ ತುತ್ತಾಗಿ ಎರಡು ಕಾಲುಗಳ ಊನ. |
| 1.4. | ಶಾಲಾ ವಿದ್ಯಾಭ್ಯಾಸ | : | ಮಂಡ್ಯ |
| 1.5 | ಕಾಲೇಜು ವಿದ್ಯಾಭ್ಯಾಸ | : | ನ್ಯಾಷನಲ್ ಕಾಲೇಜು , ಬೆಂಗಳೂರು. |
| 1.6 | ಆನರ್ಸ್ ಮತ್ತು ಸ್ನಾತಕೋತ್ತರ ಶಿಕ್ಷಣ | : | ಸೆಂಟ್ರಲ್ ಕಾಲೇಜು, ಬೆಂಗಳೂರು. |
| 1.7 | ಪದವಿಗಳು | : | ಬಿ. ಎ. ಆನರ್ಸ್ ; ಎಂ. ಎ. ಅರ್ಥಶಾಸ್ತ್ರ |
| 1.8 | ಉದ್ಯೋಗ | : | ಟೆಕ್ನಿಕಲ್ ಅಸಿಸ್ಟೆಂಟ್ ಐಸೆಕ್ ಬೆಂಗಳೂರು<br>ರಿಸರ್ಚ್ ಅಸಿಟ್ಟೆಂಟ್ ಬೆಂಗಳೂರು ವಿಶ್ವವಿದ್ಯಾಲಯ |
| 1.9 | ಪ್ರಸ್ತುತ | : | ಪ್ರಾಧ್ಯಾಪಕರು, ಬೆಂಗಳೂರು ವಿಶ್ವವಿದ್ಯಾಲಯ. |
| 1.10 | ಹೃದಯಾಘಾತ | : | 19-7-2001 |

**2. ಸಾಂಸ್ಕೃತಿಕ ಸಂಘಟನೆ ಮತ್ತು ರಂಗಭೂಮಿಗೆ ಸಂಬಂಧಿಸಿದಂತೆ ಗಳಿಸಿದ ಸ್ಥಾನಮಾನಗಳು ಮತ್ತು ವಹಿಸಿದ ಪಾತ್ರ.**

| | | |
|---|---|---|
| 2.1 | 'ಸಮುದಾಯ' ಸಂಘಟನೆಯ ಸ್ಥಾಪಕ ಸ್ಥಾಪಕ ಕಾರ್ಯದರ್ಶಿ | 1974-1980 |
| 2.2 | ಇಂದಿರಾಗಾಂಧಿಯವರು ಚಿಕ್ಕಮಗಳೂರು | 1978 |

ಉಪಚುನಾವಣೆಯಲ್ಲಿ ಲೋಕ ಸಭೆಗೆ ಸ್ಪರ್ಧಿಸಿದ್ದಾಗ ಅವರ ವಿರುದ್ಧ ಫ್ಯಾಸಿಸ್ಟ್ ವಿರೋಧಿ ಸಾಂಸ್ಕೃತಿಕ ರ್‍ಯಾಲಿ ಏರ್ಪಡಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದು.

| | | |
|---|---|---|
| 2.3 | ಬಂಡಾಯ ಸಾಹಿತ್ಯ ಸಂಘಟನೆಯ ಸ್ಥಾಪಕ ಕಾರ್‍ಯದರ್ಶಿ. | 1979 |
| 2.4 | 'ಸಮುದಾಯ' ಸಾಂಸ್ಕೃತಿಕ ಸಂಘಟನೆ ಕರ್ನಾಟಕ ರಾಜ್ಯಾದ್ಯಂತ ನಡೆಸಿದ ಸಾಂಸ್ಕೃತಿಕ ಜಾಥಾದ ನಾಯಕತ್ವ ವಹಿಸಿದ್ದು. | 1979 |
| 2.5 | ಕರ್ನಾಟಕ ರಂಗಭೂಮಿ ಕ್ರಿಯಾ ಸಮಿತಿಯ ಸ್ಥಾಪಕ ಕಾರ್ಯದರ್ಶಿ. | 1983 |
| 2.6 | ಸೋವಿಯಟ್ ರಷ್ಯಾದ ಲೆನಿನ್ ಗ್ರಾಡ್‌ನಲಿ ನಡೆದ ಸ್ಟ್ಯಾನ್‌ಸ್ಲಾವ್‌ಸ್ಕಿ ಅಂತರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಭಾರತವನ್ನು ಪ್ರತಿನಿಧಿಸಿದ್ದು. | 3-10-1984 |
| 2.7 | ನವದೆಹಲಿಯ ಸಂಗೀತ ನಾಟಕ ಅಕೆಡಮಿ ಏರ್ಪಡಿಸಿದ್ದ ದಕ್ಷಿಣ ವಲಯ ನಾಟಕೋತ್ಸವದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದು. | 1984 |
| 2.8 | 'ರಂಗನಿರಂತರ' ದ ಸ್ಥಾಪಕ ಅಧ್ಯಕ್ಷ 1986 | |
| 2.9 | ದಕ್ಷಿಣವಲಯ ಸಾಂಸ್ಕೃತಿಕ ಕೇಂದ್ರದ ಸದಸ್ಯ | 1986 |
| 2.10 | ಸತತವಾಗಿ 150 ದಿನಗಳು 'ರಂಗನಿರಂತರ' ದ ಮೂಲಕ ರಂಗಪ್ರದರ್ಶನಗಳನ್ನು ನಡೆಸಿದ ಹಿರಿಮೆ | 1986 |
| 2.11 | 'ಗ್ರಾಮ ಸಮಾಜ', ಹತ್ತು ದಿನಗಳ ನಾಟಕೋತ್ಸವವನ್ನು ಯುವ ನಿರ್ದೇಶಕರಿಗಾಗಿ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಸಿದ್ದು | 24-4-1990 |
| 2. 12 | 'ಕಲಾಕ್ಷೇತ್ರಕ್ಕೆ 30' ರವೀಂದ್ರ ಕಲಾಕ್ಷೇತ್ರಕ್ಕೆ 30ವರ್ಷ ತುಂಬಿದ ಸಂದರ್ಭದಲ್ಲಿ ಎಲ್ಲಾ ಕಲೆಗಳನ್ನು ಮೇಳವಸಿ ಬೃಹತ್ ಸಾಂಸ್ಕೃತಿಕ ಉತ್ಸವೊಂದನ್ನು ಏರ್ಪಡಿಸಿದ್ದು. | 1990 |
| 2. 13 | ಕರ್ನಾಟಕ ರಂಗ ಕರ್ಮಿಗಳ ಸಂಘದ ಕಾರ್ಯದರ್ಶಿ. | |
| 2. 14 | ಕನ್ನಡ ವಿಶ್ವವಿದ್ಯಾಲಯ, ಹಂಪೆ ಇಲ್ಲಿ ಪ್ರದರ್ಶಕ ಕಲೆಗಳ ವಿಭಾಗದ ಸಂದರ್ಶಕ ಪ್ರಾಧ್ಯಾಪಕ. | 1990 |
| 2. 15 | ಅಧ್ಯಕ್ಷರು. ಕರ್ನಾಟಕ ನಾಟಕ ಅಕಾಡೆಮಿ. | 1998-2001 |

**3. ದೊರಕಿದ ಪ್ರಶಸ್ತಿಗಳು.**

| | | |
|---|---|---|
| 3.1 | ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ. | 1990 |
| 3.2 | ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ. | 1996 |
| 3.3 | ಕರ್ನಾಟಕ ಸರ್ಕಾರದ ಪ್ರಥಮ ಅಂಬೇಡ್ಕರ್ ಪ್ರಶಸ್ತಿ. | 1998 |
| 3.4 | ಶಿವರಾಮ ಕಾರಂತ ಪ್ರಶಸ್ತಿ. ಆತ್ಮಕಥೆ 'ಕತ್ತಾಲ ಬೆಳದಿಂಗಳೊಳಗೆ' ಕೃತಿಗೆ | 2003 |
| 3.5 | ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. ಆತ್ಮಕಥೆ 'ಕತ್ತಾಲ ಬೆಳದಿಂಗಳೊಳಗೆ' ಕೃತಿಗೆ | 2003 |

**4. ರಚಿಸಿದ ನಾಟಕಗಳು**

| | | | |
|---|---|---|---|
| 4.1 | ಬೆಲ್ಚಿ | 1976 | ಬೀದಿ ನಾಟಕ |
| 4.2 | ಭಾರತ ದರ್ಶನ | 1979 | ಬೀದಿ ನಾಟಕ |
| 4.3 | ಸೈಕ್ಲೋನ್ | 1979 | ಬೀದಿ ನಾಟಕ |
| 4.4 | ಪಂಚತಾರಾ | 1980 | ಬೀದಿ ನಾಟಕ |
| 4.5 | ಮೇ ಡೇ | 1980 | ಬೀದಿ ನಾಟಕ |
| 4.6 | ಅಲ್ಲೇ ಇದ್ದೋರು | 1982 | ಬೀದಿ ನಾಟಕ |
| 4.7 | ಒಡಲಾಳ | 1983 | ದೇವನೂರ ಮಹಾದೇವ ಅವರ ನೀಳ್ಗತೆಯ ನಾಟಕ ರೂಪ |
| 4.8 | ಅಬ್ಬೋಲಿನ | 1987 | ಯಶವಂತ ಚಿತ್ತಾಲರ ಕಥೆಯ ನಾಟಕ ರೂಪ |
| 4.9 | ಕಳ್ಳಿಯಲ್ಲಿ ಕೆಂಪುಹೂವು | 1990 | ಕೇಶವರೆಡ್ಡಿ ಹಂದ್ರಾಳ ಅವರ ಸಣ್ಣಕಥೆಯ ನಾಟಕ ರೂಪ. |
| 4.10 | ದೌಡ್ ಗಾಂಧಿ | 2003 | ಬೀದಿ ನಾಟಕ |
| 4.11 | ದೇವರ ಮುಂದೆ ಕಾದು ಕುಂತ ಬಸವ | 2003 | ಬೀದಿ ನಾಟಕ |

5. ನಿರ್ದೇಶಿಸಿದ ನಾಟಕಗಳು

| | ನಾಟಕ | ಲೇಖಕ/ರೂಪಾಂತರ/ ಅನುವಾದ | ತಂಡ | ವರ್ಷ |
|---|---|---|---|---|
| 5.1 | ನೆಲಮುಟ್ಟಿದ ಹೊಟ್ಟೆಪ್ಪ | ರಚನೆ : ಸಿ. ವೀರಣ್ಣ | ನ್ಯಾಷನಲ್ ಕಾಲೇಜ್ ಬಸವನಗುಡಿ | 1974 |
| 5.2 | ಪಂಚಮ | ಡಾ. ಸಿದ್ಧಲಿಂಗಯ್ಯ | 'ಸಮುದಾಯ' ತುಮಕೂರು | 1975 |
| 5.3 | ಚಿಕ್ಕದೇವಭೂಪ | ಲಿಂಗದೇವರು ಹಳೆಮನೆ | ಪ್ರಜಾವಾಣಿ ಕಾರ್ಮಿಕರ ಸಂಘ | 1982 |
| 5.4 | ಸನ್ನಿವೇಶ | ಬಿ. ವಿ. ವೈಕುಂಠರಾಜು | ರಂಗಸಂಪದ | 1982 |
| 5.5 | ಯಯಾತಿ | ಗಿರೀಶ್ ಕಾರ್ನಾಡ | ರಂಗಸಂಪದ | 1984 |
| 5.6 | ಒಡಲಾಳ | ದೇವನೂರ ಮಹಾದೇವ/ ಸಿ. ಜಿ. ಕೆ. | ರಂಗಸಂಪದ | 1984 |
| 5.7 | ಮಹಾಚೈತ್ರ | ಎಚ್. ಎಸ್. ಶಿವಪ್ರಕಾಶ್ | ರಂಗಸಂಪದ | 1985 |
| 5.8 | ಸುಲ್ತಾನ್ ಟಿಪ್ಪು | ಎಚ್. ಎಸ್. ಶಿಪ್ರಕಾಶ್ | ರಂಗಸಂಪದ | 1985 |
| 5.9 | ಮತ್ತೆ ಮಹಂಜದಾರೋ | ಪಾಲ್ ಸುದರ್ಶನ್ | ಯವನಿಕಾ ಕಾಸರಗೋಡು | 1985 |
| 5.10 | ಶೇಕ್ಸಪಿಯರನ ಸ್ವಪ್ನ ನೌಕೆ | ಎಚ್. ಎಸ್. ಶಿವಪ್ರಕಾಶ್ | ರಂಗಸಂಪದ | 1987 |
| 5.11 | ನೀಗಿಕೊಂಡ ಸಂಸ | ಕಿ. ರಂ. ನಾಗರಾಜ್- | ರಂಗಸಂಪದ | 1987 |
| 5.12 | ಅಂಕೆ ತಪ್ಪಿದ ಶಂಕರ್‌ಲಾಲ್ | ಮೂಲ : ಬರ್ಟ್ರೋಲ್ಟ್ ಬ್ರೆಕ್ಟ್ ಅನು: ಕೆ. ವಿ. ನಾರಾಯಣ | ಸಂಚಯ ಬೆಂಗಳೂರು | |
| 5.13 | ಫಾದರ್ | ಮೂಲ: ಸ್ಟ್ರಿಂಡ್‌ಬರ್ಗ್ ಅನುವಾದ: ಸಿ. ನಾಗಣ್ಣ | ಸಮುದಾಯ ಮೈಸೂರು | |
| 5.14 | ಕಾಲಜ್ಞಾನಿ ಕನಕ | ಕಿ. ರಂ. ನಾಗರಾಜ್ | ರಂಗನಿರಂತರ | 1988 |

| | | | | |
|---|---|---|---|---|
| 5.15 | ಜೂಲಿಯಸ್ ಸೀಸರ್ | ಮೂಲ : ಶೇಕ್ಸಪಿಯರ್<br>ಅನುವಾದ: ಕೆ. ಎಸ್.<br>ಭಗವಾನ್ | ಮೈಕೋ<br>ಲಲಿತ<br>ಕಲಾಸಂಘ | |
| 5.16 | ತುಘಲಕ್ | ಗಿರೀಶ್ ಕಾರ್ನಾಡ | ಬಿ.ಇ.ಎಂ.ಎಲ್.<br>ಕೆ. ಜಿ. ಎಫ್. | |
| 5. 17 | ಮದರ್‌ಕರೇಜ್ | ಮೂಲ : ಬರ್ಟೋಲ್ಟ್<br>ಬ್ರೆಕ್ಟ್<br>ಅನು : ಲಿಂಗದೇವರು<br>ಹಳೆಮನೆ | ಸಮುದಾಯ<br>ಮೈಸೂರು | 1988 |
| 5. 18 | ಕುಸುಮಬಾಲೆ<br>(ವಾಚಿಕಾಭಿನಯ) | ದೇವನೂರು ಮಹಾದೇವ | ರಂಗನಿರಂತರ | |
| 5. 19 | ದೇಶಪ್ರೇಮಿ ಸುರಪುರ<br>ವೆಂಕಟಪ್ಪನಾಯಕ | ಕೆ. ಎಂ. ಮುನಿಕೃಷ್ಣಪ್ಪ, | ರಂಗನಿರಂತರ | 1996 |
| 5. 20 | ವೈಶಂಪಾಯನ ತೀರ | ಮೂಲ: ಮಹಾಬಲಮೂರ್ತಿ<br>ಕೊಡ್ಲಿಕೆರೆ<br>ನಾಟಕ ರೂಪ :<br>ಎಲ್. ಎನ್.<br>ಮುಕುಂದರಾಜ್ | ಹಂದರ,<br>ಬೆಂಗಳೂರು | 1996 |
| 5. 21 | ಬೇಲಿ ಮತ್ತು ಹೊಲ | ಕುಂ. ವೀರಭದ್ರಪ್ಪ | ಮೈಕೋ<br>ಲಲಿತ<br>ಕಲಾಸಂಘ | 1996 |
| 5.22 | ಅಂಬೇಡ್ಕರ್ | ಎಲ್. ಹನುಮಂತಯ್ಯ | ಸಮುದಾಯ<br>ಬೆಂಗಳೂರು | 1998 |
| 5.23 | ರುಡಾಲಿ | ಮೂಲ: ಮಹಾಶ್ವೇತಾದೇವಿ<br>ನಾಟಕ ರೂಪ:<br>ದೀಪಾ ಗಣೇಶ್ | ಸಮುದಾಯ,<br>ಬೆಂಗಳೂರು | 1998 |
| 5. 24 | ಚಕೋರಿ | ಚಂದ್ರಶೇಖರ ಕಂಬಾರರ<br>ಕಾವ್ಯ.<br>ಸಿ.ಜಿ.ಕೆ./ಮುನಿಶಾಮಪ್ಪ | ಮೈಕೋ<br>ಲಲಿತಕಲಾ<br>ಸಂಘ | |

| | | | | |
|---|---|---|---|---|
| 5.25 | ತಬರನ ಕಥೆ | ಪೂರ್ಣಚಂದ್ರ ತೇಜಸ್ವಿ | ಗೆಳೆಯರ ಬಳಗ ಮಂಡ್ಯ | |
| 5.26 | ಒಥೆಲೊ | ಮೂಲ: ಶೇಕ್ಸಪಿಯರ್ ಅನು: ಕೆ. ಎಸ್. ಭಗವಾನ್ | ರಂಗಾಯಣ, ಮೈಸೂರು | 1999 |
| 5.27 | ಶೋಕಚಕ್ರ | ಶ್ರೀರಂಗ | ಶಿವಸಂಚಾರ | |
| 5.28 | ದಂಡೆ | ಕಾ. ತ. ಚಿಕ್ಕಣ್ಣ ನಾಟಕ ರೂಪ : ಎಸ್. ಜಿ. ಸಿದ್ಧರಾಮಯ್ಯ | ಸಮುದಾಯ ಬೆಂಗಳೂರು | 2003 |
| 5.29 | ಸೋರುತಿಹುದು ಮನೆಯ ಮಾಳಿಗಿ | ಬೆಳಕೆರೆ ಮಂಜುನಾಥ್ | ಶಿವಸಂಚಾರ | 2003 |

6. ಬೀದಿ ನಾಟಕಗಳ ನಿರ್ದೇಶನ

| | | |
|---|---|---|
| 6.1 | ಬೆಲ್ಚಿ | 1978 |
| 6.2 | ಭಾರತ ದರ್ಶನ | 1979 |
| 6.3 | ಅಲ್ಲೇ ಇದ್ದೋರು | 1982 |

7 ರಂಗ ತರಬೇತಿ/ ಕಾರ್ಯಾಗಾರಗಳ ನಿರ್ದೇಶನ

| | | |
|---|---|---|
| 7.1 | ಬೆಂಗಳೂರಿನ ಮೈಕೋದಲ್ಲಿ | 1986 |
| 7.2 | ಕೆ. ಜಿ. ಎಫ್. ನ ಬಿ. ಇ. ಎಂ. ಎಲ್. ನಲ್ಲಿ | 1983 |
| 7.3 | ಬೆಂಗಳೂರಿನ ಎನ್. ಜಿ. ಇ. ಎಫ್. ನಲ್ಲಿ | 1989 |
| 7.4 | ವಿದ್ಯಾರ್ಥಿ ಕಾರ್ಯಾಗಾರ - 'ಪ್ರಯೋಗ ರಂಗ'ದ ಆಶ್ರಯದಲ್ಲಿ | 1990-1991 |
| 7.5 | ಸಂಚಯ, ಸೂತ್ರಧಾರ, ರಂಗಸಂಪದ, ರಂಗನಿರಂತರ, ಮೈಸೂರಿನ ಸಮುದಾಯ, ಪೊನ್ನಂಪೇಟೆಯ ಸೃಷ್ಟಿ, ಕೊಡಗು ರಂಗ ತಂಡಗಳಿಗೆ | |

7.6 ಪ್ರೌಢಶಾಲೆಯ ಅಧ್ಯಾಪಕರಿಗೆ - ಕನ್ನಡ ವಿಶ್ವವಿದ್ಯಾಲಯದ ಆಶ್ರಯದಲ್ಲಿ.

7.7 ಸಿರಿಗೆರೆಯ 'ಶಿವಸಂಚಾರ'ತಂಡಕ್ಕೆ 2002-2003

**8. ಬ್ಯಾಕ್‌ಸ್ಟೇಜ್ ಸಲಹೆಗಾರನಾಗಿ ನಿರ್ವಹಿಸಿದ ಕಾರ್ಯ**

8. 1 ನವದೆಹಲಿಯ ಸಂಗೀತ ನಾಟಕ ಅಕಡೆಮಿಯ ಬಹುಮಾನ ವಿತರಣೆ ಕಾರ್ಯಕ್ರಮಗಳು

8. 2 ಬೆಂಗಳೂರಿನಲ್ಲಿ 1992ರಲ್ಲಿ ಜರುಗಿದ 'ನೃತ್ಯೋತ್ಸವ' ಕಾರ್ಯಕ್ರಮ.

8. 3 ಕರ್ನಾಟಕ ನಾಟಕ ಅಕೆಡಮಿಯ ಹಲವಾರು ಕಾರ್ಯಕ್ರಮಗಳು

8. 4 ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯಕ್ರಮಗಳು

8. 5 ಬೆಂಗಳೂರು ಸುಚಿತ್ರ ಫಿಲಂ ಸೊಸೈಟಿಯ ಪೀರ್ ರಂಗಮಂದಿರ ವಿನ್ಯಾಸ

8. 6 ಮಂಡ್ಯದ ಕೆ. ವಿ. ಶಂಕರೇಗೌಡ ಸಭಾಂಗಣ ವಿನ್ಯಾಸ

8. 7 ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿಯ ಕಾರ್ಯಕ್ರಮಗಳು

8. 8 ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಲಯ ಕಟ್ಟಡಕ್ಕೆ ಬೆಳಕು ವಿನ್ಯಾಸ ಮತ್ತು ಸಭಾಂಗಣಕ್ಕೆ ಬೆಳಕು ಮತ್ತು ಧ್ವನಿ ವ್ಯವಸ್ಥೆಯ ವಿನ್ಯಾಸ.

**9. ಚಲನಚಿತ್ರ ರಂಗದ ಜೊತೆ**

9.1 'ಭುಜಂಗಯ್ಯನ ದಶಾವತಾರಗಳು' ಪ್ರಶಸ್ತಿ ವಿಜೇತ ಚಿತ್ರದ ಸಹ ನಿರ್ದೇಶಕ ಮತ್ತು ಸಂಭಾಷಣೆ ರಚನೆ

9.2 'ವೀರಪ್ಪನ್' ಪ್ರಶಸ್ತಿ ವಿಜೇತ ಚಿತ್ರಕ್ಕೆ ಕಥೆ, ಚಿತ್ರಕಥೆ, ಮತ್ತು ಸಂಭಾಷಣೆ ರಚನೆ

9.3 'ಸಾಂಗ್ಲಿಯಾನ' ಚಿತ್ರಕ್ಕೆ ಸಂಭಾಷಣೆ ರಚನೆ.

**10. ಅಭಿನಂದನಾ ಸಮಾರಂಭಗಳು**

10.1 ಸ್ವಂತ ಊರು ಚಳ್ಳಕೆರೆಯಲ್ಲಿ ಅಭಿನಂದನೆ

10. 2 50 ತುಂಬಿದ ಸಂದರ್ಭ, ಹೊಸಪೇಟೆಯಲ್ಲಿ ಗೆಳೆಯರಿಂದ ಸಂಭ್ರಮದ ಆಚರಣೆ. ಸಿಗರೇಟ್ ಸೇದೋದು ಬಿಟ್ಟಿದ್ದು.

**11. ಬೆಳಕಿನ ವಿನ್ಯಾಸ ಮಾಡಿದ ನಾಟಕಗಳು**

| | ನಾಟಕ | ನಾಟಕಕಾರ | ನಿರ್ದೇಶನ | ತಂಡ |
|---|---|---|---|---|
| 11.1 | ಬಹದ್ದೂರ್ ಗಂಡು | ಪರ್ವತವಾಣಿ | ಉಮೇಶರುದ್ರ | |
| 11.2 | ಗೆಲಿಲಿಯೋ | ಬಟ್ರೋಲ್ಟ್ ಬ್ರೆಕ್ಟ್ | ಪ್ರಸನ್ನ | ಸಮುದಾಯ ಬೆಂಗಳೂರು |
| 11.3 | ಹಯವದನ (ನೃತ್ಯ ನಾಟಕ) | | ಉಮೇಶ ರುದ್ರ | |
| 11.4 | ನಾಟ್ಯಸೌರಭ | | | |
| 11.5 | ದಂಗೆಯ ಮುಂಚಿನ ದಿನಗಳು | ಪ್ರಸನ್ನ | ಪ್ರಸನ್ನ | ಸಮುದಾಯ ಬೆಂಗಳೂರು |
| 11.6 | ಆಸ್ಫೋಟ | ಟಿ. ಎನ್. ಸೀತಾರಾಂ | | |
| 11.7 | ಹರಕೆಯ ಕುರಿ | ಚಂದ್ರಶೇಖರ ಕಂಬಾರ | | |
| 11.8 | ಟಿಪಿಕಲ್ ಟಿ. ಪಿ. ಕೈಲಾಸಂ | ಟಿ. ಎನ್. ನರಸಿಂಹನ್ | | |
| 11.9 | ಪ್ರೇತದ್ವೀಪ | | | |

**12.** **ಆತ್ಮಕಥೆ ಪ್ರಕಟಣೆ** ಕತ್ತಾಲೆ ಬೆಳದಿಂಗಳೊಳಗ 2002

**13.** **ಅಭಿನಂದನಾ ಗ್ರಂಥ** 1996

ರಂಗಭೂಮಿಯ ಅಂತರಂಗ ಸಿ. ಜಿ. ಕೆ.

(ಹಂದರ - 16 ; ಸಿ. ಜಿ. ಕೆ. 46. ನಾಟಕೋತ್ಸವ ಸಂದರ್ಭದಲ್ಲಿ ಹೊರತಂದ ಕೃತಿ)